Statement of the Chief Minister *re* : Local Candidates —Absorption of

ಶ್ರೀ ಡಿ. ದೇವರಾಜ ಅರಸ್ (ಮುಖ್ಯಮಂತ್ರಿಗಳು).—ಲೋಕರ್ ಕಾನ್‌ಡಿಡೇಟ್ಸ್ ಬಗ್ಗೆ ಕೇಳುತ್ತಾ ಇದ್ದಾರೆ. ನಾನು ಅದನ್ನು ಗಮನಿಸಿದ್ದೇನೆ. ಮತ್ತು ಅವರನ್ನು ಮುಂದುವರಿಸುವುದಕ್ಕೆ ಆರ್ಡರ್ ಮಾಡಿದ್ದೇನೆ. ಇದು ಕಾಂಪ್ಲಿಕೇಟೆಡ್ ಇಷ್ಯೂ ಇದೆ, ಆದರಿಂದ ಸಹಾನುಭೂತಿಯಿಂದ ನೋಡುತ್ತೇನೆ ಎಂದು ಹೇಳಿದ್ದೇನೆ. ಶ್ರೀ ಕೊಣಂದೂರು ಲಿಂಗಪ್ಪನವರು ಪದೇ ಪದೇ ಕೆಲಸದಲ್ಲಿ ಇರುವವರ ಮೇಲೆ ಸಹಾನುಭೂತಿ ತೋರಿಸಿದರೆ ಕೆಲಸ ಇಲ್ಲದೆ ಇರುವವರೂ ಇದ್ದಾರೆ? ಇವರನ್ನು ತೆಗೆದುಕಾಕಿದರೆ ಇನ್ನೂ 2 ಸಾವಿರ ಜನ ಬಂದೇ ಬರುತ್ತಾರೆ. ಖಾಲಿ ಇರಬೇಕು ಎಂದು ಅಲ್ಲ. So many issues are involved. ಬ್ಯಾಕ್‌ವರ್ಡ್ ಕ್ಲಾಸ್ ಬರಬೇಕು, ಷೆಡ್ಯೂಲ್ ಕ್ಯಾಸ್ಟ್ ರೆಪ್ರಜನಟೇಪನ್ ಎಷ್ಟು ಇದೆಯೋ ಎಂದು ನೋಡಬೇಕು. ಇದು ಎಲ್ಲಾ ನೋಡಿ ಮಾಡಬೇಕು ಅಲ್ಲವೇ? ಒಂದೇ ಕಡೆ ವಿಚಾರ ಹೇಳಿ ವಾದ ಮಾಡಬೇಡಿ. He will also agree with me.

Sri KAGODU THIMMAPPA.—Definitely.

Motion of Thanks to the Governor's Address

(Debate Continued)

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ ಒಂದು ಭೇದದ ವಿಷಯ, ದುಃಖ ಆಗಿರತಕ್ಕ ವಿಷಯ, ರಾಜ್ಯಪಾಲರ ಭಾಷಣವನ್ನು ಯಾರೊಬ್ಬರು ಓದಿದರೂ ನನಗೆ ಅನ್ನಿಸುತ್ತದೆ. ಇದಕ್ಕೆ ನಿಜವಾಗಿ ವಂದನೆಯನ್ನು ಸಲ್ಲಿಸುತ್ತಾರೆಯೇ ಎಂದು. ಇಷ್ಟಾದರೂ ಕೂಡ ಆ ಕಡೆ ಕುಳಿತಿರತಕ್ಕ ನಮ್ಮ ಮಾನ್ಯ ಸದಸ್ಯರ ಹೈಕೆ ಒಬ್ಬರು ಅದಕ್ಕೆ ವಂದನಾ ನಿರ್ಣಯವನ್ನು ಸೂಚನೆ ಮಾಡಿದ್ದಾರೆ. ಮಾನ್ಯ ಸದಸ್ಯರಾದ ಶೆಟ್ಟರು ಅದಕ್ಕೆ ಅನುಮೋದನೆಯನ್ನು ಕೊಟ್ಟಿದ್ದಾರೆ. ಶೆಟ್ಟರಂಥ ವಿಚಾರ ವಾದಿಗಳು ವೈಚಾರಿಕ ವಿಷಯಗಳಿಗೆ ಗಮನ ಕೊಡತಕ್ಕಂಥ ಮನಸ್ಸು ಇರತಕ್ಕ ವ್ಯಕ್ತಿಗಳು ಇದಕ್ಕೆ ಬೆಂಬಲ ಸೂಚನೆ ಮಾಡಿದ್ದಾರೆ ಎಂದರೆ ನನಗೆ ಆಶ್ಚರ್ಯವಾಗುತ್ತದೆ, ಮಾನ್ಯ ಅಧ್ಯಕ್ಷರೇ, ನಾನು ಸಂಪೂರ್ಣವಾಗಿ ರಾಜ್ಯಪಾಲರ ಭಾಷಣವನ್ನು ಓದಿದ್ದೇನೆ. ಬರಗಾಲದ ಬಗ್ಗೆ, ನೈಸರ್ಗಿಕ ತೊಂದರೆಗಳ ಬಗ್ಗೆ, ಮಳೆ ಬಗ್ಗೆ, ಹಸಿರು ಕ್ರಾಂತಿ ಬಗ್ಗೆ, ಉದ್ಯೋಗದ ಬಗ್ಗೆ, ವಿವಿಧ ವಿಷಯಗಳ ಬಗ್ಗೆ ಆರ್ಥಿಕ ಚಿಂತನೆ ಮಾಡಬಹುದಾಗಿತ್ತು. ಆದರೆ ಇದು ಮೂಲ ವಿಷಯವನ್ನು ಪ್ರಸ್ತಾಪ ಮಾಡಿ ವಿಸ್ತಾರವಾದ ವಿಷಯಗಳನ್ನು ಮೊಟಕು ಮಾಡುವ ಭಾಷಣ, ರಾಜ್ಯಾಂಗಬದ್ಧವಾಗಿ ಮಾಡಬೇಕಾದ ಪ್ರತಿವರ್ಷ ನಡೆಯಬಹುದಾದ ಭಾಷಣವೇ ವಿನಹ ಮತ್ತೆ ಬೇರೆ ವಿನೂ ಅಲ್ಲ ಎಂದು ಸ್ಪಷ್ಟವಾಗಿ ಯಾರು ನೋಡಿದರೂ ಹೇಳಬಹುದು. ಸ್ವಾಮಿ ಬರಗಾಲದ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಇದು ರಾಜ್ಯಸರಕಾರ ತಯಾರು ಮಾಡಿದ, ರಾಜ್ಯಪಾಲರು ಓದಿದ ಭಾಷಣ. ಈ ಭಾಷಣದಲ್ಲಿ ಬರಗಾಲದ ಬಗ್ಗೆ ಎಷ್ಟು ಹಣ ಕೇಂದ್ರದಿಂದ ಪಡೆದಿದ್ದಾರೆ? ಇಲ್ಲಿ ಒಂದು ಅಂಶವನ್ನು ನಾವು ಸ್ಪಷ್ಟವಾಗಿ ಗಮನಿಸಬೇಕು. ಬರಗಾಲ ಪ್ರತಿವರ್ಷ ಇದ್ದದ್ದು ಎಂದು ವಾದಮಾಡುತ್ತಾ ಇಲ್ಲ. ಬರಗಾಲ ನೈಸರ್ಗಿಕವಾಗಿ ಬಂದಿರತಕ್ಕ ವಿಷಯ ಎಲ್ಲರಿಗೂ ಗೊತ್ತಿದೆ. ಇದು ಮೈಸೂರು ರಾಜ್ಯದಲ್ಲಿ ಮಾತ್ರ ಬಂದಿರತಕ್ಕದ್ದಲ್ಲ. ಆಂಧ್ರದಲ್ಲಿ ಬಂದಿದೆ, ಮಹಾರಾಷ್ಟ್ರದಲ್ಲಿ ಬಂದಿದೆ ಮತ್ತು ಇನ್ನೂ ದೇಶದ ಅನೇಕ ರಾಜ್ಯಗಳಲ್ಲಿ ಬರಗಾಲ ಬಂದಿದೆ ಇಲ್ಲ ಎಂದು ಹೇಳುವುದಿಲ್ಲ. ಹಿಂದಿನ ಸರಕಾರ ಮಾಡಿದ ಪಾಪದ ಫಲದಿಂದ ಬರಗಾಲ ಬಂದಿದೆ ಎಂದು ಹೇಳಿ ದೇಶದ ಜನತೆಯ ಮುಂದೆ ಇಟ್ಟು ಜನರನ್ನು ನಂಬಿಸಿ ತಮ್ಮ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವುದರಿಂದ ವಿನೂ ಪ್ರಯೋಜನವಾಗುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಬಹುದು. ತಾವು ಕೇಂದ್ರದಿಂದ ಎಷ್ಟು ಹಣವನ್ನು ಪಡೆದಿದ್ದೀರಿ ಎನ್ನುವುದು ಮುಖ್ಯವಾದ ವಿಷಯ. ನನಗೆ ನೆನಪು ಇರುವುದು ಮೂರೂವರೆಕೋಟಿ ರೂಪಾಯಿ ಕೇಂದ್ರದಿಂದ ಬಂದಿದೆ ಎಂದು. ದೇಶದ ಪ್ರಧಾನ ಮಂತ್ರಿಗಳಾದ ಶ್ರೀಮತಿ ಇಂದಿರಾಗಾಂಧಿಯವರು ಆಂಧ್ರದಲ್ಲಿ ಬರಗಾಲಪೀಡಿತ ಪ್ರದೇಶಕ್ಕೆ ಬಂದಾಗ ಎರಡೂವರೆ ತಿಂಗಳ

(ಶ್ರೀ ಎಸ್. ಬಂಗಾರಪ್ಪ)

ಮುಂಚೆ ಹೈದರಾಬಾದ್ ನಿರ್ವಾಣದಲ್ಲಿ ಒಂದು ಹೇಳಿಕೆಯನ್ನು ಕೊಟ್ಟು 26 ಕೋಟಿ ರೂಪಾಯಿಗಳು ಕೇಂದ್ರಸರಕಾರದಿಂದ ಮಂಜೂರು ಆಗುತ್ತದೆ ಎಂದು ಹೇಳಿದರು. ಮಹಾರಾಷ್ಟ್ರದಲ್ಲೂ ಬರಗಾಲ ಬಂದಿದೆ, ಅಲ್ಲಿಗೂ ಸಹ ಕೇಂದ್ರದಿಂದ ಸಹಾಯ ಮಾಡುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಆರ್. ಎಸ್. ಪಾಟೀಲ್ (ರಾಮದುರ್ಗ).—ಹಣ ಕೇಂದ್ರದಿಂದ ಎಷ್ಟು ಬಂತು ಎಂಬುದು ಮುಖ್ಯವೋ ಅಥವಾ ನಮ್ಮ ಸರಕಾರ ಎಷ್ಟು ಖರ್ಚುಮಾಡಿತು ಎಂಬುದು ಮುಖ್ಯವೊ?

2-00 P.M.

ಮಹಾರಾಷ್ಟ್ರದಲ್ಲಿ ಬರಗಾಲ ಬಂದಾದಕ್ಕೋಸ್ಕರ ಕೇಂದ್ರದ ಪ್ರಧಾನ ಮಂತ್ರಿಗಳು ಪಾರ್ಲಿಮೆಂಟಿನಲ್ಲಿ ಹೇಳಿಕೆ ಕೊಟ್ಟು ಎಲ್ಲ ಇರಾಖಾಧಿಕಾರಿಗಳಿಗೂ ಸೂಕ್ತವಾದ ಆದೇಶಗಳನ್ನು ಕೊಡರಾಗಿದೆ ಎಂದು ಹೇಳುತ್ತಾರೆ ಮತ್ತು ಬರಗಾಲವನ್ನು ನಿಲ್ಲಿಸುವುದಕ್ಕೆ ಶಕ್ತಿ ಮೀರಿ ಯತ್ನ ಮಾಡುತ್ತೇವೆಂದೂ ಹೇಳಿದ್ದಾರೆ. ಆದರೆ ಆದೇ ಪ್ರಧಾನ ಮಂತ್ರಿಗಳು ಮೈನೂರು ರಾಜ್ಯದಲ್ಲಿನ ಬರಗಾಲದ ಬಗ್ಗೆ ಹಿಂದೆ ಕೊಟ್ಟ ಮೂರೂವರೆ ಕೋಟಿ ರೂಪಾಯಿ ಒಂದು ಬಿಟ್ಟರೆ ಮತ್ತೆ ಬೇರೇನೂ ಇಲ್ಲಿಯವರೆಗೆ ಹೇಳಿಲ್ಲ. ರಾಜ್ಯಪಾಲರ ಭಾಷಣದಲ್ಲಿ ಇಂತಹ ಯಾವ ವಿಚಾರಗಳೂ ಇಲ್ಲ. ಆಂಧ್ರಕ್ಕೆ ಒಂದು ರೀತಿ, ಮಹಾರಾಷ್ಟ್ರಕ್ಕೆ ಒಂದು ರೀತಿಯಾಗಿ ಕೇಂದ್ರದವರು ಹೇಳಿಕೆ ಕೊಟ್ಟು ಇಂತಹ ತಾರತಮ್ಯವನ್ನು ಏಕೆ ಮಾಡುತ್ತಿದ್ದಾರೆ? ಇದನ್ನು ನಮ್ಮ ರಾಜ್ಯ ಸರಕಾರ ಸ್ಪಷ್ಟವಾಗಿ ಹೇಳಿ ಕೇಂದ್ರದವರ ಮೇಲೆ ಏಕೆ ಒತ್ತಾಯ ತರಲಿಲ್ಲ? ಇದಕ್ಕೆ ಕಾರಣ ರಾಜ್ಯಸರಕಾರದ ಶಕ್ತಿ ಹೀನತೆಯೇ ವಿನಾ ಬೇರೇನೂ ಇಲ್ಲ ಎಂದು ಇಲ್ಲಿ ಸ್ಪಷ್ಟವಾಗಿ ಹೇಳಬೇಕಾಗಿದೆ. ಇದರಿಂದಾಗಿ ನಮ್ಮ ರಾಜ್ಯದಲ್ಲಿ ಬಂದಿರುವ ಬರಗಾಲದ ಪರಿಹಾರ ಕಾರ್ಯಕ್ರಮಗಳನ್ನು ಜಾರಿಗೆ ತರುವುದರಲ್ಲಿ ಕೇಂದ್ರದವರೂ ವಿಫಲರಾಗಿದ್ದಾರೆ ಮತ್ತು ರಾಜ್ಯಸರಕಾರದವರೂ ವಿಫಲರಾಗಿದ್ದಾರೆ. ಬರಗಾಲದ ಸಂಬಂಧದಲ್ಲಿ ವಿಚಾರ ಮಾಡುವಾಗ ನಾನು ಸರಕಾರವನ್ನು ಒಂದು ಪ್ರಶ್ನೆ ಕೇಳಬೇಕಾಗಿದೆ. ಕೇಂದ್ರದ ಮೇಲೆ ಸರಿಯಾದ ಒತ್ತಡ ತಂದು ಕಾರ್ಯಗಳನ್ನು ಚುರುಕಿನಿಂದ ಮಾಡುವುದರಲ್ಲಿ ನೀವು ವಿಫಲರಾಗಿದ್ದೀರಿ. ಕೇಂದ್ರದವರು ಹೇಳುವಂತೆ ನೀವು ರಾಜ್ಯದಲ್ಲಿ ಕೂಡ ಸಮತಾ ವಾದ ಸಮಾಜವನ್ನು ತರಬೇಕೆಂದು ಹೇಳುವಾಗ ಅಧಿಕಾರದ ವಿಕೇಂದ್ರೀಕರಣವಾಗಬೇಕು. ಆದರೆ ಇದು ನಿಜವಾಗಿ ಆಗುತ್ತಿದೆಯೇ ಎಂದು ನೋಡುವಾಗ ಅಂತಹ ಯಾವ ಕಾರ್ಯಕ್ರಮಗಳೂ ನಡೆಯುತ್ತಿಲ್ಲ. ಸುಖೀ ರಾಜ್ಯ ನಿರ್ಮಾಣಮಾಡುತ್ತೇವೆ ಮತ್ತು ಎಲ್ಲರಿಗೂ ಅನುಕೂಲ ಮಾಡುತ್ತೇವೆ ಎಂದು 1972 ಶಾಸನಸಭೆಗಳ ಮಹಾಚುನಾವಣೆಗೆ ಮುಂಚೆ ಜನರ ಮುಂದೆ ಹೇಳಿ ಇದುವರೆಗೆ ನೀವು ಕೊಟ್ಟ ಭರವಸೆಗಳನ್ನು ಜಾರಿಗೆ ತಂದಿದ್ದೀರಾ ಎಂದು ಕೇಳಬೇಕಾಗಿದೆ. ಇದರ ಬಗ್ಗೆ ನಾನು ಮಾನ್ಯ ಮಂತ್ರಿಗಳಾದ ಶ್ರೀ ಫೋರ್ಪಡೆಯವರನ್ನು ಒಂದು ವಿಚಾರದಲ್ಲಿ ಪ್ರಶ್ನೆ ಮಾಡಬೇಕಾಗಿದೆ. ಇವರು ದೆಹಲಿಗೆ ಹೋಗಿ ಅಲ್ಲೇ ಕುಳಿತುಕೊಂಡು ಕೇಂದ್ರದವರೊಡನೆ ಒತ್ತಡ ಮಾಡಿ ಬರಗಾಲದ ಕೆಲಸಗಳಿಗಾಗಿ ಬೇಕಾದ ಹಣವನ್ನು ತರುತ್ತೇವೆಂದು ಹೇಳಿದರು ಮತ್ತು ಹಿಂದೆ ಬಂದ ಐವನೇ ಆರ್ಥಿಕ ಆಯೋಗದಿಂದ ಕೊರತೆ ಬಿದ್ದ ನುಮಾರು 80—90 ಕೋಟಿಯಷ್ಟು ಹಣವನ್ನು ಮತ್ತೆ ತುಂಬಿಸಿಕೊಳ್ಳುವ ಪ್ರಯತ್ನ ಮಾಡಬೇಕೆಂದು ನಮ್ಮ ಆರ್ಥ ಸಚಿವರೂ ದೆಹಲಿಯಲ್ಲೇ ಕುಳಿತು ನಿಮಗಿರುವ ಶಕ್ತಿಯನ್ನೆಲ್ಲಾ ಉಪಯೋಗಿಸಿ ಕೇಂದ್ರದಿಂದ ರಾಜ್ಯ ಸರಕಾರಕ್ಕೆ ಅನ್ಯಾಯವಾಗಿರುವುದನ್ನು ಸರಿಪಡಿಸುವುದರಲ್ಲಿ ಅವರು ವಿಫಲರಾಗಿದ್ದಾರೆ. ಇಂತಹ ವಿಫಲತೆಗೆ ಕಾರಣ ನಿಮ್ಮಲ್ಲಿರುವ ಶಕ್ತಿಹೀನತೆ. ಇದಕ್ಕೋಸ್ಕರ ಆಡಳಿತದ ವಿಕೇಂದ್ರೀಕರಣವಾಗಬೇಕು ಎಂದು ನಾವು ಹೇಳುತ್ತಿರುವುದು. ಈಚೆಗೆ ನೀವು ಹೇಳುತ್ತಿರುವ ಘೋಷಣೆಗಳು ಎಂದರೆ ಗರೀಬೀ ಹಠಾವೋ ಸಮಾಜ ವಾದ ಎಂದು ಹೇಳುವುದನ್ನು ಜಾರಿಗೆ ತರಲು ಸಾಧ್ಯವಿಲ್ಲ. ನಮ್ಮ ರಾಜ್ಯಪಾಲರು ಅವರ ಭಾಷಣದಲ್ಲಿ ದೇಶದ ಬಹಳ ಪ್ರಮುಖವಾದ ವಿಷಯಗಳನ್ನೆಲ್ಲಾ ಏಕೆ ಇಲ್ಲಿ ಪ್ರಸ್ತಾಪ ಮಾಡಲಿಲ್ಲ? ಇದನ್ನು ಏಕೆ ಬಿಟ್ಟರು? ನಮ್ಮ ರಾಜ್ಯಕ್ಕೆ ಬಹು ದಿನದ ಜನರ ಬೇಡಿಕೆಯಾದ ಹಾಗೂ ಬಹಳ ಮುಖ್ಯವಾದ ಹುಬ್ಬಳ್ಳಿ ಕಾರವಾರ ರೈಲು ಮಾರ್ಗವನ್ನು ಕ್ಯೈಗೊಂಡಿದ್ದರೆ ಇದರಿಂದ ಮಂಗಳೂರಿನಲ್ಲಿರುವ ಗೊಬ್ಬರದ ಕಾರ್ಖಾನೆಗೆ ಕಬ್ಬಿಣದ ಅದಿರನ್ನು ಸಾಗಿಸಲು ಅನುಕೂಲವಾಗುತ್ತಿರಲಿಲ್ಲವೇ? ಇದೊಂದು ಬಹಳ ಮುಖ್ಯವಾದ ರೈಲ್ವೆ ಮಾರ್ಗ. ಇದು ಎಷ್ಟು ವರ್ಷಗಳಿಂದ ಬರುತ್ತಿರುವ ಬೇಡಿಕೆ ಎನ್ನುವುದು ಕೇಂದ್ರಕ್ಕೆ ಗೊತ್ತಿಲ್ಲವೇ? ನಮ್ಮ ರಾಜ್ಯದವರೇ ಕೇಂದ್ರದಲ್ಲಿ ಮಂತ್ರಿಗಳಾದ

ಮೇಲೆ ಎಂದರೆ ಶ್ರೀಮಾನ್ ಪೈ ರಂತಹವರು ಬಂದರೂ ಈ ರೈಲ್ವೆ ಬಗ್ಗೆ ರಿಪೋರ್ಟನ್ನು ಬರಲು ಒತ್ತಾಯ ಮಾಡಿದರು. ಆದರೂ ಇದು ಇನ್ನೂ ಆಗಲಿಲ್ಲ. ಇವಲ್ಲದೇ ಇನ್ನೂ ಅನೇಕ ರೈಲ್ವೆ ಮಾರ್ಗಗಳನ್ನು ರಾಜ್ಯದಲ್ಲಿ ಮಾಡಬೇಕೆಂಬ ಬೇಡಿಕೆಗಳು ಇದ್ದರೂ ಕೇಂದ್ರ ಇವೊಂದಕ್ಕೂ ಇನ್ನೂ ಗಮನ ಕೊಡದೇ ಇರುವುದನ್ನು ನೋಡಿದರೆ ರಾಜ್ಯಪಾಲರು ಅವರ ಭಾಷಣದಲ್ಲಿ ಸತ್ಯವಾದ ಮಾತುಗಳನ್ನು ಹೇಳದೆ ಬರೀ ಅನತ್ಯವಾದ ಮಾತುಗಳನ್ನೇ ಇಲ್ಲಿ ಹೇಳಿದ್ದಾರೆ. ಇದರ ಜೊತೆಗೆ ಕಾರವಾರವನ್ನು ನರ್ವ ಋತು ಬಂದರು ಎಂದು ಮಾಡಬೇಕೆಂದು ಹೇಳುತ್ತಿದ್ದರೂ ಇದುವರೆಗೆ ರಾಜ್ಯಪಾಲರು ಅವರ ಭಾಷಣದಲ್ಲಿ ಇದರ ಬಗ್ಗೆ ಒಂದು ಮಾತನ್ನೂ ಹೇಳಲಿಲ್ಲ. ಇದು ರಾಜ್ಯ ಸರಕಾರದ ಶಕ್ತಿಹೀನತೆಯನ್ನು ತೋರಿಸುತ್ತದೆ. ಕೇಂದ್ರ ಸರಕಾರದ ಮೇಲೆ ಸರಿಯಾದ ಒತ್ತಡ ತರಲು ಶಕ್ತಿ ಇಲ್ಲದೆ ನಮಗೆ ಬೇಕಾಗಿರುವ ನರ್ವ ಋತು ಬಂದರೂ ಇದುವರೆಗೂ ಆಗದೆ ವಿಳಂಬವಾಗುತ್ತಿದೆ. ಹೀಗಾದರೆ ನಮ್ಮಲ್ಲಿ ಆಗುವ ಮುಖ್ಯ ಬಂದರುಗಳು ಯಾವರೀತಿ ತಾನೆ ಮಾಡಲು ಸಾಧ್ಯ ? ನಮ್ಮ ಮುಂದೆ ರಾಜ್ಯಪಾಲರ ಭಾಷಣದ ಮೇಲೆ ಮಾನ್ಯ ಸದಸ್ಯರಾದ ಶ್ರೀ ಸುಬ್ಬಯ್ಯ ಶೆಟ್ಟರು ವಂದನಾ ನಿರ್ಣಯವನ್ನು ತಂದಿದ್ದಾರೆ. ಇದೊಂದು ಅರ್ಥಹೀನವಾದ ಭಾಷಣ. ಇದರ ಹಿನ್ನೆಲೆಯಲ್ಲಿ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡುತ್ತಾ ಹಿಂದೆ ಇದ್ದ ಶ್ರೀ ವೀರೇಂದ್ರ ಪಾಟೀಲರ ಸರಕಾರ ಮಾಡಿದ್ದು ತಪ್ಪು ಎಂದು ಹೇಳಿದರು. ಆದರೆ ನಾವು ಹಿಂದಿನ ಸರಕಾರ ಮಾಡಿರುವ ಒಳ್ಳೆಯ ಕೆಲಸಗಳನ್ನು ಮಾಡಿದ್ದರೆ ಅದನ್ನು ಒಪ್ಪುತ್ತೇವೆ. ಈಗಿನ ಸರಕಾರ ಮಾಡಿರುವ ಒಳ್ಳೆಯ ಕೆಲಸಗಳನ್ನೂ ಒಪ್ಪುತ್ತೇವೆ. ಆದರೆ ಕೆಟ್ಟ ಕೆಲಸಗಳನ್ನು ಮಾಡಿರುವ ಯಾವ ಸರಕಾರವೇ ಆಗಲೀ ಅಂತಹವರನ್ನು ಖಡಾ ಖಂಡಿತವಾಗಿ ಖಂಡನೆ ಮಾಡುತ್ತೇವೆ. ಇದರಲ್ಲಿ ಒಂದು ವಿಚಾರ ಇಲ್ಲಿ ಹೇಳಬೇಕಾಗಿದೆ. ಶ್ರೀ ವೀರೇಂದ್ರ ಪಾಟೀಲರವರ ಸರಕಾರ ಇದ್ದಾಗ ಕಾರವಾರದ ಬಳಿ ಇದ್ದ ಸುಮಾರು ಒಂದು ಲಕ್ಷ ಎಕರೆ ಅರಣ್ಯದ ಪ್ರದೇಶವನ್ನು ಭೂ ಹೀನರಿಗೆ ಹಂಚಬೇಕೆಂದು ಬಿಡುಗಡೆ ಮಾಡಿದ್ದರು. ಆದರೆ ಇಂದು ಬಂದಿರುವ ಸರಕಾರ ಎಂದರೆ ಸಮಾಜವಾದವನ್ನು ಜಾರಿಗೆ ತರುತ್ತೇವೆ. ಗರೀಬೀ ಹಟಾವೋ ತರುತ್ತೇವೆ ಎಂದು ಹೇಳುವ ಜನ ನೀವು. ಚುನಾವಣೆಗೆ ಮುಂಚೆ ಜನರ ಮುಂದೆ ಹೋಗಿ ಭಾಷಣ ಮಾಡುತ್ತ ಒಂದು ಲಕ್ಷ ಅಲ್ಲ ಎರಡು ಮೂರು ಲಕ್ಷ ಎಕರೆ ಭೂಮಿಯನ್ನು ಜನತೆಗೆ ಕೊಡುತ್ತೇವೆ. ನಿಮಗೆ ಎಲ್ಲ ಅನುಕೂಲಗಳನ್ನು ಮಾಡಿಕೊಡುತ್ತೇವೆ ಎಂದು ಹೇಳಿದವರು ಇಂದು ಅಧಿಕಾರಕ್ಕೆ ಬಂದ ಕೂಡಲೇ ಹಿಂದಿನ ಸರಕಾರ ಕೊಟ್ಟಿದ್ದ ಒಂದು ಲಕ್ಷ ಎಕರೆ ಭೂಮಿಯ ಮೇಲೆ ಗದಾ ಪ್ರಹಾರ ಮಾಡಿದ್ದಾರೆ.

ಶ್ರೀ ಎಸ್. ಎ. ನಾಯಕ್.—ಕಾರವಾರ ಜಿಲ್ಲೆಯಲ್ಲಿ ಕೊಟ್ಟಿದ್ದಂತಹ ಭೂಮಿ ಬರೀ ಬೆಂಗಾಡಾದ ಭೂಮಿಯಾಗಿತ್ತು. ಇದರ ಬಗ್ಗೆ ಮಾನ್ಯ ಸದಸ್ಯರಿಗೆ ಅನುಭವವಿಲ್ಲದೆ ಇಲ್ಲಿ ಹೇಳುವಂತೆ ಕಾಣುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಇದು ನನ್ನ ಪಕ್ಕದ ಜಿಲ್ಲೆಯೇ ಆಗಿರುವುದರಿಂದ ಕಾರವಾರ ಜಿಲ್ಲೆಯ ಬಗ್ಗೆ ನಾನು ಚೆನ್ನಾಗಿ ತಿಳಿದುಕೊಂಡಿದ್ದೇನೆ. ಅದರೆ ನಾನು ಹೇಳುತ್ತಿರುವುದು ಹಿಂದಿನ ಸರಕಾರ ಮಾಡಿದ ಆಜ್ಞೆಯನ್ನು ಇಂದು ಬಂದ ಸರಕಾರ ಏಕೆ ರದ್ದು ಮಾಡಬೇಕಾಗಿತ್ತು ಎಂದು ನಾನು ಕೇಳುತ್ತಿರುವುದು. ಕೊನೆಯ ಪಕ್ಷ ರಾಜ್ಯಪಾಲರ ಭಾಷಣದಲ್ಲಿ ಇನ್ನೂ ಒಂದು ಲಕ್ಷ ಎಕರೆಗಳಷ್ಟು ಭೂಮಿಯನ್ನು ಜನರಿಗೆ ಕೊಟ್ಟು ಅನುಕೂಲ ಮಾಡಿದ್ದೇವೆಂದು ಇಲ್ಲ ಸ್ಪಷ್ಟವಾಗಿ ಹೇಳಬೇಕಾಗಿತ್ತು. ಮಂತ್ರಿಗಳು ಹೇಳುವ ಮಾತುಗಳಲ್ಲಿ ರಾಜ್ಯದ ಆದರ್ಶಗಳನ್ನು ಎತ್ತಿ ಹೇಳಬೇಕಾಗಿತ್ತು. ಇಂದು ರಾಜ್ಯದಲ್ಲಿ ತುಂಬಿತುಳುಕಾಡುತ್ತಿರುವ ಲಂಚ ರುಷುವತ್ತುಗಳ ಬಗೆಗೆ ರಾಜ್ಯಪಾಲರ ಭಾಷಣದಲ್ಲಿ ಒಂದು ಮಾತೂ ಇಲ್ಲ. ದೇಶದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರಗಳನ್ನು ನಿಲ್ಲಿಸಲು ನಿಮ್ಮ ಸರಕಾರಕ್ಕೆ ಇದುವರೆಗೆ ಸಾಧ್ಯವಾಗಲಲ್ಲ. ಜನತೆಗೆ ಮುಖ್ಯವಾಗಿ ಬೇಕಾದ ಮುಖ್ಯ ವಿಚಾರಗಳ ಬಗ್ಗೆ ಜನರು ಸುಖಜೀವನ ಮಾಡುವುದರ ಬಗ್ಗೆ ನಿಮ್ಮ ನೀತಿಗಳೇನು ಇದರಲ್ಲಿ ಆಗಿರುವ ಪ್ರಗತಿಗಳೇನು ಎನ್ನುವ ಒರದು ವಿಚಾರಗಳೂ ರಾಜ್ಯಪಾಲರ ಭಾಷಣದಲ್ಲಿ ಕಂಡುಬರುತ್ತಿಲ್ಲ. ಇಂತಹ ರಾಜ್ಯಪಾಲರ ಭಾಷಣಕ್ಕೆ ತಂದ ನಿರ್ಣಯಕ್ಕೆ ನಮ್ಮ ಅನುಮೋದನೆಯನ್ನು ಕೊಡುವ ಅಗತ್ಯವಿಲ್ಲ ಎಂದು ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† Sri ABDUL KHUDDUS ANWAR (Bhadravati).—At the very outset I would like to say that not a single word is mentioned about labour in the Governor's Address. I am very doubtful whether the Government has taken notice of the fact that the labour is the backbone of

(SRI ABDUL KHUDDUS ANWAR)

the day. Nothing has been mentioned about them in the Address. Labour in the Mysore State is well disciplined and they have done their best for building economy of the State unlike the labour in other places like Durgapur and other plants where the labour is always on strikes. The Department of Labour also is doing very good work and they are sitting across the table and most of the disputes are being settled satisfactorily. Inspite of the best behaviour of the labour, nothing has been mentioned in the Address. Some programmes for the betterment of the conditions of the labour should have been mentioned. In the Factories 10% of the vacancies should be reserved for the unemployed Engineers, Diploma holders and other unemploy skilled workers. They must be taken as recruits and be given training in industries. This principle should be adopted in almost all the industries that are existing and that are coming up. This principle could be adopted in other Departments of Government also.

About law and order I want to say a few words. The law and order situation is not so good as we expected. Some of the officers are encouraging the communal feelings with the result the minority people have suffered to the maximum extent. For the sufferings of the minority people, these Government officers are responsible. Therefore the Government should immediately set right such things. I do not say all the Government Officers will do the same thing. There are some officers creating such troubles. The Government should look to it.

With regard to the rural industrialisation, a lot of employees have got to be obsorbed by rural industries like agro industries machine shops etc. But the Government is not taking interest in starting the rural industries. Therefore the Government should take all measures to start agro-industries in each taluka of the State.

About 3,500 acres of forest land in Shimoga District were acquired and brought under cultivation since last 5 years by the Scheduled Caste and Scheduled Tribes people. By applying rules and regulations, the Government has taken back the lands with the result these people have become landless and they are suffering a lot. These are the days in which these poor Scheduled cast and Scheduled Tribes people are to be lifted. when that is the case, you have taken back the entire land from. them Therefore I request the Government to give back the land to Scheduled Castes and Scheduled Tribes people.

In regard to the solving of house problems, our Government has allotted sites to landless people all over the State. Merely allotting sites will not solve the problem. Even if you give forest material to them free of cost it will not solve the problem. The Concerned Minister who recently visited Shimoga District has made a statement that 2 lakh houses will be constructed. I request the

Government to see that all these houses are constructed within next one year and see that the poor people are lodged in them. It should not remain as a slogan, but it should be put into action. The Hon. Minister has further stated that each village will eave 20 houses It is a good thing if each village is provided with 20 houses for the poor.

with regard to the Managalore fertilizer factory, I would like to say that things are not going on well. It was scheduled to be finished by 1972 itself. So far even to-day the work is yet in a preliminary stage. I do not know when they are going to finish it. It is full of politics. Most of the officers of that factory are appointing their own people. The local people who are experienced in that line have not been given a chance in the Factory. But only the relatives of the officers of that factory are getting chances. This irregularity should be set right and see the factory is completed as early as possible.

Now I take up the malnad area. I request the Government to constitute a Malnad Development Board and see that the Malnad is developed and a University is granted in Shimoga District.

With regard to development of industries, the Government of India has given Rs. 65 crores. The Government of Mysore has programmed for the development of large and medium industries and also the village industries. The people to whom the help is given to start the industries are starting the forging plants where they are producing only the carbon steel. I request the Government to see that forging plants should not manufacture the corbon steel. They are duping the public. Inspite of all these dubious methods adopted by them they are thriving on well. I request the Government to take up the matter of starting the Vijayanagar Steel Plant immediately. We have got machinery and equipment of our own. We can manufacture even any kind of machinery in the country itself. if we start this plant, we can absorb 5 to 7 thousand unemployed. We can get the trained engineers from N.G.E.F. and other places. We can get them employed in this Vijayanagar Steel Factory. We can get useful work done by them. With these words I conclude my speech and I thank the Chair for having given me an opportunity to speak.

ಶ್ರೀ ಕೆ. ಎಚ್. ಹನುಮೇಗ್ರೌಡ (ಹಾಸನ).—ಸನ್ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯವನ್ನು ನಾನು ವಿರೋಧಿಸುತ್ತಾ ಕೆಲವು ವಿಚಾರಗಳನ್ನು ಇಲ್ಲಿ ಪ್ರಸ್ತಾಪಮಾಡಲು ಇಚ್ಚಿಸುತ್ತೇನೆ. ರಾಜ್ಯದ ಉತ್ತರ ಜಿಲ್ಲೆಗಳಾದ ಬೆದರ, ಬಿಜಾಪುರ, ಬೆಳಗಾಂ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ ಭೀಕರ ಕ್ಷಾಮ ಬಂದಿರುವುದರಿಂದ, ಆ ಭಾಗದ ಜನರನ್ನು ಉಳಿಸುವ ಸಲುವಾಗಿ, ಮತ್ತು ಪಶುಸಂಪತ್ತನ್ನು ಉಳಿಸುವ ಸಲುವಾಗಿ ಮುಂದಿನ ಸೆಪ್ಟೆಂಬರ್ ತಿಂಗಳವರೆಗೆ ಒಟ್ಟು 150.55 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವ ಸಲುವಾಗಿ ಒಂದು ಸಮಗ್ರ ಯೋಜನೆಯನ್ನು ಸರ್ಕಾರದವರು ತಯಾರು ಮಾಡಿದ್ದಾರೆ. ಬಹಳ ಸಂತೋಷ. ಆದರೆ ಇದುವರೆಗೆ ಕೇಂದ್ರಸರ್ಕಾರದಿಂದ ರಾಜ್ಯಸರ್ಕಾರಕ್ಕೆ ಈಬಾಬ್ತಿಗಾಗಿ ಬಂದಿರುವುದು ಏಳುವರೆ ಕೋಟಿ ರೂಪಾಯಿಗಳು ಮಾತ್ರ. ಮೊನ್ನೆಯ ಪೇಪರ್‌ನಲ್ಲಿ ಹತ್ತು ಕೋಟಿ ರೂಪಾಯಿಗಳನ್ನು ಕೇಂದ್ರದವರು ನಮ್ಮ ರಾಜ್ಯಕ್ಕೆ ಕೊಟ್ಟಿರುವ ವಿಚಾರ ಪ್ರಕಟವಾಗಿತ್ತು. ಇನ್ನುಳಿದ ಹಣವನ್ನು ಪಡೆಯಲು ಸರ್ಕಾರದವರು ಎಷ್ಟರಮಟ್ಟಿಗೆ ಸಾಫಲ್ಯತೆ ಪಡೆಯುತ್ತಾರೆಂಬುದನ್ನು ನಾವು ಕಾದು ನೋಡಬೇಕಾಗುತ್ತದೆ. ಕೇಂದ್ರದಲ್ಲಿ ಮತ್ತು

(ಶ್ರೀ ಕೆ. ಎಚ್. ಹನುಮೇಗೌಡ)

ರಾಜ್ಯದಲ್ಲಿ ಈಗ ಒಂದೇ ಪಾರ್ಟಿಯು ಸರ್ಕಾರವಿರುವುದರಿಂದ, ಸರ್ಕಾರದವರು ಕೇಂದ್ರದ ಮೇಲೆ ತಮ್ಮ ಒಂದು ಪ್ರಭಾವ ಮತ್ತು ವರ್ಚಸ್ಸನ್ನು ಬೀರುವುದರ ಮೂಲಕ, ಮುಂಬಿನ ತಿಂಗಳು ಹತ್ತನೇ ತಾರೀಖು ಇಂದಿರಾಗಾಂಧಿಯವರು ಈ ರಾಜ್ಯಕ್ಕೆ ಪ್ರವಾಸ ಬಂದಾಗ ಬರಗಾಲ ಪ್ರದೇಶದ ನಿವಾರಣೆಗಾಗಿ ಬೇಕಾದಂಥ 150 ಕೋಟಿ ರೂಪಾಯಿಗಳನ್ನು ಪಡೆಯುವುದಕ್ಕೆ ಸರ್ವಪ್ರಯತ್ನ ಮಾಡಬೇಕು. ಆ ರೀತಿ ಪಡೆಯದೆ ಹೋದರೆ ಜನ ನಮ್ಮನ್ನೆ ಇರಲಾರರು ಎಂಬುದನ್ನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮತ್ತೊಂದು ವಿಚಾರವನ್ನು ಅನೇಕ ಜನ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ, ಅದೇನೆಂದರೆ ಸರ್ಕಾರದವರು ಕೇಂದ್ರದಿಂದ ಹೆಚ್ಚು ಹಣವನ್ನು ತರಲು ಸಾಧ್ಯವಿಲ್ಲದೆ, ಈ ರಾಜ್ಯದ ದಕ್ಷಿಣ ಭಾಗಕ್ಕೆ ಇಟ್ಟಿದ್ದ ಕ್ಷಾಮ ಪರಿಹಾರ ನಿಧಿಯ ಹಣವನ್ನು ರಾಜ್ಯದ ಉತ್ತರ ಭಾಗದಲ್ಲಿ ಖರ್ಚುಮಾಡುತ್ತಿದ್ದಾರೆಂಬುದು. ಈ ಒಂದು ವರ್ತಮಾನ ಎಲ್ಲ ಕಡೆಗಳಲ್ಲಿಯೂ ಹರಡುತ್ತಿದೆ. ಈ ಬಗ್ಗೆ ಒಂದೆರಡು ಉದಾಹರಣೆಗಳನ್ನು ಈ ಸಂದರ್ಭದಲ್ಲಿ ಕೊಡುವುದಕ್ಕೆ ಇಷ್ಟಪಡುತ್ತೇನೆ :

ಕಳೆದ ವರ್ಷದ ಬಡ್ಜೆಟ್ಟಿನಲ್ಲಿ ಒರಿಜನಲ್ ವರ್ಕ್ಸ್‌ಗಾಗಿ ರೋಡು ಮತ್ತು ಬಿಲ್ಡಿಂಗ್ ಹಾಗೂ ಇತರೇ ಅಭಿವೃದ್ಧಿ ಕೆಲಸಗಳಿಗೆ ಇಟ್ಟಿದ್ದಂತಹ ಹಣವನ್ನು ಇದುವರೆಗೂ ಕೂಡ ಆ ಕೆಲಸಕ್ಕಾಗಿ ಖರ್ಚು ಮಾಡುವುದಕ್ಕೆ ಶುರು ಮಾಡಿಲ್ಲ. ಮಾರ್ಚಿ ತಿಂಗಳು ಕಳೆದ ನಂತರ ಅದನ್ನು ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಕ್ಷಾಮ ನಿವಾರಣೆಗಾಗಿ ಆ ಹಣವನ್ನು ಖರ್ಚು ಮಾಡುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ರಸ್ತೆಗಳ ಕೆಲಸಕ್ಕಾಗಿ ಕೊಟ್ಟಂತಹ ಹಣವನ್ನು ಖರ್ಚು ಮಾಡಬೇಡಿ ಎಷ್ಟು ಕೆಲಸ ಆಗಿದ್ದರೆ ಅದನ್ನು ಅಷ್ಟಕ್ಕೇ ನಿಲ್ಲಿಸಿ ಎಂದು ಮಾನ್ಯ ಚನ್ನಬಸಪ್ಪನವರು ಹೇಳಿದ್ದಾರೆ ಎಂದು ವರ್ತಮಾನ ಬಂದಿದೆ. ಹಳೆಯ ಮೈಸೂರಿನಲ್ಲಿ ಅಭಿವೃದ್ಧಿ ಕಾರ್ಯಗಳಿಗಾಗಿ ಸರ್ಕಾರದವರು ಕೊಟ್ಟಂತಹ ಹಣವನ್ನು ಖರ್ಚು ಮಾಡದೆ ಆ ಹಣವನ್ನು ಬರಗಾಲ ಪೀಡಿತ ಪ್ರದೇಶಗಳಲ್ಲಿ ಪರಿಹಾರ ಕಾರ್ಯಗಳಿಗಾಗಿ ಉಪಯೋಗಿಸುತ್ತಾರೆ ಎನ್ನುವ ವರ್ತಮಾನ ಬಂದಿದೆ. ಹಾಗೆ ಮಾಡಿದಲ್ಲಿ ಇಲ್ಲಿಯ ಜನ ನಮ್ಮನ್ನೆ ಇರುವುದಿಲ್ಲ. ಆಂಧ್ರದಲ್ಲಿ ಇದಂತಹ ಚಳುವಳಿ ಇಲ್ಲಿಯೂ ಪ್ರಾರಂಭವಾಗುತ್ತದೆ. ಅದಕ್ಕೆ ಈ ಸರ್ಕಾರವೇ ಹೊಣೆಯಾಗಬೇಕಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಇನ್ನೊಂದು ವಿಚಾರವನ್ನು ಮಾನ್ಯ ಆಡಳಿತ ಪಕ್ಷದ ಸದಸ್ಯರು ಆಗಿಂದಾಗ್ಗೆ ಹೇಳುತ್ತಿದ್ದಾರೆ ಅದೇನೆಂದರೆ ಹಿಂದಿನ ಸರ್ಕಾರ ಬೇಕಾಬಿಟ್ಟಿ ಹಣವನ್ನು ಯಾವ ವಿವೇಚನೆಯೂ ಇಲ್ಲದೆ ಖರ್ಚು ಮಾಡಿದ್ದಾರೆ ಅದರ ಪ್ರಾಪಘ ಫಲದಿಂದ ಈ ರಾಜ್ಯದ ಜನತೆ ಈಗ ಕಷ್ಟವನ್ನು ಅನುಭವಿಸುತ್ತಿದ್ದಾರೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಆದರೆ ಈಗಿನ ಆಡಳಿತ ಪಕ್ಷದವರು ಜನತೆಯಲ್ಲಿ ಪ್ರೀತಿ ವಿಶ್ವಾಸವನ್ನು ವ್ಯಕ್ತಪಡಿಸಿ ಅವರಿಂದ ವೋಟು ತೆಗೆದುಕೊಂಡು ಬಂದು ಅವರು ಎಷ್ಟು ವಿವೇಚನೆಯಿಂದ ಸರ್ಕಾರದ ಹಣವನ್ನು ಖರ್ಚು ಮಾಡುತ್ತಿದ್ದಾರೆ ಎಂಬುದರ ಬಗ್ಗೆ ನಾನು ಒಂದೆರಡು ಉದಾಹರಣೆಗಳನ್ನು ಹೇಳುತ್ತೇನೆ. ಹುಲಕೋಟಿ ಧಾರವಾಡ ಜಿಲ್ಲೆಯಲ್ಲಿ ಒಂದು ಹೋಬಳಿ ಹೆಡ್‌ಕ್ವಾರ್ಟರ್ಸ್. ಅದು ಗದುಗಿಗೆ 4 ಮೈಲಿ ಮಾತ್ರ ದೂರ ಇದೆ. ಗದುಗಿನಲ್ಲಿ ಒಳ್ಳೆಯ ಟಿ. ಬಿ. ಗಳು ಇವೆ. ಆದರೂ ಸಹ ಹುಲಕೋಟಿಯಲ್ಲಿ ಟಿ. ಬಿ. ಯನ್ನು ಕಟ್ಟುವುದಕ್ಕೆ ಒಂದೂವರೆ ಲಕ್ಷ ರೂಪಾಯಿಗಳನ್ನು ಸರ್ಕಾರದವರು ಮಂಜೂರು ಮಾಡಿದ್ದಾರೆ. 4 ಮೈಲಿ ದೂರಕ್ಕೆ ಮತ್ತೊಂದು ಟಿ.ಬಿಯನ್ನು ಕಟ್ಟುವ ಔಚಿತ್ಯವಿದೆಯೇ ಎಂದು ನಾನು ಈ ಸಂದರ್ಭದಲ್ಲಿ ಪ್ರಶ್ನೆ ಮಾಡುತ್ತೇನೆ;

ಗದಗ್ ಮತ್ತು ಬೆಟಗೇರಿ ನೀರು ಸರಬರಾಜು ಯೋಜನೆಗೆ ಸರ್ಕಾರ ಮಂಜೂರಾತಿಯನ್ನು ಕೊಟ್ಟು ಅದಕ್ಕೆ 60-70 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಆ ಯೋಜನೆಯು ಮುಗಿಯುವ ಹಂತರದಲ್ಲಿರುವಾಗ ಮತ್ತು ಗದಗ ಬೆಟಗೇರಿಗೆ ತುಂಗಭದ್ರಾನದಿಯಿಂದ ನೀರು ಸರಬರಾಜು ಮಾಡುವುದಕ್ಕಾಗಿ 4½ ಕೋಟಿ ರೂಪಾಯಿಗಳನ್ನು ಅಂದಾಜು ಮಂಜೂರು ಮಾಡಿರುವುದು ಈ ಸರ್ಕಾರಕ್ಕೆ ವಿವೇಕ ಇದೆಯೇ ಹೇಗೆ ಎಂಬುದನ್ನು ನಾನು ಈ ಸಂದರ್ಭದಲ್ಲಿ ಪ್ರಶ್ನೆ ಮಾಡಬೇಕಾಗಿದೆ. ಈ ರೀತಿಯಾಗಿ ಈ ಸರ್ಕಾರದವರು ಮನಸ್ಸಿಗೆ ಬಂದಹಾಗೆ ಯೋಜನೆಯನ್ನು ಹಾಕಿಕೊಂಡು ಸರ್ಕಾರದ ದುಡ್ಡನ್ನು ಏತಕ್ಕೆ ಖರ್ಚು ಮಾಡುವುದಕ್ಕೆ ಹೊರಟಿದ್ದಾರೆ ಎನ್ನುವ ಬಗ್ಗೆ ವಿವರಣೆ ಕೊಡಬೇಕು.

ಇನ್ನೊಂದು ವಿಷಯವೆನೆಂದರೆ ಮಾನ್ಯ ಮುಖ್ಯಮಂತ್ರಿಗಳು ನಮ್ಮ ರಾಜ್ಯದ ಹೋಬಳಿ ಹೆಡ್ ಕ್ವಾರ್ಟರ್‌ಗಳಲ್ಲಿ 10-12 ಸಾವಿರ ಪ್ರಜಾಸಂಖ್ಯೆ ಇರುವ ಚಿಕ್ಕ ಚಿಕ್ಕ ಪಟ್ಟಣಗಳಲ್ಲಿ 3 ಲಕ್ಷ

ರೂಪಾಯಿಗಳನ್ನು ಖರ್ಚು ಮಾಡಿ ಮಿನಿಥಿಯೇಟರುಗಳನ್ನು ಕಟ್ಟಿಸಬೇಕೆಂದಿದ್ದೇವೆ ಎಂದು ಹೇಳಿದ್ದಾರೆ. ಇಂಥಾ ಒಂದು ಬರಗಾಲ ಪರಿಸ್ಥಿತಿಯಲ್ಲಿ ಜನ ತೊಂದರೆ ಪಡುತ್ತಾ ಇರುವಾಗ ಮಿನಿಥಿಯೇಟರಿಗಾಗಿ 3 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವ ಬದಲು ಆ ಹಣವನ್ನು ಆ ಹೋಬಳಿಯಲ್ಲಿ ನೀರಾವರಿ ಯೋಜನೆಗೆ ಖರ್ಚು ಮಾಡಿದರೆ ಅದರಿಂದ ಎಷ್ಟೋ ಜನಗಳಿಗೆ ಅನುಕೂಲವಾಗುತ್ತದೆ. ಆದ್ದರಿಂದ ಅದನ್ನು ಏತಕ್ಕೆ ಮಾಡಬಾರದು ಎಂದು ನನ್ನ ಪ್ರಶ್ನೆ.

ಶ್ರೀ ಡಿ. ದೇವರಾಜ ಅರಸ್.—ಮಿನಿಥಿಯೇಟರ್ ಕಟ್ಟುವುದಕ್ಕೆ ಸರ್ಕಾರದವರು ಖರ್ಚು ಮಾಡುವುದಿಲ್ಲ. ಬ್ಯಾಂಕಿನಿಂದ ಸಾಲ ಕೊಡುತ್ತಾರೆ. ಅದನ್ನು ಖರ್ಚು ಮಾಡುತ್ತಾರೆ.

ಶ್ರೀ ಕೆ. ಎಚ್. ಹನುಮೇಗೌಡ.—ಈಗಾಗಲೇ ಬೆಂಗಳೂರಿನಲ್ಲಿ ಒಂದು ಅಗ್ರಿಕರ್‌ಚರಲ್ ಯೂನಿವರ್ಸಿಟಿ ಇದೆ. ಮತ್ತೆ ಧಾರವಾಡದಲ್ಲಿ ಒಂದು ಅಗ್ರಿಕರ್‌ಚರಲ್ ಯೂನಿವರ್ಸಿಟಿಯನ್ನು ಮುಂದಿನ ವರ್ಷದಿಂದ ಮಾಡಬೇಕೆಂದು ಕ್ಯಾಬಿನೆಟ್‌ನವರು ತೀರ್ಮಾನವನ್ನು ಕೆಗೆದುಕೊಂಡಿದ್ದಾರೆ ಎಂದು ಗೊತ್ತಾಗಿದೆ. ಈ ಸಂದರ್ಭದಲ್ಲಿ ನಾನು ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳುತ್ತೇನೆ ಧಾರವಾಡದಲ್ಲಿ ಇನ್ನೊಂದು ಅಗ್ರಿಕರ್‌ಚರಲ್ ಯೂನಿವರ್ಸಿಟಿಯನ್ನು ಮಾಡುವುದಕ್ಕೆ ಯು.ಜಿ.ಸಿ. ಯವರ ಅನುಮತಿ ಸಿಕ್ಕಿದೆಯೇ? ಅವರ ಪರ್ಮಿಷನ್ ಸಿಕ್ಕಿದ್ದರೂ ರಾಜ್ಯಸರ್ಕಾರದವರು ಇನ್ನೊಂದು ಅಗ್ರಿಕರ್‌ಚರಲ್ ಯೂನಿವರ್ಸಿಟಿಯನ್ನು ಮಾಡುವುದಕ್ಕೆ ಹೊರಟಿರುವುದೇತಕ್ಕೆ? ಒಂದು ಯೂನಿವರ್ಸಿಟಿಯನ್ನು ನಡೆಸಬೇಕಾದರೆ ಸರ್ಕಾರಕ್ಕೆ ಕನಿಷ್ಟಪಕ್ಷ ಒಂದೂವರೆ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಈ ಹಣವನ್ನು ಸರ್ಕಾರದವರು ಎಲ್ಲಿಂದ ತರಬೇಕು ಎಂಬುದನ್ನು ಮೊದಲು ಇನ್ನೊಂದು ಯೂನಿವರ್ಸಿಟಿಯನ್ನು ಸ್ಥಾಪನೆ ಮಾಡುವುದಕ್ಕೆ ಹೊರಟಿರುವುದೇತಕ್ಕೆ ಎಂದು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಈಗ ನಮ್ಮ ರಾಜ್ಯದಲ್ಲಿ ಹತ್ತಾರು ಇಂಜಿನಿಯರಿಂಗ್ ಕಾಲೇಜುಗಳು, ಪಾಲಿಟೆಕ್ನಿಕ್‌ಗಳು ಮತ್ತು ಅನೇಕ ಇಂಡಸ್ಟ್ರಿಯಲ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್‌ಗಳು ಇವೆ. ಆದ್ದರಿಂದ ಟೆಕ್ನಿಕರ್ ಎಜುಕೇಷನ್ನಿಗೆ ಸಂಬಂಧಪಟ್ಟ ಹಾಗೆ ನಮ್ಮ ರಾಜ್ಯದಲ್ಲಿ ಒಂದು ಯೂನಿವರ್ಸಿಟಿಯನ್ನು ಮಾಡಿದರೆ ನಮ್ಮ ರಾಜ್ಯದಲ್ಲಿ ಕೈಗಾರಿಕೆಯ ಅಭಿವೃದ್ಧಿಗೆ ಅನುಕೂಲವಾಗುತ್ತದೆ. ಮತ್ತು ಟೆಕ್ನಿಕರ್ ವಿದ್ಯಾಭ್ಯಾಸವು ಅಭಿವೃದ್ಧಿ ಆಗುತ್ತದೆ. ಈ ದೃಷ್ಟಿಯಿಂದ ಟೆಕ್ನಿಕರ್ ಎಜುಕೇಷನ್ನಿಗೆ ಸಂಬಂಧಪಟ್ಟ ಹಾಗೆ ಒಂದು ಟೆಕ್ನಲಾಜಿಕರ್ ಯೂನಿವರ್ಸಿಟಿಯನ್ನು ಸ್ಥಾಪನೆ ಮಾಡಿದರೆ ಅನುಕೂಲವಾಗುತ್ತದೆ.

ಇನ್ನೊಂದು ವಿಚಾರ. (ಬ) ಕಾಂಗ್ರೆಸ್ಸಿನವರು ಪ್ರತಿಗಾಮಿಗಳು ಅವರು ದೇಶದ ಅಭಿವೃದ್ಧಿಗೆ ವಿರೋಧವಾಗಿದ್ದಾರೆ ಎಂದು ಆಡಳಿತ ಪಕ್ಷದವರು ಪದೇ ಪದೇ ಹೇಳುವುದನ್ನು ನಾನು ಕೇಳಿದ್ದೇನೆ. ಈ ಸಂದರ್ಭದಲ್ಲಿ ನಾನು ಆಡಳಿತ ಪಕ್ಷದವರನ್ನು ಒಂದು ಪ್ರಶ್ನೆಯನ್ನು ಕೇಳುತ್ತೇನೆ ಬಡವರ ಬಗ್ಗೆ ಅವರು ಅನುಕಂಪ ತೋರಿಸಿ ಜನಗಳಿಂದ ವೋಟು ತೆಗೆದುಕೊಂಡು ಅಧಿಕಾರಕ್ಕೆ ಬಂದರು. ಆದರೆ ಈ ಮಂತ್ರಿಮಂಡಲದವರು ಹಿಂದಿನ ಮಂತ್ರಿ ಮಂಡಲದವರಿಗಿಂತಲೂ ಹೆಚ್ಚು ವೈಭವದಿಂದ ಇದ್ದಾರೆ. ಒಳ್ಳೆಯ ಕಾರು ಮತ್ತು ಬಂಗಲೆಗಳನ್ನು ಇಟ್ಟುಕೊಂಡು ಹೆಚ್ಚು ಹೆಚ್ಚು ಟೂರು ಮಾಡಿ ಟಿ.ಎ. ಡಿ.ಎ. ಹೆಚ್ಚು ತೆಗೆದುಕೊಂಡು ಹಿಂದಿನ ಮಂತ್ರಿಮಂಡಲದವರಿಗಿಂತಲೂ ವೈಭವವಾಗಿ ಜೀವನವನ್ನು ನಡೆಸುತ್ತಿದ್ದಾರೆಂದು ಹೇಳಿದರೆ ತಪ್ಪಾಗುವುದಿಲ್ಲ. ಇವೊತ್ತು ಜೀವನಾವಶ್ಯಕ ವಸ್ತುಗಳ ಬೆಲೆಗಳು ವಿಪರೀತವಾಗಿ ಏರಿಹೋಗಿವೆ. ಸಕ್ಕರೆ ಒಂದು ಕೆ.ಜಿ.ಗೆ 5 ರೂಪಾಯಿ ಆಗಿದೆ, ಒಂದು ಮೂಟೆ ಸಿಮೆಂಟ್ 18–26 ರೂಪಾಯಿಗಳಾಗಿದೆ. ಅಕ್ಕಿ, ರಾಗಿ, ಗೋಧಿ, ಕಡಲೆಕಾಯಿ ಎಣ್ಣೆ ಎಲ್ಲಾ ಆಹಾರ ಪದಾರ್ಥಗಳ ಬೆಲೆಗಳೂ ಜಾಸ್ತಿಯಾಗಿವೆ. ಅಮೋನಿಯಂ ನಿಟ್ರೇಟ್ ಒಂದು ಕ್ವಿಂಟಾಲಿಗೆ 550 ರೂಪಾಯಿ ಇತ್ತು. ಇವೊತ್ತು ಅದು ಒಂದು ಕ್ವಿಂಟಾಲಿಗೆ 1000–1100 ರೂಪಾಯಿಗಳವರೆಗೂ ಏರಿ ಹೋಗಿದೆ. ಈ ರೀತಿ ಬೆಲೆಗಳು ಏರಬೇಕಾದರೆ ನಿಮ್ಮ ಸರ್ಕಾರ ಕಾರಣವೇ ಹೊರತು ನಮ್ಮ ಸರ್ಕಾರ ಕಾರಣವಲ್ಲ. ವಿಪೇಕ್ಷನೆಯಿಂದ, ದಕ್ಷತೆಯಿಂದ ಸರ್ಕಾರದವರು ಆಡಳಿತವನ್ನು ನಡೆಸಿದ್ದರೆ ಈ ರೀತಿ ಆಗುತ್ತಾ ಇರಲಿಲ್ಲ.

ಎಂ. ಎಸ್. ಆರ್. ಟಿ. ಸಿ. ಆಡಳಿತವನ್ನು ನೆನೆಸಿಕೊಂಡರೆ ದುಃಖವಾಗುತ್ತದೆ. ಯಾವ ರೋಡಿನಲ್ಲಿ ಹೋದರೂ 3-4 ಸರ್ಕಾರಿ ಬಸ್ಸುಗಳು ಕೆಟ್ಟು ನಿಂತಿರುತ್ತವೆ. 10-15 ಪ್ರೈವೇಟ್ ಬಸ್ಸುಗಳು ತಿರುಗಾಡುತ್ತಿರುತ್ತವೆ. ಮಾನ್ಯ ಮುಖ್ಯ ಮಂತ್ರಿಗಳು ಮೊನ್ನೆತಾನೆ ಹೇಳಿದರು. ಆರ್. ಟಿ. ಎ. ಒಂದು ಕ್ವಾಸಿ ಜುಡೀಷಿಯರ್ ಬಾಡಿ, ಏನು ಮಾಡುವುದಕ್ಕಾಗುವುದಿಲ್ಲ ಎಂದು; ಈ ಸರ್ಕಾರ ಬಂದಮೇಲೆ ಎಷ್ಟೋ ಪ್ರೈವೇಟ್ ಬಸ್ಸುಗಳಿಗೆ ಲೈಸೆನ್ಸ್ ಕೊಟ್ಟಿದ್ದಾರೆ. ಈ ರೋಡ್ ಟ್ರಾನ್ಸ್‌ಪೋರ್ಟ್ ಬಗ್ಗೆ ಹಿಂದಿನ ಸರ್ಕಾರ ಎಷ್ಟು ಬಿಗಿಯಾಗಿ ನೋಡಿಕೊಳ್ಳುತ್ತಿತ್ತೋ ಅಷ್ಟು

(ಶ್ರೀ ಕೆ. ಎಚ್. ಹನುಮೇಗೌಡ)

ಬಗಿಯಾಗಿ, ಈ ಸರ್ಕಾರ ನೋಡಿಕೊಳ್ಳುತ್ತಿಲ್ಲ. ಈ ರೋಡ್ ಟ್ರಾನ್ಸ್‌ಪೋರ್ಟ್ ವೇಲೆ 30 ಕೋಟಿ ರೂಪಾಯಿಗಳ ಬಡಜನಗಳ ದುಡ್ಡನ್ನು ಹಾಕಿದೆ. ಇದರಿಂದ ಜನಗಳಿಗೆ ಸಾಕಷ್ಟು ಸೌಲಭ್ಯಗಳು ಸಿಕ್ಕದೆ ಜನಗಳು ವಿಪರೀತ ತೊಂದರೆ ಪಡುತ್ತಿದ್ದಾರೆ. ಇದನ್ನು ನೋಡಿದರೆ ಈ ಸರ್ಕಾರದಲ್ಲಿ ಎಷ್ಟರ ಮಟ್ಟಿನ ಒಂದು ಅವಕ್ಷತೆ ಇದೆಯೆಂಬುದು ಗೊತ್ತಾಗುತ್ತದೆ. ಇಷ್ಟು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

Sri DODDATHIMMAIAH (Gulur).—Madam Speaker, I beg to suport the Motion of Thanks moved by my honourable friend to the address of our beloved Governor.

The whole theme of the Governor's Address has been–and rightly so–, about the tragedy that has taken place in the northern parts of our State. The scarcity of basic needs resulting in the human sufferings is unprecedented in the history of our State and this is mainly due to the frown of Nature. Our hearts go out to the suffering bretheren in this part of the country. Madam, there is politics in everything ; We have seen the worst politics in huger also. Madam, the famine and dought are not new to us and there has never been a single year in our recorded history when some part or the other of the country has not been under the grip of a natural calamity. But one lesson of history is that we did not learn from hisory because though this occurrence of famine, drought and floods etc., has become a common feature, Government have not considered a permanent agency so far to tackle it.

Today, famine, drought and floods have reached such a stage where we have to think of a task force which acts in lightening speed and meet the situation. Madam, Government has taken steps to form a committee at the State level and I wish they form committee in the district level and whenever such situation arises, I hope the Government will tackle the problem of famine and scarcity conditions very successfully.

2-30 P.M.

Madam, our this Connection I wish to make a suggestion to the Government to have a permanent agency on the lines of the CARE of the American Institution–an institution on these lines can be be formed and established in our State also–with the co-operation and the resources of the public sector and private sector. This can be tried and considered by the Government.

Madam, ou Government is wedded to establish a socialistic order in the economic life of our State and an egalitarian society. As a first step Government has introduced land reforms which are going to become effective shortly and in this connection, I wish to submit the Government should see that the benefits of the reform should reach the common masses. They cannot be duped or cheated by

the vested interests and other forces which are opposed to any reform. Why I say this is, in this country, there are forces which taking advantage of the ignorance and illiteracy of the masses, try to deprive the masses of the benefits and advantages that may accrue to them on account of these reforms. Similarly, in our country, there are certain beaurocratic elements in the machinery of the Government which is directly in charge of implementing these reforms and this machinery should be tuned up to rise to the occasion and to meet the requirements of the socialistic State.

Madam, in addition to the land reforms, I wish to submit to the Government that there are certain rules, acts in this State which provides scope for the concentration of wealth in a few hands. The fundamental task of the Government is to prevent the scope of concentration of wealth in order to establish the socialistic order in the society. Therefore, I submit that a committee may be constituted to go into these rules, acts, etc. which may provide scope for the concentration of wealth, for example the system of contracts in the PWD and Excise Department. These Acts and Rules are to be amended as early as possible so that the concentration of wealth may be stopped, and a large number of people may get the benefit of these contracts. I think this is the first step and one of the good steps that may go a long way to establish a socialistic order in our society.

Madam, with a view to establish socialistic order in the society, I submit to the Government that on the same lines as there is reservation of jobs for the Schedule Caste and backward class people, the Contracts in the various Departments should also be reserved for the backward classes and the Schedule Caste people so that these people may also come up and share in the economic prosperity.

Madam, as the population grows, the land cannot grow. Therefore, in the rural parts, we connot provide employment unless you provide a net-work of small scale industries. After making a survey of the industrial potentialities the Government should try to establish a net-work of small scale industries which may provide opportunities of employment as stated by my friend Sri Anwar.

One more subject, I want to refer to is about the Public Service Commission. Madam, in the past ten years, certain class of appointments have been taken away from the purview of the P.S.C. thereby depriving the chances of Schedule Cast and backward classes to get Government jobs. For example, recently the Police Department was taken away, and certain appointments were made by the Department. Day before yesterday when a question was being answered, it was said that there are no sufficient number of Schedule Caste people recruited. I take it that this is only a means employed to by-pass the P.S.C. candidates. I appeal to the Government that persons for all classes of appointments should be selected only by the P.S.C. so that reservation

(SRI DODDATHIMMIAH)

as prescribed for the Schedule Caste and backward Classes may be implemented.

Last but not least, Madam, I want to submit to the House that there are certain people in this country who indulge in the destructive criticism of great personalities, but for whose sacrifice we would not have been here. I do not want to criticise any individual. Even the eminence and greatness of Mahatma Gandhi has not escaped the lash of their tongue. I only tell these friends, that criticism of Mahatma Gandhi and people of that eminence should not be lightly made and we must remember that it is on account of their guidance and sacrifice, we are able to sit here. I only seek to tell them that such criticism is as ludicrous as trying to hold a candle to the garish sun. Thank you.

ಶ್ರಿ ಎಚ್. ಜಿ. ಚನ್ನಪ್ಪ (ಮಾಗಡಿ).—ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣಕ್ಕೆ ತಂದಿರುವ ವಂದನಾ ನಿರ್ಣಯದ ಮೇರೆ ಮಾತನಾಡುತ್ತಾ, ಕೆಲವು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಇಲ್ಲಿ ನಮ್ಮ ರಾಜ್ಯದ ಬರಗಾಲದ ವಿಷಯದಲ್ಲಿ ಅತಿ ಹೆಚ್ಚಿನ ಮಟ್ಟದ ಚರ್ಚೆಯಾಗುತ್ತಾ ಇದೆ. ಉತ್ತರ ಜಿಲ್ಲೆಗಳಲ್ಲಿ 38 ತಾಲ್ಲೂಕುಗಳಲ್ಲಿ ಇಂತಹ ತೊಂದರೆಗಳು ಆಗಿವೆ ಎಂದು ಈಗಾಗಲೇ ಮಾತನಾಡಿದ ಅನೇಕ ಸದಸ್ಯರು ಹೇಳಿದ್ದಾರೆ. ಆದರೆ ಈ ರೀತಿಯ ಬರಗಾಲ ಮೈಸೂರು ರಾಜ್ಯದ ಎಲ್ಲಾ ಭಾಗಗಳಲ್ಲಿಯೂ ಇದೆ. ಒಂದು ಭಾಗದಲ್ಲಿ ಹೆಚ್ಚಾಗಿ ಇರಬಹುದು ; ಇನ್ನೊಂದು ಭಾಗದಲ್ಲಿ ಸ್ವಲ್ಪ ಕಡಿಮೆ ಇರ ಬಹುದು. ಆದರೆ ಅಂತರ ಜಾಸ್ತಿ ಏನೂ ಇಲ್ಲ. ಇವೊತ್ತಿನ ದಿವಸ ನೆವ್ಮಲ್ಲರ ದೃಷ್ಟಿಕೋನವು ಕೇವಲ ಮೂರು ಜಿಲ್ಲೆಗಳಿಗೆ ಹರಿಯುತ್ತಿದೆಯೇ ಹೊರತು ನಮ್ಮ ಹಳೆಯ ಮೈಸೂರಿನ ಕೆಲವು ಬರಗಾಲ ಪ್ರದೇಶಗಳ ಕಡೆ ಹರಿಯುತ್ತಾ ಇಲ್ಲ. ಆದ್ದರಿಂದ ಅಲ್ಲಿಯ ಜನರು ಅನೇಕ ತೊಂದರೆ ಗಳನ್ನು ಎದುರಿಸುತ್ತಿದ್ದಾರೆ. ಇವತ್ತು ಅಲ್ಲಿ ಮಾಡುತ್ತಿದ್ದ ಕೆಲಸ ಕಾರ್ಯಗಳನ್ನು ತಕ್ಷಣ, ನಿಲ್ಲಿಸಿ, ಕೊಟ್ಟಿರತಕ್ಕಂತಹ ಗ್ರಾಂಟನ್ನು ಇನ್ನೂ ಕಡಮೆಮಾಡಿ ಎಲ್ಲವನ್ನೂ ಉತ್ತರದ ಕಡೆ ತೆಗೆದುಕೊಂಡು ಹೋಗುತ್ತಿದ್ದಾರೆ. ಇದರಿಂದ ತಾತ್ಕಾಲಿಕವಾದ ಏನೊಂದು ತೊಂದರೆ ಅಲ್ಲಿ ಕಾಣುತ್ತಿದೆ, ಅದು ಇನ್ನೂ ಹೆಚ್ಚಿ ಒಂದು ತೀವ್ರವಾದಂತಹ ಸಮಸ್ಯೆಯು ಆ ಪ್ರದೇಶಗಳಲ್ಲಿ ತಲೆ ದೋರಬಹುದು. ಈಗ ಬರಗಾಲ ಪ್ರದೇಶಗಳಲ್ಲಿ ಕೆಲಸಕಾರ್ಯಗಳನ್ನು ಮುಂದುವರಿಸಿಕೊಂಡು ಹೋಗುವುದರ ಜೊತೆಗೆ ಹಳೆಯ ಮೈಸೂರಿನಲ್ಲಿ ಏನೊಂದು ಬರಗಾಲದ ಸಮಸ್ಯೆಗಳನ್ನು ಜನರು ಎದುರಿಸುತ್ತಿದ್ದಾರೆ. ಅದರ ಕಡೆಯೂ ಸರ್ಕಾರ ಹೆಚ್ಚಿನ ಗಮನವನ್ನು ಕೊಡಬೇಕಾಗುತ್ತದೆ. ಇಲ್ಲದಿದ್ದರೆ ಅಲ್ಲಿಯೂ ಸಮಸ್ಯೆ ಉಲ್ಬಣಗೊಂಡು ದೇಶದಲ್ಲಿ ಒಂದು ಆಹಾಕಾರವೇ ಜಾಸ್ತಿಯಾಗಿ ಕಾಣಬಹುದು. ಈಗ ಈ ಬರಗಾಲದ ಸಮಸ್ಯೆ ನಮ್ಮ ದೇಶಕ್ಕೆ, ಅದರಲ್ಲಿಯೂ ನಮ್ಮ ಮೈಸೂರ ರಾಜ್ಯಕ್ಕೆ ಹೊಸದಲ್ಲ, ಪ್ರತಿವರ್ಷವೂ ಒಂದಲ್ಲ, ಒಂದು ಭಾಗದಲ್ಲಿ ಬರಗಾಲದ ಸಮಸ್ಯೆಯನ್ನು ಕಾಣು ತ್ತಿದ್ದೇವೆ. ಇದರ ಪರಿಹಾರವನ್ನು ನೀವು ಕಂಡುಹಿಡಿಯದೇ ಇರುವುದರಿಂದ ನಮಗೆ ಈಗ ಏನೇನೂ ಆಗಬೇಕೆಂಬುದನ್ನು ನಾನೂ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮೊಟ್ಟ ಮೊದಲನೆಯದಾಗಿ ನೀರಾವರಿ ಯೋಜನೆಗಳನ್ನು ಮಾಡಬೇಕು. ಆಗ ಬರಗಾಲದ ನಿವಾರಣೆಗಳಿಗೆ ಅನುಕೂಲ ವಾಗುತ್ತದೆ. ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೂ ಅವಕಾಶವಾಗುತ್ತದೆಂದು ನಾನು ಮನಗಂಡಿದ್ದೇನೆ. ಇವತ್ತು ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ಕಟ್ಟುವುದಕ್ಕೆ ಸರ್ಕಾರದವರು ಹೆಚ್ಚಿನ ಗಮನವನ್ನು ಕೊಡುತ್ತಿದ್ದೀರಿ. ಎಲ್ಲೆಲ್ಲಿ ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು ತೆಗೆದು ಕೊಳ್ಳುವುದಕ್ಕೆ ಸಾಧ್ಯವಿದೆಯೋ ಅಂತಹ ಪ್ರದೇಶಗಳಲ್ಲಿ ಸಣ್ಣ ನೀರಾವರಿ ಯೋಜನೆಗಳನ್ನು ಕೂಡಲೇ ಮಾಡಬೇಕು. ಅಂತಹ ಪ್ರದೇಶಗಳಲ್ಲಿ ಲಿಫ್ಟ್ ಇರ್ರಿಗೇಷನ್ ಪ್ರಾಜೆಕ್ಟ್‌ಗಳನ್ನೂ ಸಹ ಕೈಗೊಳ್ಳ ಬೇಕು. ಇಲ್ಲದೇ ಹೋದರೆ ಬರಗಾಲವನ್ನು ನಿವಾರಿಸುವುದಕ್ಕೆ ಖಂಡಿತವಾಗಿ ಸಾಧ್ಯವಾಗುವು ದಿಲ್ಲ. ನಾನು ಸಾಮಾನ್ಯವಾಗಿ ಹೇಳುವುದಾದರೆ, ಪ್ರತಿವರ್ಷವೂ ಹಳೆಯ ಮೈಸೂರಿನಲ್ಲೆಯಾಗಲಿ ಹೊಸ ಮೈಸೂರಿನಲ್ಲಿ ಯಾಗಲಿ ಯಾವುದಾದರೂ ಒಂದು ಭಾಗದಲ್ಲಿ ಕ್ಷಾಮವನ್ನು ಕಾಣುತ್ತಲೇ ಇದ್ದೇವೆ. ಆದ್ದರಿಂದ ನೀರಾವರಿ ಕಾಮಗಾರಿಗಳನ್ನು ಖಂಡಿತವಾಗಿ ಕೂಡಲೇ ಕ್ಷಾಮಪೀಡಿತ ಪ್ರದೇಶಗಳಲ್ಲಿ ಕೈಗೊಳ್ಳಬೇಕು. ಅದಕ್ಕೆ ಸರ್ಕಾರದವರು ಆದ್ಯತೆ ಕೊಡಬೇಕೆಂದು ನಾನು

ಹೇಳುತ್ತೇನೆ. ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳಾಗಲೀ, ಅವುಗಳ ಹಿಂಭಾಗದಲ್ಲಿ ಹಾಗೂ ಕ್ಯಾಚ್‌ಮೆಂಟ್ ಪ್ರದೇಶಗಳಲ್ಲಿ ಲಿಫ್ಟ್ ಇರಿಗೇಷನ್ ಕಾರ್ಯಕ್ರಮಗಳನ್ನು ತೆಗೆದುಕೊಳ್ಳದೇ ಹೋದರೆ, ನಿಜವಾಗಿಯೂ ಆ ಭಾಗದ ಜನರು ಜೀವನತಪರ್ಯಂತ ಬರಗಾಲವನ್ನು ಅನುಭವಿಸಬೇಕಾಗುತ್ತದೆ. ಅಂತಹ ಸ್ಥಳಗಳಲ್ಲಿ ಜನಗಳು ನೀರನ್ನು ಉಪಯೋಗಿಸುವ ವ್ಯವಸ್ಥೆಮಾಡಬೇಕು. ಈಗ ನಮ್ಮ ಮುಂದೆ ಪಡಿತರ ಪದ್ಧತಿ ವಿಷಯ ಬೇರೆ ಬರುತ್ತಿದೆ. ಈಗಾಗಲೇ ಸಕ್ಕರೆ ನಿಯಂತ್ರಣಕ್ಕೋಸ್ಕರ ಸಾಕಷ್ಟು ಕಣ್ಣಿನಲ್ಲಿ ಕಣ್ಣಿಟ್ಟು ನೋಡುತ್ತಿದ್ದರೂ, ಅನೇಕ ಜನರು ಅದರ ಒಂದು ರಾಭ ಕ್ಕೋಸ್ಕರ ತುಂಬಾ ಅದನ್ನು ದುರುಪಯೋಗ ಮಾಡುತ್ತಿದ್ದಾರೆ. ಇದು ಇತ್ತೀಚೆಗೆ ಬಹಳವಾಗಿ ಹೆಚ್ಚಾಗುತ್ತಿದೆ. ಇದನ್ನು ಸರ್ಕಾರದವರು ಕೂಡಲೇ ತಡೆಗಟ್ಟಬೇಕು. ಇದನ್ನು ಮಾಡಬೇಕಾದರೆ ಪೂರ್ಣವಾಗಿ ಪಡಿತರ ಪದ್ಧತಿಯನ್ನು ಜಾರಿಗೆ ತರಬೇಕು. ಇಲ್ಲದೇ ಹೋದರೆ ಪೂರ್ಣವಾಗಿ ಅದು ಓಪನ್ ಮಾರ್ಕೆಟ್ಟಿನಲ್ಲಿ ಸಿಗುವಂತೆ ಮಾಡಬೇಕು. ಸಕ್ಕರೆ ಒಂದು ಕಡೆ ಒಂದು ಕೆ.ಜಿ.ಗೆ ಏರಡೂವರೆ ರೂಪಾಯಿಗಳಂತೆಯೂ ಇನ್ನೊಂದು ಕಡೆ ಒಂದು ಕೆ.ಜಿ.ಗೆ 5 ರೂಪಾಯಿಗಳಂತೆಯೂ ವ್ಯಾಪಾರವಾಗುತ್ತಿದೆ. 50, 100 ರೂಪಾಯಿಗಳಷ್ಟು ಹೆಚ್ಚಿಗೆ ಕೊಟ್ಟು ಬ್ಲಾಕ್‌ಮಾರ್ಕೆಟ್ ವ್ಯಾಪಾರಗಾರರು ಕೊಳ್ಳುವುದು ಜಾಸ್ತಿಯಾಗುತ್ತಿದೆ. ಆದ್ದರಿಂದ ಕಾಳಸಂತೆ ವ್ಯಾಪಾರಗಾರರನ್ನು ಪ್ರಚೋದನೆ ಮಾಡುವುದು ಹೆಚ್ಚಾಗುತ್ತದೆ. ಆದ್ದರಿಂದ ಇದನ್ನು ರದ್ದುಮಾಡಬೇಕೆಂದು ನಾನು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ಇದೇ ರೀತಿಯಲ್ಲಿ ಅಕ್ಕಿ ಮತ್ತು ಗೋಧಿ ವಿಷಯದಲ್ಲಿಯೂ ಸೂಕ್ತ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಸರ್ಕಾರದವರು ಈ ಪದಾರ್ಥಗಳನ್ನು ಪೂರ್ಣವಾಗಿ ಅವರ ಒಂದು ಹತೋಟಿಗೆ ತೆಗೆದುಕೊಳ್ಳಬೇಕು. ಇಲ್ಲದೇ ಹೋದರೆ ಇರತಕ್ಕ ನಿರ್ಬಂಧವನ್ನು ರದ್ದು ಗೊಳಿಸಬೇಕು. ಇನ್ನು ಮತ್ತೊಂದು ವಿಷಯ. ಲೆವಿ ಬತ್ತದಬೆಲೆಯನ್ನು ಗೊತ್ತು ಮಾಡಿರುವುದು ಬಹಳ ಕಡಿಮೆ. ರೈತನಿಗೆ ಬೇಕಾದಂಥ ವ್ಯವಸಾಯ ವನ್ತುಗಳ ಧಾರಣೆ ವಿಪರೀತವಾಗಿ ಜಾಸ್ತಿಯಾಗುತ್ತಿದೆ. ನಾವು ಹಿಂದಿನ ಬೆಲೆಗೂ ಈಗಿನ ಬೆಲೆಗೂ ಹೋಲಿಸುವುದಾದರೆ, ಈಗಿನ ಬೆಲೆಗೂ ಹಿಂದಿನ ಬೆಲೆಗೂ ಸಿಲುಕಲಾರದಷ್ಟು ವ್ಯತ್ಯಾಸವಿದೆ. ಈಗ ಒಂದು ರೀತಿಯಾದಂಥ ಬೆಲೆಯನ್ನುಲೆವಿ ಬತ್ತಕ್ಕೆ ನಿಗದಿಮಾಡಿದ್ದಾರೆ. ಅದನ್ನು ಕಡಿಮೆ ದರದಲ್ಲಿ ಕೊಡುತ್ತೇವೆಂದು ಹೇಳಿದರು. ಇದರಿಂದೇನಾಗುತ್ತದೆ ಯೆಂದರೆ, ವ್ಯವಸಾಯಮಾಡುವುದನ್ನು ಕಡಿಮೆಮಾಡುತ್ತಾರೆ. ಆದ್ದರಿಂದ ಧಾನ್ಯಗಳ ಬೆಲೆಯನ್ನು ನಿಗದಿಮಾಡುವಾಗ ಈಗ ಏನು ಲೋಕಲ್ ಮಾರ್ಕೆಟ್ ಇದೆಯೋ ಅದಕ್ಕೆ ಸ್ವಲ್ಪ ಹೆಚ್ಚು ಕಡಿಮೆ ಇದ್ದರೆ ಆಗ ಅದು ಒಂದು ರೀತಿಯಲ್ಲಿ ಉತ್ತೇಜನಕಾರಿಯಾಗಿರುತ್ತದೆ. ಈಗಿನ ಲವಿ ಬತ್ತದ ಬೆಲೆಯನ್ನು ಸ್ವಲ್ಪಮಟ್ಟಿಗಾದರೂ ಜಾಸ್ತಿಮಾಡಿ ಬೆಳೆಯುತಕ್ಕ ರೈತರಿಗೆ ಅನುಕೂಲ ಮಾಡಿಕೊಡಬೇಕು. ರೈತರಿಗೆ ಉತ್ತೇಜನಕಾರಿಯಾದಂಥ ಬೆಲೆಗಳನ್ನು ಕೊಡಬೇಕು. ನಾನು ಇನ್ನು ಅನೇಕ ವಿಷಯಗಳನ್ನು ಮಾತನಾಡಬೇಕಾಗಿತ್ತು. ನನಗೆ ಕೇವಲ 5 ನಿಮಿಷಗಳನ್ನು ಕೊಟ್ಟಿದ್ದರಿಂದ, ಎಲ್ಲವಿಷಯಗಳನ್ನು ಮಾತನಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಮೊದಲು ಮಾತನಾಡಿದವರಿಗೆ 15, 20, 30 ನಿಮಿಷಗಳವರೆಗೆ ಕಾಲಾವಕಾಶವನ್ನು ಕೊಟ್ಟಿರಿ. ನನಗೇಕೆ ಈ ರೀತಿಯಾಗಿ ಕೊಡುತ್ತೀರೋ ನನಗೆ ಅರ್ಥವಾಗುತ್ತಾ ಇಲ್ಲ.

ಅಧ್ಯಕ್ಷರು.—ತಾವು ಚೀಟಿ ಬರೆದುಕೊಟ್ಟು ಹೊರಗೆ ಹೋದರೆ ನಾನೇನು ಮಾಡಲಿ ?

ಶ್ರೀ ಎಚ್. ಜಿ. ಚನ್ನಪ್ಪ.—ನಾನು ಎಲ್ಲಿಗೂ ಹೋಗಿಲ್ಲ. ಮೂರು ದಿವಸಗಳಿಂದಲೂ ಇಲ್ಲಿಯೇ ಕೂತಿದ್ದೇನೆ. ನನ್ನ ಚೀಟಿ ತಮ್ಮಲ್ಲಿದ್ದರೂ ನನಗೆ ತಾವು ಯಾವಾಗ ಅವಕಾಶ ಕೊಡುತ್ತೀರೋ, ನನ್ನ ಹೆಸರು ಯಾವಾಗ ಬರುತ್ತದೋ ಎಂಬುದು ಗೊತ್ತಿಲ್ಲ. ಆದರೆ ಒಟ್ಟಿನಲ್ಲಿ ತಾವು ಇಷ್ಟು ತಾರತಮ್ಯವನ್ನು ಮುಂದೆ ಯಾರಿಗೂ ಮಾಡಬಾರದೆಂದು ಮನವಿ ಮಾಡಿಕೊಂಡು ಇನ್ನುಮುಂದೆ ಈ ಸಭೆಯ ಸದಸ್ಯರೆಲ್ಲರಿಗೂ ಮೊದಲನಿಂದಲೇ ಸಮಾನವಾದ ಕಾಲಾವಕಾಶವನ್ನು ಕೊಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಕ್ತಾಯಮಾಡುತ್ತೇನೆ.

ಕೊನೆಯದಾಗಿ, ನನಗೆ ಇಷ್ಟು ಹೊತ್ತು ಈ ಸಭೆಯಲ್ಲಿ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ನಾನು ಅಧ್ಯಕ್ಷರಿಗೆ ಹೃತ್ಪೂರ್ವಕವಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್ (ಸಿರಸಿ).—ಮಾನ್ಯ ಅಧ್ಯಕ್ಷಣಿಯವರೇ, ರಾಜ್ಯಪಾಲರ ಭಾಷಣದ ಮೇಲೆ ಅಭಿನಂದನೆಗಳನ್ನು ಅರ್ಪಿಸುವ ಈ ನಿರ್ಣಯದ ಮೇಲೆ ಕೆಲವು ರಚನಾತ್ಮಕ ಸಲಹೆಗಳನ್ನು ಈ ಸರ್ಕಾರಕ್ಕೆ ಕೊಡುತ್ತಾ ಹಾಗೂ ಅದನ್ನು ಪುಷ್ಟೀಕರಿಸುತ್ತಾ ಕೆಲವಾರು ಅಂಶಗಳನ್ನು ಮಾತ್ರ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಈ ಸರ್ಕಾರ ಯಾವ ಧ್ಯೇಯ ಧೋರಣೆಗಳಿಂದ ಅಸ್ತಿತ್ವಕ್ಕೆ ಬಂದಿದೆ ಎಂಬ ದನ್ನು ನಾವು ಈಗ ಗಮನಿಸ ಬೇಕಾಗಿದೆ. ಸಮಾಜ

(ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್)

ವಾದೀ ಸಮಾಜವನ್ನು, ಜಾತ್ಯಾತೀತ ಸಮಾಜವನ್ನು ಮತ್ತು ಜನ ಜೀವನದಲ್ಲಿ ಸಮಾನತೆಯನ್ನು ಒದಗಿಸಿಕೊಡಬೇಕೆಂಬ ಒಂದು ಗುರಿಯ ಮೇಲೆ ನಾವು ಈ ಸರ್ಕಾರವನ್ನು ರಚನೆಮಾಡಿದ್ದೇವೆ. ಆದ್ದರಿಂದ ಈ ಸರ್ಕಾರ ಆ ಒಂದು ದಿಕ್ಕಿನಲ್ಲಿ ಕಾರ್ಯ ಮಾಡದೇ ಹೋದರೆ ನಿಜವಾಗಿಯೂ ಅದು ರೋಪಮಾಡಿದಂತಾಗುತ್ತದೆ. ಈಗಾಗಲೇ ಉತ್ತರ ಕನ್ನಡ ಜಿಲ್ಲೆಯಲ್ಲಿ ಒಂದು ವಿಧವಾದಂಥ ಬರಗಾಲ ಬಂದಿದೆ. ಈ ಬರಗಾಲ ಪರಿಸ್ಥಿತಿ ಇನ್ನೂ ಕೆಲವು ಕಡೆಗಳಲ್ಲಿ ಅಂದರೆ, ಗುಲ್ಬರ್ಗಾ, ರಾಯಚೂರು, ಬೆಳಗಾಂ ಮುಂತಾದ ಜಿಲ್ಲೆಗಳಲ್ಲಿಯೂ ಹಬ್ಬಿದೆ. ಉತ್ತರ ಕನ್ನಡ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿರತಕ್ಕ ಹಾಗೂ ಮಲೆನಾಡು ಪ್ರಾಂತವಾದ ಶಿವಮೊಗ್ಗದಲ್ಲಿರತಕ್ಕ ಅಡಿಕೆ ಬೆಳೆಗಾರರ ಪರಿಸ್ಥಿತಿ ಏನಾಗಿದೆಯೆಂದರೆ, ಬಹಳ ಕಷ್ಟದ ಪರಿಸ್ಥಿತಿ ಅವರಿಗೆ ಉಂಟಾಗಿದೆ. ಆ ಬಗ್ಗೆ ಅನೇಕ ರೀತಿಯಲ್ಲಿ ನಾನು ಮನವಿಯನ್ನು ಸಲ್ಲಿಸಿದ್ದೇನೆ. ಈ ವಿಚಾರದಲ್ಲಿ ವ್ಯವಸಾಯ ಮಂತ್ರಿಗಳು ಏನು ಮಾಡಿದ್ದಾರೋ ಗೊತ್ತಿಲ್ಲ. ಇವತ್ತು ಒಂದು ಲಕ್ಷ ಜನರು ಅನ್ನ, ಆಹಾರ ವಿಲ್ಲದೆ ಅದರಲ್ಲಿಯೂ ಅಡಿಕೆ ಬೆಳೆಯುವವರು ತುಂಬಾ ತೊಂದರೆಯಲ್ಲಿದ್ದಾರೆ. ಇವತ್ತು ಒಂದು ಕ್ವಿಂಟಾಲಿಗೆ ಬೆಲೆ 600-800 ರೂಪಾಯಿಗಳಿಂದ 200-400 ರೂಪಾಯಿಗಳಿಗೆ ಇಳಿದಿದೆ. ಅವರಿಗೆ ಕೊಂದಾಯ ಕೊಡುವುದಕ್ಕೆ ಶಕ್ತಿ ಇಲ್ಲ. ಸಾಲ ಕೊಡುವುದಕ್ಕೂ ಆಗಿಲ್ಲ. ಕೋ ಆಪರೇಟಿವ್ ಸೊಸೈಟಿಗಳಲ್ಲಿ ತೆಗೆದುಕೊಂಡಂಥ ಸಾಲವನ್ನು ತೀರಿಸುವುದಕ್ಕೂ ಸಾಧ್ಯವಾಗದೆ ಅವರು ತುಂಬಾ ಚಿಂತಾಜನಕವಾಗಿದ್ದಾರೆ. ಇದಕ್ಕೆ ಒಂದು ಎಕ್ಸ್‌ಪರ್ಟ್ ಕಮಿಟಿ ಇದ್ದರೂ ಅವರಿಗೆ ರಕ್ಷಣೆ ಸಾಲದು. ಇದಕ್ಕೆ ಬೇರೆ ಫೆಡರೇಷನ್ ಮಾಡುತ್ತೀರಿ, ಬೋರ್ಡ್ ಮಾಡುತ್ತೀರಿ. ಆರು ತಿಂಗಳಾದರೂ ಅವರು ಯಾವ ಕೆಲಸವನ್ನೂ ಸಹ ಮಾಡದೆ ಪೋಸ್ಟ್‌ಪೋನ್ ಮಾಡುತ್ತಿದ್ದಾರೆ ಹೇಗೆ ? ಆದ್ದರಿಂದ ಈ ಪರಿಸ್ಥಿತಿಯನ್ನು ಕೂಡಲೇ ಸರಿಪಡಿಸುವುದಕ್ಕೆ ವ್ಯವಸಾಯ ಮಂತ್ರಿಗಳು ಗಮನಕೊಟ್ಟು ಕೂಡಲೇ ಅವರಿಗೆ ರಕ್ಷಣೆ ಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಒಂದು ಲಕ್ಷ ಎಕರೆ ಜಮೀನನ್ನು ಬಡವರಿಗೆ, ಭೂಹೀನರಿಗೆ ಕೊಡಬೇಕೆಂದು ಹೋರಾಟ ನಡೆಸಿ ನುಮಾರು 15 ವರ್ಷಗಳಿಂದಲೂ ಚಳುವಳಿ ಮಾಡಿದ್ದರೂ ಇನ್ನೂ ಅದು ಬಡುಗಡೆಯಾಗಲಿಲ್ಲ. ಮಾನ್ಯ ಅರಣ್ಯ ಮಂತ್ರಿಗಳು ಅದನ್ನು ಈಗ ರದ್ದುಮಾಡಿದ್ದಾರೆ. ಇದರಿಂದ ಇವತ್ತು ಅನೇಕ ಬಡವರಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ಕೂಡಲೇ ಮಂತ್ರಿಮಂಡಲದಲ್ಲಿ ಒಂದು ತೀರ್ಮಾನವನ್ನು ಇದರ ಬಗ್ಗೆ ತೆಗೆದುಕೊಂಡು ಅದರಲ್ಲಿಯೂ ಸಮಾಜವಾದ ರಚನೆಮಾಡುವ ಜನರು ಬಡ ಜನರಿಗೆ, ಭೂಹೀನರಿಗೆ ವಸತಿ ಸೌಕರ್ಯಗಳನ್ನು ಕೊಡುವುದಕ್ಕೆ ವ್ಯವಸ್ಥೆಮಾಡಬೇಕು. ಇಲ್ಲದೇ ಹೋದರೆ ಅಲ್ಲಿನ ಪರಿಸ್ಥಿತಿ ಬಹಳ ಚಿಂತಾಜನಕವಾಗಿ ನಾಳೆ ಎಲ್ಲ ಜನರೂ ಸೇರಿ ಒಂದು ಕ್ರಾಂತಿ ಮಾಡುವ ಪರಿಸ್ಥಿತಿ ಬರುತ್ತದೆ.

ಮತ್ತೊಂದು ಅಂಶವೇನೆಂದರೆ ನಮ್ಮ ಅರಣ್ಯ ಮಂತ್ರಿಗಳು ಇನ್ನೊಂದು ಆರ್ಡರನ್ನು ಜಾರಿಗೆ ತಂದಿದ್ದಾರೆ. ನಿರ್ಗತಿಕನಾದವನು ಯಾವನೇ ಆಗಲೀ ಕಾಡಿನಲ್ಲಿ ಮರವನ್ನು ಪಡೆದು ಅದನ್ನು ತನ್ನ ತಲೆಯ ಮೇಲೆ ತೆಗೆದುಕೊಂಡು ಬಂದರೆ, ಕೂಲಿ ಒಂದು ರೂಪಾಯಿ ಕೊಡಬೇಕೆಂದು ಹೇಳಿದ್ದಾರೆ. ಕಾಡಿನಲ್ಲಿ ಇದರ ಬಗ್ಗೆ ಹಿಂದೆ ಒಂದು ಸಿವಿಲೇಜ್ ಅಥವಾ ಅವಕಾಶ ಬಡಜನರಿಗೆ ಇತ್ತು. ಈಗ ಅದರ ಬಗ್ಗೆ ಸ್ವಲ್ಪಮಟ್ಟಿಗೆ ಕೊಂದರೆಯಾಗಿದೆ. ಆದ್ದರಿಂದ ಕೂಲಿ ಒಂದು ರೂಪಾಯಿ ಇರುವುದನ್ನು 5 ರೂಪಾಯಿಗಳಿಗೆ ಮಾಡಿ. ಇಲ್ಲದಿದ್ದರೆ ಬಡವರಿಗೆ ಜೀವನ ಪರಿಸ್ಥಿತಿ ತುಂಬಾ ಚಿಂತಾಜನಕವಾಗಿದೆ. ಆ ಒಂದು ಪರಿಸ್ಥಿತಿಗೆ ಈಗ ತಂದಿದ್ದಾರೆ. ಆದ್ದರಿಂದ ಅರಣ್ಯ ಮಂತ್ರಿಗಳು ಮತ್ತೆ ಇದನ್ನು ಪರಿಶೀಲನೆಮಾಡಿ ಅವರಿಗೆ ರಕ್ಷಣೆ ಕೊಡಬೇಕು. ಈಗಾಗಲೇ ಇದರ ಬಗ್ಗೆ ಚಳುವಳಿಯೂ ನಡೆದಿದೆ. ಜಿಲ್ಲಾ ಕಾಂಗ್ರೆಸ್ ಕಮಿಟಿಯಿಂದಲೂ ಇದರ ಬಗ್ಗೆ ಒಂದು ನಿರ್ಣಯವನ್ನೂ ಸಹ ಮಾಡಿ ಸರ್ಕಾರಕ್ಕೆ ಕಳುಹಿಸಿದ್ದಾರೆ. ಆದುದರಿಂದ ಸರ್ಕಾರದವರು ಬಡವರ ಉದ್ಧಾರಕ್ಕಾಗಿ ಇದರಲ್ಲಿರತಕ್ಕ ಕಷ್ಟವನ್ನು ನಿರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸಿರ್ಸಿಯಲ್ಲಿ ಬಡಬಗ್ಗರಿಗೆ 2000 ಪ್ಲಾಟುಗಳನ್ನು ಹಂಚಿದ್ದಾರೆ. ಆ ಪ್ಲಾಟುಗಳನ್ನು ಕೆಲವರು ಅರಣ್ಯ ವಿಭಾಗದ ಪ್ರದೇಶದಲ್ಲಿವೆಯೆಂದೂ ಇನ್ನು ಕೆಲವರು ಮುನಿಸಿಪಲ್ ಏರಿಯಾದಲ್ಲಿರುತ್ತವೆಂದೂ ಹೇಳುತ್ತಿದ್ದಾರೆ. ಮೊನ್ನೆ ಅಲ್ಲಿಗೆ ನಮ್ಮ ಅರಣ್ಯ ಖಾತೆಯ ನಟವರು ಬಂದಿದ್ದಾಗ ಆ ಪ್ಲಾಟುಗಳನ್ನು ಬೇಗ ಏರೇವಾರಿ ಮಾಡಿಸುವುದಾಗಿ ಭರವಸೆಯನ್ನು ಕೊಟ್ಟು ಬಂದಿದ್ದರು. ಆದರೆ ಅಲ್ಲಿ ಆ ಪ್ಲಾಟುಗಳ ಹಂಚಿಕೆ ಇನ್ನೂ ನಡೆದಿಲ್ಲ. ಅದನ್ನು ಸರ್ಕಾರದವರು ಕೂಡಲೆ ನರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲದೆ ಇಲ್ಲಿಯವರೆಗೂ ಅಲ್ಲ ಷೆಡ್ಯೂಲ್ಡ್‌ಕ್ಯಾಸ್ಟ್ ನವರಿಗೆ ಮತ್ತು ಷೆಡ್ಯೂಲ್ಡ್‌ಟ್ರೈಬ್ಸ್‌ನವರಿಗೆ ವರ್ಷಕ್ಕೆ 200 ರೂಪಾಯಿಗಳವರೆಗೂ ಕಟ್ಟಿಗೆ

ಯನ್ನು ಕಾಡಿನಿಂದ ತಂದು ಮಾರಾಟ ಮಾಡಿಕೊಳ್ಳುವುದಕ್ಕೆ ಒಂದು ಅವಕಾಶವಿತ್ತು. ಈಗ ಅದನ್ನು ತಪ್ಪಿಸಿದ್ದಾರೆ. ತಪ್ಪಿಸಿದರೆ ಹೋಗಲಿ ಅದಕ್ಕೆ ಅವರಿಗೆ ಒಂದು ಬೇರೆ ಪರಿಹಾರ ಮಾರ್ಗವನ್ನು ಒದಗಿಸುವುದು ಬೇಡವೇ? ಅದನ್ನು ಮಾಡದಿರುವುದು ಅವರಿಗೆ ಬಹಳ ಅನ್ಯಾಯ ಮಾಡಿದಂತಾಗಿದೆ. ಅದನ್ನು ಸರ್ಕಾರದವರು ಕೂಡಲೆ ಸರಿಪಡಿಸಬೇಕೆಂದು ಹೇಳುತ್ತೇನೆ.

ಇನ್ನು ಈ ಪರಿಶಿಷ್ಟವರ್ಗದವರ ಅಸ್ಪೃಶ್ಯತೆ ಅಳಿಯದಿದ್ದರೆ ಗಳಿಸಿದ ಸ್ವಾತಂತ್ರ್ಯ ಉಳಿಯುವುದಿಲ್ಲ ಎಂದು ಮಹಾತ್ಮಾ ಗಾಂಧಿಯವರು ಹೇಳಿದ್ದರು. ಇವರ ಅಸ್ಪೃಶ್ಯತೆ ಅಳಿಯದೆ ಇದ್ದಾಗ ಇವರು ಮತಾಂತರ ಹೊಂದಿದರೆ ಮುಂದೆ ಸರ್ಕಾರ್ಯರ ಗತಿಯೇನು? ಇದಕ್ಕಾಗಿ ಸರ್ಕಾರದವರು ರಾಜ್ಯಾದ್ಯಂತವೂ ಪ್ರವಾಸ ಮಾಡಿ ಈ ಅಸ್ಪೃಶ್ಯತೆಯನ್ನು ನಿವಾರಣೆ ಮಾಡುವುದಕ್ಕೆ ಒಳ್ಳೆಯ ಯೋಜನೆಗಳನ್ನು ರೂಪಿಸಿ ಅವುಗಳನ್ನು ಕೂಡಲೇ ಕಾರ್ಯರೂಪಕ್ಕೆ ತರಬೇಕೆಂದು ಒತ್ತಾಯ ಮಾಡುತ್ತೇನೆ. ಅವರ ಈ ದಿವಸವೂ ಕೂಡ ಅನೇಕ ಗ್ರಾಮಗಳಲ್ಲಿ ಹರಿಜನರನ್ನು ಬಾವಿಯ ನೀರನ್ನು ಬಳಸುವುದಕ್ಕೆ ಬಿಡುತ್ತಿಲ್ಲ, ಬಾರ್ಬರ್ ಷಾಪಿಗೆ ಇವರನ್ನು ಸೇರಿಸುತ್ತಿಲ್ಲ, ಡೋಭಿ ಇವರ ಬಟ್ಟೆಗಳನ್ನು ಒಗೆಯುತ್ತಿಲ್ಲ. ಇವುಗಳನ್ನೆಲ್ಲಾ ಕಡ್ಡಾಯವಾಗಿ ಜಾರಿಗೆ ತಂದು ಅಸ್ಪೃಶ್ಯತೆಯನ್ನು ನಿವಾರಣೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ವಿದ್ಯಾಭ್ಯಾಸದ ಬಾಬಿನಲ್ಲಿ 66 ಕೋಟಿ ರೂಪಾಯಿಗಳನ್ನು ಒದಗಿಸಿವ್ವಾರೆ. ಪರಿಶಿಷ್ಟ ವರ್ಗದವರಿಗೂ ಪ್ರಾಥಮಿಕ ಒತ್ತಾಯ ಶಿಕ್ಷಣವನ್ನು ಜಾರಿಗೆ ತರುವುದಕ್ಕೆ ಹೆಚ್ಚು ಹೆಚ್ಚು ನರ್ಸರಿ ಶಾಲೆಗಳನ್ನು ತೆರೆಯುವುದಕ್ಕೆ ಅವಕಾಶ ಮಾಡಬೇಕು. ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ಇವರ ಅನುಕೂಲಕ್ಕಾಗಿ ಕೇಂದ್ರದಿಂದ ಮತ್ತು ರಾಜ್ಯಸರ್ಕಾರದಿಂದ ಇಲ್ಲಿಯ ಅಭಿವೃದ್ಧಿ ಕಾರ್ಯಗಳ ಬಾಬಿನಲ್ಲಿ ತೆಗೆಯತಕ್ಕ ಹಣದಲ್ಲಿ ಶೇಕಡ 18 ರಷ್ಟು ಹಣವನ್ನು ಇವರ ಅಭಿವೃದ್ಧಿಗೆ ವಿನಿಯೋಗಿಸಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ಯೂನಿವರ್ಸಿಟಿ, ಬೋರ್ಡುಗಳು ಮತ್ತು ಕಾರ್ಪೊರೇಷನ್‌ಗಳಲ್ಲಿ ಹರಿಜನರಿಗೆ ವಿನಿಯೋಗಿಸಲು ಸ್ಥಾನಗಳನ್ನು ಇಟ್ಟಿಲ್ಲ, ಇದನ್ನು ಕೂಡಲೆ ಇಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಚ್. ಟಿ. ಕೃಷ್ಣಪ್ಪ (ನಾಗಮಂಗಲ).—ಮಾನ್ಯ ಸಭಾಧ್ಯಕ್ಷರೆಯವರೇ; ರಾಜ್ಯಪಾಲರ ಭಾಷಣ ಬಹಳ ನಿರಸವಾಗಿದೆ. ಎಂಥಾ ಆಶಾವಾದಿಗಳನ್ನೂ ಇದು ನಿರಾಸೆಯ ಕೂಪದಲ್ಲಿ ತಳ್ಳುವಂಥಾದ್ದಾಗಿದೆ. ದೇಶದ ಉತ್ತರ ಭಾಗದಲ್ಲಿ ಭೀಕರ ಕ್ಷಾಮ ಪರಿಸ್ಥಿತಿಯುಂಟಾಗಿ ಅದು ದೈವೀದತ್ತವಾದದ್ದು ಎಂದು ಕೆಲವರು ಮತ್ತೆ ಕೆಲವರು ಅದು ಪ್ರಕೃತಿದತ್ತವಾದದ್ದು ಎಂತಲೂ, ಇನ್ನು ಕೆಲವರು ದೈವೀಶಾಪ ಎಂತಲೂ ಹೇಳುತ್ತಿದ್ದರೆ, ಈ ನಭೆಯಲ್ಲಿ ಒಮ್ಮೊಮ್ಮೆ ಮಾತನಾಡುತ್ತಿದ್ದ ಮಾನ್ಯ ಸದಸ್ಯರುಗಳು ಅದು ಶ್ರೀ ವೀರೇಂದ್ರ ಪಾಟೀಲರ ಆಡಳಿತದ ಪಾಪದ ಫಲ ಎಂಬತಕ್ಕ ಮಾತುಗಳನ್ನಾಡಿದ್ದಾರೆ. ಆದರೆ ಹಾಗೆ ಕೆಲವರು ವಾದ ಮಾಡಿದ್ದರೆ ಇನ್ನು ನಾವು ಅದು ಹಾಗಲ್ಲ ಹೊಸದಾಗಿ ಆಡಳಿತಕ್ಕೆ ಬಂದ ಮಂತ್ರಿಮಂಡಲದಿಂದ ದೇಶದಲ್ಲಿ ಅನಿಷ್ಟ ಪೊದಲೇ ಪ್ರಾರಂಭವಾಯಿತು—ಈ ಅನಿಷ್ಟಕ್ಕೆ ಕಾರಣ ಮುಖ್ಯಮಂತ್ರಿಗಳ ಕಾರ್ಯದಕ್ಷತೆ ಸರಿಯಾಗಿಲ್ಲ ಎಂದು ಇದನ್ನು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುವುದು ಸರಿಯಾದುದಲ್ಲ. ಅದಕ್ಕೆ ಬದಲು ಹಾಲಿ ಆಡಳಿತವನ್ನು ನಡೆಸುತ್ತಿರುವ ಆಡಳಿತದ ಜವಾಬ್ದಾರಿಯನ್ನು ಹೊತ್ತಿರತಕ್ಕ ಸರ್ಕಾರ ಈ ಕ್ಷಾಮದ ಹಾವಳಿಯನ್ನು ಎದುರಿಸುವುದಕ್ಕೆ ಎಷ್ಟರ ಮಟ್ಟಿಗೆ ಸಮರ್ಥವಾಗಿದೆ ಅನ್ನುವುದನ್ನು ನಾವೀಗ ವಿಚಾರ ಮಾಡಬೇಕಾದ್ದು ಅವಶ್ಯಕ. ಇದನ್ನು ಬಿಟ್ಟು ಅಲ್ಲಸಲ್ಲದ ವಿಷಯಗಳ ಗೊಂದಲವೆಬ್ಬಿಸಿ ಒಬ್ಬೊಬ್ಬರಿಗೊಬ್ಬರಿಗೆ ಜಗಳವನ್ನು ತಂದಿಡತಕ್ಕದ್ದು ಸರಿಯಾದ್ದಲ್ಲ ಅನ್ನುವುದು ನನ್ನ ಅಭಿಪ್ರಾಯ. ಅಲ್ಲಿಯ ಕ್ಷಾಮ ಪರಿಹಾರದ ಕಾರ್ಯಗಳನ್ನು ಸರ್ಕಾರದವರು ಬಹಳ ಚೆನ್ನಾಗಿ ನಡೆಸಿಕೊಂಡು ಬಂದಿದ್ದಾರೆಂದು ಸರ್ಕಾರದವರು ಹೇಳುತ್ತಿವ್ವಾರೆ. ಆದರೆ ಇದೇ ಸದನದ ಅನೇಕ ಮಾನ್ಯ ಸದಸ್ಯರುಗಳೂ ಕೂಡ ಆ ಸ್ಥಳಕ್ಕೆ ಭೇಟಿ ನೀಡಿ ಅಲ್ಲಿನ ನಿಜಾಂಶಗಳೇನು ಅನ್ನುವುದರ ಬಗ್ಗೆ ಅವರ ಅಭಿಪ್ರಾಯಗಳನ್ನೂ ವ್ಯಕ್ತಪಡಿಸಿದ್ದಾರೆ. ಅಷ್ಟೇ ಅಲ್ಲದೆ ಇದೇ ಸದನದ ಒಂದು ವಿಶೇಷ ಅಯೋಗವನ್ನೂ ಕೂಡ ನೇಮಕ ಮಾಡಿ ಆ ಆಯೋಗದವರೂ ಕೂಡ ಆ ವಿಚಾರದಲ್ಲಿ ಒಂದು ನಿಷ್ಪಕ್ಷಪಾತವಾದ ವರದಿಯನ್ನು ಕೊಟ್ಟಿದ್ದಾರೆ. ಆದರೆ ಈ ಎಲ್ಲಾ ಅಭಿಪ್ರಾಯಗಳನ್ನೂ ಕ್ರೋಢೀಕರಿಸಿ ನೋಡಿದ್ದೇ ಆದರೆ ಸರ್ಕಾರದವರು ಅಲ್ಲಿ ಕೈಗೊಂಡಿರತಕ್ಕ ಕೆಲಸಗಳು ಅಷ್ಟೇನೂ ಸಮರ್ಪಕವಾಗಿ ನಡೆದಿಲ್ಲ ಅನ್ನುವುದನ್ನು ಘಂಟಾಘೋಷವಾಗಿ ಸಾರುತ್ತಿವೆ. ಆದರೆ ಅಲ್ಲಿಯ ಕೆಲಸ ಕಾರ್ಯಗಳು ಇದೇ ರೀತಿ ಮುಂದುವರಿಯುವುದಾದರೆ ನಧ್ಯದಲ್ಲಿ ಅಲ್ಲಿನ ಪರಿಸ್ಥಿತಿ ಇನ್ನೂ ಬಹಳ ವಿಕೋಪಕ್ಕೆ ಒಳಗಾಗಬಹುದೆಂದು ಅನೇಕರೂ ಹೇಳುತ್ತಿದ್ದಾರೆ. ಅವರ

(ಶ್ರೀ ಎಚ್. ಟಿ. ಕೃಷ್ಣಪ್ಪ)

ಆ ಆಡಳಿತ ಪಕ್ಷದಲ್ಲೇ ಇರತಕ್ಕ ಅನೇಕ ಮಾನ್ಯ ಸದಸ್ಯರು ಈ ಸಭೆಯನ್ನು ಬಿಟ್ಟು ಆಚೆ ಕಡೆಗೆ ಬಂದಾಗ ಅಲ್ಲಿ ಮನಬಿಚ್ಚಿ ಮಾತನಾಡಿ—ನಿಮ್ಮ ಆತ್ಮಶೋಧನೆಯನ್ನು ಮಾಡಿಕೊಂಡು ನಿಮ್ಮ ಅಭಿಪ್ರಾಯ ತಿಳಿಸಿ ಎಂದರೆ ಅದಕ್ಕೆ ಅವರು ಹೇಳುತ್ತಾರೆ, ವಿರೋಧಪಕ್ಷದವರು ಹೇಳುತ್ತಿರುವುದು ನಿಜ, ನಾವೇನು ಮಾಡುವುದಕಾಗುತ್ತದೆ, ನಮ್ಮಲ್ಲಿ ಪಾರ್ಟಿ ಶಿಸ್ತಿಗಾಗಿ ಹಾಗೆ ಹೇಳಬೇಕಾಗುತ್ತದೆ ಎಂದು ಅನೇಕರು ಹೇಳುತ್ತಾರೆ ಈ ಮಾತುಗಳನ್ನು. ಇರತಕ್ಕ ಪರಿಸ್ಥಿತಿಯನ್ನು ಮುಚ್ಚಿ ಸತ್ಯಕ್ಕೆ ದೂರವಾದ ಅಂಶಗಳನ್ನು ತಿಳಿಸಿ ಜನರನ್ನು ಹೀಗೆ ವಂಚಿಸುವುದು ಆತ್ಮಸಾಕ್ಷಿಯಾಗಿ ನಡೆಯತಕ್ಕ ಜನಕ್ಕೆ ಆತ್ಮದ್ರೋಹದ ಕೆಲಸವಾಗುತ್ತದೆ ಎಂದು ನಕಾರದಲ್ಲಿ ಅರಿಕೆ ಮಾಡಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ. ಆದರೆ ಆ ಕ್ಷಾಮ ಅನ್ನತಕ್ಕದ್ದು ಕೇವಲ ಈ ರಾಜ್ಯದ ಉತ್ತರ ಭಾಗಕ್ಕೆ ಮಾತ್ರ ಸೀಮಿತವಾದದ್ದಲ್ಲ. ಇದು ರಾಜ್ಯದ ದಕ್ಷಿಣ ಭಾಗಕ್ಕೂ ಕೂಡ ವ್ಯಾಪಕವಾಗಿದೆ. ಸಾಮಾನ್ಯವಾಗಿ ಎಲ್ಲ ಜನರೂ ಮಂಡ್ಯಾ ಜಿಲ್ಲೆ ಬಹಳ ಸಮೃದ್ಧಿಯಾದಂಥ ಜಿಲ್ಲೆ ಎಂಬ ಅಭಿಪ್ರಾಯವನ್ನು ಇಟ್ಟುಕೊಂಡಿದ್ದಾರೆ ಸರ್ಕಾರ ಕೂಡ ಹಾಗೇ ಪರಿಗಣಿಸಿರುವಂತೆ ಕಾಣುತ್ತಿದೆ. ಆದರೆ ಆ ಜಿಲ್ಲೆಯಲ್ಲಿ ಕೂಡ ಕೆಲವು ಕಡೆ ಅಂದರೆ ನಾಗಮಂಗಲ ತಾಲ್ಲೂಕಿನಲ್ಲಿ ಮೇಲುಕೋಟೆ ಇತ್ಯಾದಿ ಕೆಲವು ಸ್ಥಳಗಳಲ್ಲಿ ವರ್ಷಕ್ಕೆ 20 ಇಂಚು ಕೂಡ ಮಳೆ ಬರುವುದಿಲ್ಲ. ಬಂದರೆ ಅದೂ ಯಾವುದೋ ಒಂದು ತಿಂಗಳಲ್ಲಿ ಅವರ ಅಗತ್ಯವಿಲ್ಲದಿದ್ದಾಗ ಬಂದು ನಾಶವಾಗಿ ಬಿಡುತ್ತದೆ. ಅಂಥ ಪ್ರದೇಶದಲ್ಲಿ ಜನರ ಕಷ್ಟ ಹೇಳತೀರದಾಗಿದೆ. ಆದಾಗ್ಯೂ ಸರ್ಕಾರಕ್ಕೆ ವಿಚಾರ ಗೊತ್ತಿದ್ದರೂ ಅದರ ಕಡೆಗೆ ಗಮನ ಹರಿಸದಿರುವುದು ಅಕ್ಷಮ್ಯಕರವಾದ ಅಪರಾಧ. ಅಲ್ಲಿ ಅನೇಕ ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ನಿರ್ಮಿಸುವುದಕ್ಕೆ ಅವಕಾಶವಿದ್ದರೂ ಕೂಡ ಸರ್ಕಾರದವರು ಅವುಗಳ ಬಗ್ಗೆ ಒಂದು ಚಕಾರವನ್ನೂ ಎತ್ತದೆ ಇರುವುದು ಸರ್ಕಾರದ ದೊಡ್ಡ ಅಪರಾಧ. ಇನ್ನಾದರೂ ಸರ್ಕಾರದವರು ಅಲ್ಲಿಯ ಜನರ ಕ್ಷೇಮಾಭ್ಯುದಯದ ಬಗ್ಗೆ ಚಿಂತನೆ ಮಾಡಿ ಅಲ್ಲಿಗೆ ನೀರಾವರಿ ಸೌಲಭ್ಯಗಳನ್ನು ಒದಗಿಸುವುದಕ್ಕೆ ತುರ್ತಾಗಿ ಕಾರ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದೂ, ರಾಜ್ಯದಲ್ಲಿ ಹೀಗೆ ಹಿಂದುಳಿದ ಪ್ರದೇಶಗಳನ್ನು ಅಭಿವೃದ್ಧಿಗೆ ತರುವುದಕ್ಕೆ ಸರ್ಕಾರ ಸರ್ವ ಪ್ರಯತ್ನಗಳನ್ನು ನಡೆಸಬೇಕೆಂದು ಒತ್ತಾಯ ಮಾಡುತ್ತೇನೆ. ಹಾಗೇ ನಮ್ಮ ತಾಲ್ಲೂಕಿನಲ್ಲಿ ಕೆಲವು ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೂ ಅವಕಾಶವಿದೆ. ಆದರೆ ಮಂಡ್ಯಾದಲ್ಲಿ ಒಂದು ಟ್ರಾಕ್ಟರ್ ಮತ್ತು ಗಾಜಿನ ಕಾರ್ಖಾನೆಗಳನ್ನು ಸ್ಥಾಪಿಸಬೇಕೆಂಬುದಾಗಿ ಸರ್ಕಾರದವರು ಹೇಳುತ್ತಿದ್ದರು. ಆದರೆ ಗಾಜಿನ ಕಾರ್ಖಾನೆಗೆ ಉತ್ತಮ ದರ್ಜೆಯ ಶ್ರೇಷ್ಠ ಮರಳಿನ ಅಗತ್ಯ ಇದೆ ಎಂದು ಹೇಳುತ್ತಿದ್ದಾರೆ. ಆದರೆ ಅಂಥಾ ಶ್ರೇಷ್ಠವಾದ ಒಳ್ಳೆಯ ಮರಳು ಮಾನ್ಯ ಕೈಗಾರಿಕಾ ಮಂತ್ರಿಗಳ ಊರಿನ ಪಕ್ಕದಲ್ಲೇ ಅಂದರೆ ಸೋಮನಹಳ್ಳಿಯಲ್ಲಿ ಮಾತ್ರ ಸಿಕ್ಕುತ್ತದೆ ಎಂಬುವುದು ಸರಿಯಲ್ಲ. ನಾಗಮಂಗಲ ತಾಲ್ಲೂಕಿನ ಹಲವಾರು ಸ್ಥಳಗಳಲ್ಲಿ ಈ ಸೌಲಭ್ಯವಿದೆ. ಅಂದಾಗ ಅದನ್ನು ಏಕೆ ನಾಗಮಂಗಲದಲ್ಲಿ ಸ್ಥಾಪಿಸಬಾರದು? ಆದರೆ ಆತ್ಮಸಾಕ್ಷಿಯಾಗಿ ನಡೆಯತಕ್ಕ ಜನರು ಹೀಗೆ ಪ್ರತಿಯೊಂದು ವಿಚಾರದಲ್ಲೂ ಆತ್ಮಕ್ಕೆ ವಂಚನೆ ಮಾಡಿಕೊಂಡು ಕೆಲಸಮಾಡುವುದು ಮಹಾ ಅಪರಾಧ.

3-00 P. M.

ಇನ್ನು ದೇಶದಲ್ಲಿ ಲಂಚರುಷವತ್ಕಾರಗಳನ್ನೂ ಮತ್ತು ಜಾತೀಯತೆಯನ್ನೂ ತೊಡೆದು ಹಾಕತಕ್ಕ ಬಗ್ಗೆ ಒಂದು ಸ್ಪಷ್ಟವಾದ ಸೂಚನೆಯನ್ನು ಸರ್ಕಾರದವರು ಮಂಡಿಸದಿರುವುದು ದುರದೃಷ್ಟಕರ. ರಾಜ್ಯದಲ್ಲಿ ಜಾತೀಯತೆ ತಾಂಡವವಾಡುತ್ತಿದೆ. ಮಂತ್ರಿಗಳ ಆಫೀಸನ್ನು ನೋಡಿದರೆ ಮಂತ್ರಿಗಳು ಯಾವ ಜಾತಿಯವರೋ ಅದೇ ಜಾತಿಯವರನ್ನು ಅವರ ಆಫೀಸಿಗೆ ನೇಮಕ ಮಾಡಿಕೊಳ್ಳುತ್ತಿದ್ದಾರೆ, ಅವರು ಬ್ರಾಹ್ಮಣರಾದರೆ ಬ್ರಾಹ್ಮಣರನ್ನು, ಮುಸ್ಲಿಮರಾದರೆ ಮುಸ್ಲಿಂ ನಾಕರರನ್ನು ನೇಮಕ ಮಾಡಿಕೊಳ್ಳುತ್ತಿದ್ದಾರೆ. ಜಾತೀಯತೆ ಅವರಿಂದಲೇ ಪ್ರಾರಂಭವಾಗಿದೆ. ಲಂಚಕೋರತನದ ಬಗ್ಗೆ ಮಂತ್ರಿಗಳಿಗೆ ಹೇಳಿದೆ. ಅದಕ್ಕವರು ಇಂಥ ಅಧಿಕಾರಿ ಲಂಚ ತೆಗೆದುಕೊಳ್ಳುತ್ತಾರೆ ಎಂದರೆ ಹಿಡಿದು ಕೊಡಿ ಅಂದರು. ಹಿಡಿದುಕೊಡಿ ಎಂದು ನಮಗೆ ಹೇಳುವುದಾದರೆ ಅವರೇಕಿರಬೇಕು? ಸರಕಾರ ತನ್ನ ಕೆಲಸ ತಾನು ಮಾಡಬೇಕು, ಶುದ್ಧವಾದ ಆಡಳಿತ ನಡೆಸಬೇಕು ಎಂದು ನಾವು ಕೇಳುತ್ತೇವೆಯೇ ಹೊರತು ಇನ್ನೇನೂ ಇಲ್ಲ. ನಾವೇ ಶಿಕ್ಷಿಸುವುದಾದರೆ ಅವರೇಕಿರಬೇಕು? ಒಟ್ಟಿನಲ್ಲಿ ಹೇಳುವುದಾದರೆ ರಾಜ್ಯಪಾಲರ ಭಾಷಣ ಯಾವ ದೃಷ್ಟಿಯಿಂದಲೂ ಪ್ರಗತಿದಾಯಕವಾಗಿಲ್ಲ, ಆಶಾದಾಯಕವಾಗಿಲ್ಲ ಎಂದು ಹೇಳಿ ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ.

† ಶ್ರೀ ಡಿ. ದೇವರಾಜ ಅರಸ್ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈಗ 6 ದಿವಸಗಳಿಂದ ಮತ್ತು ಇಂದು ಸ್ವಲ್ಪ ಕಾಲ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಯಾಗಿದೆ, ದೀರ್ಘವಾದ ಚರ್ಚೆ ನಡೆದಿದೆ. ಮಾನ್ಯ ಸಭೆಯ ಸದಸ್ಯರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ, ಟೀಕೆಗಳನ್ನು ಮಾಡಿದ್ದಾರೆ. ನಮ್ಮ ಎದುರು ಪಕ್ಷದ ಸದಸ್ಯರು ಮತ್ತು ಶ್ರೀಮಾನ್ ದೇವೇಗೌಡರು ತೀವ್ರವಾಗಿ ಟೀಕೆಗಳನ್ನು ಮಾಡಿದ್ದಾರೆ. ತೀವ್ರವಾಗಿ ಟೀಕೆ ಮಾಡಲು ನನ್ನ ಆಕ್ಷೇಪಣೆಯೇನೂ ಇಲ್ಲ, ಅಡ್ಡಿಯೇನೂ ಇಲ್ಲ. ಒಂದೊಂದು ಸಂದರ್ಭದಲ್ಲಿ ಅವರ ಯಾವರೀತಿ ತೀಕ್ಷ್ಣವಾಗಿ, ತೀವ್ರವಾಗಿ ಟೀಕೆಗಳನ್ನು ಮಾಡುತ್ತಾರೋ ಹಾಗೆಯೆ ಆ ತಿರುಗುಬಾಣ ಅವರಿಗೆ ಬಂದಾಗ ಅದನ್ನು ಅವರು ಶಾಂತವಾಗಿ ಸ್ವೀಕರಿಸಿಸಬೇಕು ಎಂಬುದು ನನ್ನ ಮೊದಲು ಪ್ರಾರ್ಥನೆ. ಈ ಪ್ರಾರ್ಥನೆ ಮಾಡಲು ಕಾರಣ ನಿನ್ನೆತಾನೆ ಇಲ್ಲಿ ನಡೆದ ದೃಶ್ಯ ಅಧ್ಯಕ್ಷರಿಗೆ ಗೊತ್ತಿದೆ. ಅವರು ಈ ರೀತಿ ಅಪ್ಪಣೆ ಕೊಡಿಸಿದರು: when you are prepared to hit hard you must also be prepared to receive it. ನಮಗೆ ಇದು ಅಭ್ಯಾಸವಾಗಿದೆ, ಶ್ರೀಮಾನ್ ದೇವೇಗೌಡರಿಗೆ ಇದರ ಅಭ್ಯಾಸ ಕಡಿಮೆ.

ಶ್ರೀ ಎಚ್. ಡಿ. ದೇವೇಗೌಡ.—ನನಗೂ ಅಭ್ಯಾಸವಿದೆ. ಆದರೆ ನನ್ನ ಸ್ವಂತ ವಿಷಯದಲ್ಲಿ ಹೇಳಿದ್ದರಿಂದ ಹಾಗೆ ಮಾಡಬೇಕಾಯ್ತು.

ಶ್ರೀ ಡಿ. ದೇವರಾಜ ಅರಸ್.—ಹಲವರು ಅನೇಕ ಸಂದರ್ಭಗಳಲ್ಲಿ ಏನೇನೋ ಹೇಳಿರಬಹುದು, ತಮ್ಮ ಪಕ್ಷದವರು ಹೇಳಿದರೆಂದು ಆಕ್ಷೇಪಣೆಯಿಲ್ಲ. ಏಕೆಂದರೆ ರಾಜಕೀಯ ಕ್ಷೇತ್ರದಲ್ಲಿರುವವರು ಅಧಿಕಾರ ಸ್ಥಾನದಲ್ಲಿರಲಿ, ಮಂತ್ರಿ ಅಥವ ಪ್ರಧಾನಿಯಾಗಿರಲಿ ಅವರೆಲ್ಲರೂ ಬಹಿರಂಗ ಟೀಕೆಗೆ ಒಳಪಡಬೇಕಾಗಿ ಬರುತ್ತದೆ. ವೈಯಕ್ತಿಕವಾದ ಟೀಕೆಗಳನ್ನು ಯಾವ ಸಂದರ್ಭದಲ್ಲಿ ಮಾಡಬೇಕು, ಯಾವ ಪ್ರಮಾಣದಲ್ಲಿ ಮಾಡಬೇಕು ಎಂಬುದನ್ನು ತಿಳಿದೋ ತಿಳಿಯದೆಯೋ ಮಾಡುತ್ತಿದ್ದಾರೆ. ಹಾಗೆ ಮಾಡುವವರು ಜವಾಬ್ದಾರಿಯುತವಾಗಿ ಮಾತಾಡಬೇಕು. ಅನೇಕ ಸಂದರ್ಭಗಳಲ್ಲಿ ತಿಳಿಯದೆ ಇದ್ದರೂ ಹಾದಿಬೀದಿಗಳ ಮಾತು ಕೇಳಿ ಮಾತು ಮಾತನಾಡುವ ಜನರಿದ್ದಾರೆ. ಆದುದರಿಂದ ಅದಕ್ಕೆ ಹೆಚ್ಚು ಗಮನ ಕೊಡಬೇಕಾಗಿಲ್ಲ ಎಂದು ನನಗೆ ತೋರುವುದು. ಜವಾಬ್ದಾರಿಯುತವಾಗಿ ಮಾತನಾಡಿದರೆ ಅದನ್ನು ಗಮನನಿನಬೇಕಾಗುತ್ತದೆ, ಬೇಜವಾಬ್ದಾರಿಯಿಂದ ಜವಾಬ್ದಾರಿಯಿಲ್ಲದೆ ಮಾತನಾಡುವವರಿಗೆ ಏನು ಉತ್ತರ ಕೊಡಲು ಸಾಧ್ಯ! ಎಲ್ಲರ ಇದನ್ನು ಯೋಚನೆ ಮಾಡಲೇಬೇಕಾಗುತ್ತದೆ.

ರಾಜ್ಯಪಾಲರ ಭಾಷಣ ನಿರಸವಾದುದು, ಸರಕಾರದ ನೀತಿನಿಯಮಗಳನ್ನು ಇದರಲ್ಲಿನಮೂದು ಮಾಡಿಲ್ಲ, ಮುಂದೇನು ಮಾಡುತ್ತಾರೆಂಬುದನ್ನು ಇದರಲ್ಲಿ ಎಲ್ಲೂ ಹೇಳಿಲ್ಲ ಎಂಬುದು ಒಟ್ಟಿನಲ್ಲಿ ನಮ್ಮ ಎದುರು ಪಕ್ಷದ ಸ್ನೇಹಿತರು ಹೇಳಿರುವ ಭಾಷಣದ ಸಾರಾಂಶ. ಇದರ ಜೊತೆಯಲ್ಲಿ ಅಭಿವೃದ್ಧಿ ಕೆಲಸ ಕಾರ್ಯಗಳು ಯಾವ ಪ್ರಮಾಣದಲ್ಲಿ ನಡೆಯಬೇಕಾಗಿತ್ತೋ ಆ ಪ್ರಮಾಣದಲ್ಲಿ ನಡೆದಿಲ್ಲ, ಇಂಥ ಕೆಲಸ ತೆಗೆದುಕೊಳ್ಳಬೇಕಾಗಿತ್ತು, ಇಂಥ ಕೆಲಸ ತೆಗೆದುಕೊಳ್ಳಬೇಕಾಗಿತ್ತು, ಎಂಬ ವಿಚಾರಗಳನ್ನು ಹೇಳಿದ್ದಾರೆ. ಕೆಲವು ಇಲಾಖೆಗಳ ಬಗ್ಗೆ ಸಲಹೆ ಕೊಟ್ಟಿದ್ದಾರೆ, ಪಕ್ಷದವ್ಯಕ್ತಿಬಗ್ಗೆ ಹೇಳಿದ್ದಾರೆ, ಈಗ ಇಲಾಖೆಗಳಲ್ಲಿ ನಡೆಯುತ್ತಿರುವ ಕಾರ್ಯಕ್ರಮ ಸರಿಯಾಗಿಲ್ಲ ಎಂಬ ವಿಚಾರ ಕೂಡ ಹೇಳಿದ್ದಾರೆ ಈಗ ನಾನು ಮೊದಲು ನಮ್ಮ ಮೇಲೆ ವಿರೋಧ ಪಕ್ಷದ ನಾಯಕರು ಮತ್ತು ಕೆಲವರು ಹೇಳಿರುವ ಮುಖ್ಯವಾದ ಟೀಕೆಗಳೇನಿವೆ, ಮೊಟ್ಟಮೊದಲು ಇಲಾಖೆಗಳಿಗೆ ಸಂಬಂಧಪಟ್ಟಿರುವುದು, ನಾವೇನು ಮಾಡುತ್ತಿದ್ದೇವೆ, ಇನ್ನೇನು ಮಾಡಬೇಕೆಂದಿದ್ದೇವೆ, ನಮ್ಮ ಲೊಪದೋಷ ಯಾವರೀತಿ ತಿದ್ದುಕೊಳ್ಳುತ್ತೇವೆ ಈ ವಿಚಾರ ಪ್ರಸ್ತಾಪಿಸಿ ತದನಂತರ ನಮ್ಮೆಲ್ಲರ ಮನಸ್ಸಿಗೂ ಕಳವಳಕಾರಿಯಾಗಿರುವ ಮತ್ತು ದೇಶದ ಜನರ ಮನಸ್ಸಿಗೆ ಬಹಳ ನೋವಾಗಿರುವ ಕ್ಷಾಮ ಪರಿಸ್ಥಿತಿ ಬಗ್ಗೆ ಅದಕ್ಕೆ ನಾವು ಸರಕಾರದಿಂದ ಏನೂ ಮಾಡಿದ್ದೇವೆ, ಮುಂದೇನು ಮಾಡಬೇಕೆಂದಿದ್ದೇವೆ, ಮುಂದೆ ನಮಗೆ ಯಾವ ರೀತಿ ನೆರವು ಬರುತ್ತದೆ ಎಂಬುದನ್ನೆಲ್ಲಾ ಆಮೇಲೆ ಹೇಳೋಣ ಎಂದು ಯೋಚನೆಮಾಡಿದ್ದೇನೆ.

ಇನ್ನೊಂದು ವಿಷಯ ಇವತ್ತು ಕೂಡ ಕೆಲವು ಸದಸ್ಯರು ಹೇಳಿದರು, ಹಿಂದೆ ಕೂಡ ಕೆಲವರು ಹೇಳಿದ್ದಾರೆ. ಅದೇನೆಂದರೆ ನಮ್ಮ ಸರಕಾರಕ್ಕೆ ಸಾಕಷ್ಟು ಪ್ರಭಾವ ಕೇಂದ್ರದಲ್ಲಿಲ್ಲ, ಅದರಿಂದ ನಮಗೆ ಬರಬೇಕಾದ ನೆರವು ಬರಲಿಲ್ಲ. ಈ ಸರಕಾರ ನಿಸ್ಸಹಾಯಕವಾಗಿದೆ, ಇದಕ್ಕೆ ಯಾವ ಶಕ್ತಿ ಕೂಡ ಇಲ್ಲ ಎಂದು ಹೇಳಿದ್ದಾರೆ.

ನಮ್ಮಲ್ಲಿರತಕ್ಕ ಕ್ಷಾಮಪರಿಸ್ಥಿತಿಯನ್ನು ಸರಿಯಾದ ರೀತಿಯಲ್ಲಿ ಕೇಂದ್ರಕ್ಕೆ ಮನವರಿಕೆಯಾಗುವ ರೀತಿಯಲ್ಲಿ ಹೇಳುವುದಕ್ಕೆ ಇವರಿಗೆ ಅವಕಾಶವಾಗಲಿಲ್ಲ; ಬುದ್ಧಿ ಇಲ್ಲ; ಕಿವಿ ಇಲ್ಲ; ಮೆದುಳು ಇಲ್ಲ; ಇದು ಶ್ರೀಮಾನ್ ದೇವೇಗೌಡರ ಟೀಕೆ. ಮತ್ತೆ ಇಂದಿರಾಗಾಂಧಿಯವರ ಬಗ್ಗೆ

(ಶ್ರೀ ಡಿ. ದೇವರಾಜ ಅರಸ್)

ಟೀಕೆಗಳನ್ನು ಮಾಡಿದ್ದಾರೆ. ಮುಂಗಳೂರಿಗೆ ಬಂದರು, ಇಲ್ಲಗೆ ಬರಲಿಲ್ಲ ಎಂದು. ಕೇಂದ್ರದ ನೆರವು ಬರುತ್ತದೆಯೇ ಇಲ್ಲವೇ ಮುಂದೆ ಏನು ಬರುತ್ತದೆ ಎನ್ನುವುದರ ಬಗ್ಗೆ ನಾನು ದೊಡ್ಡದಾಗಿ ರೀಫರ್ ಮಾಡಿ ಹೇಳಿಕೆ ಮಾಡುವುದಕ್ಕಿಂತ " the taste of the pudding is in the eating" ನೀವು ಎಷ್ಟೇ ಮಾತನಾಡಿದರೂ, ಎಷ್ಟೇ ಟೀಕೆ ಮಾಡಿದರೂ ಆ ಟೀಕೆಯನ್ನು ಕೇಂದ್ರದಿಂದ ಸಾಕಷ್ಟು ನೆರವು ಬರಬೇಕು ಎನ್ನುವ ನಮ್ಮುದ್ದೇಶದಿಂದ ಮಾಡುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಟೀಕೆ ಮಾಡುವಾಗ ಸ್ವಲ್ಪಮಟ್ಟಿಗೆ ರೆಸ್ಪಿಲು ಕಂಟಿ ತಪ್ಪುವ ಹಾಗೆ ಹೋಗಬಹುದು. ಅದಕ್ಕೆ ನನ್ನ ಚಿಂತಿಯಿಲ್ಲ. ಆದರೂ ಒಟ್ಟಿನಲ್ಲಿ ನಮಗೆ ಏನು ಬಂತು ಎನ್ನುವುದರ ಕಡೆ ಅಂಕಿ ಅಂಶಗಳ ಮೇಲೆ ಗಮನವಿಟ್ಟು ನೋಡೋಣ. ಇವು ಎಲ್ಲ ಆದಮೇಲೂ ಕೂಡ ನಿಮ್ಮ ಮನಸ್ಸಿಗೆ ಸರಿಯಿಲ್ಲ ಎಂದು ಕಂಡರೆ ಆಗ ನಾವು ಒಪ್ಪಿಕೊಳ್ಳಬೇಕಾಗಿ ಬರುತ್ತದೆ. ನೀವು ಹೇಳುವುದರಲ್ಲಿ ಸಾಕಷ್ಟು ತಿರುಳು ಇದೆ, ನಮಗೆ ಬರಬೇಕಾದಂಥ...

ಶ್ರೀ ಎಚ್. ಡಿ. ದೇವೇಗೌಡ.—ಜೆಂಪರರಿ ಥ್ಯಾಂಕ್ಸ್‌ಕೊಟ್ಟಿದ್ದಾರೆ, ಅಮೇಲೆ ಪರ್ಮನೆಂಟ್ ಥ್ಯಾಂಕ್ಸ್ ಕೊಡುತ್ತಾರೆ.

ಶ್ರೀ ಡಿ. ದೇವರಾಜ ಅರಸ್.—ನೀವು ಹೇಳಿದಿದ್ದರೂ ಅವರು ಥ್ಯಾಂಕ್ಸ್ ಕೊಟ್ಟು ಬಿಟ್ಟರು ನೀವು ನುಮನ್ನಿದ್ದು ಬಿಟ್ಟಿ ಎಂದು ಕಾಣುತ್ತದೆ. ಅಂಕಿ ಅಂಶಗಳ ಬಗ್ಗೆ ತಮಗೆ ಸಾಕಷ್ಟು ಮಾನ್ಯತೆ ಇದೆ, ಇಲ್ಲ ಎಂದು ತಾವು ಪ್ರಶ್ನೆ ಹಾಕುವವರಿಗೆ ಇದೆ ಎಂದು ನಾನು ಭಾವಿಸಿಕೊಂಡು ಹೋಗುತ್ತೇನೆ. because there are some people who have no respect for facts and figures. ಈ ವಿಚಾರವನ್ನು ದೇವೇಗೌಡರ ಬಗ್ಗೆ ಹೇಳುವುದಕ್ಕೆ ನಾನು ತಯಾರು ಇಲ್ಲ. ಅವರೂ ಒಪ್ಪುತ್ತಾರೆ, ಒಪ್ಪಿದರೆ ಸಂತೋಷ ; ನಾನು ಒಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಒಟ್ಟಿನಲ್ಲಿ ಒಂದೇ ಮಾತು, ಕೇಂದ್ರಸರ್ಕಾರದ ಮೇಲೆ ನಮಗೆ ಸಾಕಷ್ಟು ಪ್ರಭಾವ ಬೀರುವುದಕ್ಕೆ ಶಕ್ತಿಯಿಲ್ಲ ಎಂದು ತಾವು ಏನು ತಿಳಿದಿದ್ದೀರಿ ಆ ವಿಷಯದಲ್ಲಿ ನಾನು ತಿಳಿಯುತ್ತೇನೆ ತಾವು ವಿರೋಧ ಪಕ್ಷದವರಾಗಿ ಈ ರೀತಿ ಟೀಕೆಯನ್ನು ಮಾಡಬೇಕಾದುದು ಇದೆ, ಆದನ್ನು ಮಾಡುತ್ತಾ ಇದ್ದೀರಿ ಎಂದು. ನಿಮ್ಮ ಆತ್ಮದಲ್ಲಿ ನೀವು ನಿಜವಾಗಿ ಹಾಗೆ ತಿಳಿದುಕೊಂಡಿಲ್ಲ ಎಂದು ನನ್ನ ಭಾವನೆ.

ಶ್ರೀ ಕಾಗೋಡು ತಿಮ್ಮಪ್ಪ.—ಹೇಗೆ ಅದನ್ನು ಕಂಡುಹಿಡಿದಿರಿ, ?

ಶ್ರೀ ಡಿ. ದೇವರಾಜ್ ಅರಸ್.—ಹೇಗೆ ಕಂಡುಹಿಡಿದಿದ್ದೇನೆಂದರೆ ತಮ್ಮಗಳ ಮುಖವನ್ನು ನೋಡುವುದರಿಂದ ಗೊತ್ತಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಕವಡೆಹಾಕಿ ನೋಡಿ ?

ಶ್ರೀ ಡಿ. ದೇವರಾಜ ಅರಸ್.—ಕವಡೆ ಶಾಸ್ತ್ರ ಬೇಕಿಲ್ಲ, ಮನಃ ಶಾಸ್ತ್ರವನ್ನು ಓದಿರುವವರು 'face is the index of mind'' ಎಂದು ಹೇಳುತ್ತಾರೆ. ಟೀಕೆ ಮಾಡುವಾಗ ಟೀಕೆಗೋಸ್ಕರ ಅನೇಕ ಸಂದರ್ಭಗಳಲ್ಲಿ ಟೀಕೆ ಮಾಡುವುದು ಉಂಟು. I am not trying to find fault with it. ತಮ್ಮದು ಆದಮೇಲೆ ನಮಗೆ ಟೀಕೆ ಕೊಡುವುದಕ್ಕೆ ಶಕ್ತಿ ಇದೆಯೆನ್ನುವುದು ತಮಗೆ ಗೊತ್ತಿದೆ.

ಶ್ರೀ ಪಾಟಾಳ್ ನಾಗರಾಜ್.—ತಮಗೆ ಪರಕಾಯ ಪ್ರವೇಶ ಮಾಡುವುದು ಗೊತ್ತೇ

ಶ್ರೀ ಡಿ. ದೇವರಾಜ ಅರಸ್.—ನಿಮ್ಮಿಂದ ಕಲಿಯಬೇಕಾಯಿತು, ಇಂದ್ರಜಾಲ ಮಾಯಾ ಜಾಲವನ್ನು ನಿಮನ್ನು ಎದುರಿಸಬೇಕಾದರೆ ನುಮ್ಮನೆ ಆಗುತ್ತದೆಯೇ ? ನಮ್ಮ ರಾಜ್ಯದಲ್ಲಿ ಮೂರು ವರ್ಷಗಳಿಂದ ನಡೆದಿರತಕ್ಕಂಥ ಘಟನೆಗಳ ಬಗ್ಗೆ, ರಾಜಕೀಯ ಕ್ಷೇತ್ರದಲ್ಲಾಗಲಿ, ಬೇರೆ ಕ್ಷೇತ್ರದಲ್ಲಾಗಲಿ ಅದನ್ನು ನಾನು ಏನು ಹೊಸದಾಗಿ ವಿವರಿಸಬೇಕಾಗಿಲ್ಲ. ನನ್ನ ಮಾನ್ಯ ಸಹೋದ್ಯೋಗಿಗಳು, ನಮ್ಮ ಪಕ್ಷದ ಸದಸ್ಯರು, ನಾವು ಏನು ಇವತ್ತು ಈಗ ಶಾಸನ ಸಭೆಯಲ್ಲಿ ಬಹುಮತದಿಂದ ಆರಿಸಿ ಬಂದಿದ್ದೇವೆ, ಮತ್ತು ಸರ್ಕಾರ ನಡೆಸುತ್ತಿದ್ದೇವೆ ಈ ನಮ್ಮ ಸರ್ಕಾರ ಅಲ್ಲದೆ, ಅವರೇ ಪ್ರಶ್ನೆ ಹಾಕಿಕೊಂಡರೆ ಇನ್ನು ಯಾವುದಾದರೂ ಸರ್ಕಾರ ಬಂದಿದ್ದರೆ ಅಥವಾ ಶ್ರೀಮಾನ್ ದೇವೇಗೌಡರ ಸರ್ಕಾರ ಬಂದಿದ್ದರೆ, ವೀರೇಂದ್ರ ಪಾಟೀಲರ ಸರ್ಕಾರ ಇದ್ದಿದ್ದರೆ ಆಗ ಅವರಿಗೆ ಹೆಚ್ಚಿಗೆ ಶಕ್ತಿ ಬರುತ್ತಿತ್ತೆ ! ಆಗಬಂದು ದೊಡ್ಡ ಕೊಶ್ಚನ್‌ಮಾರ್ಕ್ ಉಳಿಯುತ್ತಿತ್ತು. ಅದನ್ನೆ ನಮ್ಮ ಜನ 1972ನೇ ಇಸವಿಯ ಚುನಾವಣೆಯಲ್ಲಿ ಅರ್ಥ ಮಾಡಿಕೊಂಡರು.

ಶ್ರೀ ವಾಟಾಳ್ ನಾಗರಾಜ್. – ಈಗ ಅವರು ಅಪಾರ್ಥಮಾಡಿಕೊಂಡುಬಿಟ್ಟಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಏಕಪಕ್ಷೀಯ ಸರ್ಕಾರ ಬೇಕು ಎಂದೋ ?

ಶ್ರೀ ಡಿ. ದೇವರಾಜ್ ಅರಸ್.—ಏಕಪಕ್ಷೀಯ ಸರ್ಕಾರ ಬೇಕು ಎಂದರೆ ನೀವು ಹೇಗೆ ಬರುತ್ತೀರಿ ? ಜನ ಏನು ತೀರ್ಮಾನ ಮಾಡಿದ್ದಾರೆ ಅದನ್ನು ನೀವು ಒಪ್ಪಿಕೊಂಡಿದ್ದೀರಿ. 1972ನೇ ಜುನಾ ವಣಿಯಲ್ಲಿ ಅದಕ್ಕಿಂತ ಹಿಂದೆ ಇದ್ದಂಥ ಕಾಂಗ್ರೆಸ್ (ಒ) ಸರ್ಕಾರ, ಶ್ರೀಮಾನ್ ವೀರೇಂದ್ರಪಾಟೀಲರ ನೇತೃತ್ವದಲ್ಲಿ ಇದ್ದಂಥ ಸರ್ಕಾರ, ಇರುವುದು ಸರಿಯೇ ಇಲ್ಲವೇ, ಅದನ್ನು ಮುಂದುವರಿಸಬೇಕೇ, ಬೇಡವೇ ಎಂಬುದರ ಬಗ್ಗೆ,—ನಿಮ್ಮ ಅಗ್ರ್ಯುಮೆಂಟಗೋಸ್ಕರ ಅವರು ಶಕ್ತಿಯುತವಾಗಿದ್ದವರು ಎಂದು ಊಹಿಸಿಕೊಂಡು ಹೋಗೋಣ—ಇಬ್ಬರೂ ಜುನಾವಣೆ ಕಣಕ್ಕೆ ದೇಶದ ಮುಂದೆ ಇಳಿದಾಗ ಯಾರ ಪಕ್ಷ ಶಕ್ತಿಯುತವಾಗಿದೆ ಯಾರ ನಾಯಕತ್ವ ಶಕ್ತಿಯುತವಾಗಿದೆ ಎಂದು ಜನ ತೀರ್ಮಾನ ಕೊಟ್ಟಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ತೀರ್ಮಾನವಾಗಿ ಹೊಸ ಯುಗ ಪ್ರಾರಂಭವಾಯಿತು.

ಶ್ರೀ ಡಿ. ದೇವರಾಜ ಅರಸ್.—ತೀರ್ಮಾನವಾದ ಮೇಲೂ, ಈಗ ಎಷ್ಟೋ ಹೇಳಿದರೂ ಆ ಸರ್ಕಾರದ್ದು ಈ ಸರ್ಕಾರದ್ದು ಯಾರಶಕ್ತಿ ಎಷ್ಟು ಎಂಬುದು ಜನತೆಗೆ ಗೊತ್ತಾಗಿದೆ. ಆಮೇಲೆ ನಮ್ಮ ದೇವೇಗೌಡರು ನಮ್ಮ ಸರ್ಕಾರವನ್ನು ಹಿಂಪಿನ ಸರ್ಕಾರಕ್ಕೆ ಹೋಲಿಸಿಕೊಳ್ಳುವುದಿಲ್ಲ, ಮಹಾರಾಷ್ಟ್ರ ಸರ್ಕಾರಕ್ಕೆ ಹೋಲಿಸುತ್ತಾರೆ.

ಶ್ರೀ ಎಚ್. ಡಿ. ದೇವೇಗೌಡ.—ಅದದ್ದು ಏನು ಹೇಳಿ !

ಶ್ರೀ ಡಿ. ದೇವರಾಜ ಅರಸ್.—ನಾವು ಏತಕ್ಕೆ ಮಹಾರಾಷ್ಟ್ರಕ್ಕೆ ಹೋಲಿಸುತ್ತೀರಿ ? ಮಹಾರಾಷ್ಟ್ರ ಸರ್ಕಾರದವರು ಇವರ ಅಣ್ಣತಮ್ಮಂದಿರೇನು ಅಲ್ಲ, ಇವರ ಪಕ್ಷದವರು ಅಲ್ಲ, ಅವರೂ ನಾವು ಒಂದೇ ಪಕ್ಷದ ಜನ. ಆದ್ದರಿಂದ ಏತಕ್ಕೆ ನಮ್ಮ ಸರ್ಕಾರವನ್ನು ಮಹಾರಾಷ್ಟ್ರಕ್ಕೆ ಹೋಲಿಸುತ್ತೀರಿ ಎಂದು ನನಗೆ ಗೊತ್ತಾಗುವುದಿಲ್ಲ. ಅವರಿಗೂ ನಮಗೂ ಜಗಳ ತಂದು ಹಾಕುತ್ತೀವೆ ಎಂದು ತಿಳಿದುಕೊಂಡಿದ್ದೀರಾ ? ಖಂಡಿತಾ ಸಾಧ್ಯವಿಲ್ಲ. ಅವರೂ ನಾವೂ ಒಂದೇ ಪಕ್ಷದವರು, ಕೇಂದ್ರದಿಂದ ಮಹಾರಾಷ್ಟ್ರಕ್ಕೆ ಆಗಲೀ ಕರ್ನಾಟಕಕ್ಕಾಗಲೀ ಇನ್ನು ಯಾವುದೇ ಒಂದು ರಾಜ್ಯಕ್ಕೇ ಆಗಲೀ, ಇಲ್ಲೆಲ್ಲ ಕಾಂಗ್ರೆಸ್ ಸರ್ಕಾರ ಇದೆ, ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಇದೆಯೆನ್ನುವ ಕಾರಣದಿಂದ ನಮಗೆ ಅವರ ಸಹಾಯ ಕೊಡಬೇಕಾಗಿತ್ತು, ನಮಗೆ ಪ್ರಭಾವ ಇಲ್ಲ ಎಂದು ನಾವು ಹೇಳುತ್ತೀರಿ. ಇದರ ಒಂದು ತಾತ್ವಿಕ ಹಿನ್ನೆಲೆ ಏನು ಇದೆ ಎಂದರೆ, ಅವರೂ ನಾವು ಒಂದೇ ಪಕ್ಷದ ಸರ್ಕಾರ ಎಂದ ಮಾತ್ರಕ್ಕೆ ನಮಗೆ ಹೆಚ್ಚಾಗಿ ಹಣಕೊಡಬೇಕು ಎನ್ನುವುದು ಒಪ್ಪತಕ್ಕದ್ದಲ್ಲ. ಅವರು ಆ ರೀತಿ ತಾರತಮ್ಯ ಮಾಡಿದ್ದಾರೆ ಎಂದರೆ ಅದು ನಿಜಕ್ಕೂ ದೂರವಾದ ಮಾತು ಆದೀತು. ಯಾರೇ ಆಗಲೀ, ಕೇಂದ್ರಸರ್ಕಾರವೇ ಆಗಲೀ, ರಾಜ್ಯಸರ್ಕಾರವೇ ಆಗಲೀ ನಾನು ಎರಡು ಮೂರು ಸಂದರ್ಭಗಳಲ್ಲಿ ಈ ಮಾತನ್ನೂ ಹೇಳಿದ್ದೇನೆ, ಈಗಲೂ ಮಾನ್ಯ ವಿರೋಧಪಕ್ಷದ ನಾಯಕರ ಗಮನಕ್ಕೆ ಆ ವಿರೋಧ ಪಕ್ಷದ ಗುಂಪಿಗೆ ನಾನು ನಮ್ರತೆಯಿಂದ ಹೇಳುತ್ತೇನೆ, ಸರ್ಕಾರವನ್ನು ಒಂದು ಸಾರಿ ರಚನೆ ಮಾಡಿ ಅದು ಅಧಿಕಾರ ಸ್ವೀಕಾರ ಮಾಡಿದ ಮೇಲೆ ನಾವು ಈ ಪಕ್ಷ ಆ ಪಕ್ಷ ಎಂದು ಕಷ್ಟ ಕಾಲ ಬಂದಾಗ, ಅಭಿವೃದ್ಧಿ ಕೆಲಸಕಾರ್ಯಗಳನ್ನು ಮಾಡುವಾಗ, ಸರ್ಕಾರ ನ್ಯಾಯ ದೊರಕಿಸಿಕೊಡುವ ಸಂದರ್ಭದಲ್ಲಿ ವ್ಯಕ್ತಿ ವ್ಯಕ್ತಿಗಾಗಲೀ ಪಕ್ಷ ಪಕ್ಷಕ್ಕಾಗಲೀ ಭೇದ ಮಾಡತಕ್ಕದ್ದು ಮಾಡಿದರೆ ನಾವು ಏನು ಒಂದು ಸ್ವಮಾನ ವಚನ ಸ್ವೀಕರಿಸಿ ಅಧಿಕಾರ ಹೊತ್ತಿದ್ದೇವೋ ಅದಕ್ಕೆ ತದ್ವಿರುದ್ಧವಾಗಿ ಮೋಸ ಮಾಡಿದಂತಾಗುತ್ತದೆ. ಈ ಒಂದು ವಿಷಯದಲ್ಲಿ ನಾನು ಪೂರ್ಣ ನಂಬಿಕೆಯುಳ್ಳವನು ಕೇಂದ್ರದವರು ಆ ರೀತಿ ಮಾಡಿದರೆ ತಪ್ಪಾಗುತ್ತದೆ. ರಾಜ್ಯಮಟ್ಟದಲ್ಲಿ ಒಬ್ಬರ ಕ್ಷೇತ್ರ ವಿರೋಧ ಪಕ್ಷಕ್ಕೆ ಸೇರಿದ್ದು ಇರಬಹುದು. ಇನ್ನೊಂದು ಕ್ಷೇತ್ರ ನಮ್ಮ ಪಕ್ಷಕ್ಕೆ ಸೇರಿದ್ದು ಇರಬಹುದು. ವಿರೋಧಪಕ್ಷದ ಕ್ಷೇತ್ರದಲ್ಲಿ ಕೆರೆ ಕಟ್ಟಿಕಟ್ಟುವುದನ್ನು ನಿಲ್ಲಿಸಿಬಿಡಿ, ರಸ್ತೆ ಮಾಡುವುದು ಬಿಟ್ಟು ಬಿಡಿ, ಹಣ ಕೊಡುವುದು ಬೇಡ, ಇನ್ನೊಂದು ಕ್ಷೇತ್ರಕ್ಕೆ ಕೊಡಿ ಎಂದರೆ, ಶುದ್ಧ ತಪ್ಪು ಮಾಡುತ್ತೇವೆ, ಕಾನ್‌ಸ್ಟಿಟ್ಯೂಷನ್‌ಗೆ ಮೋಸ ಮಾಡುತ್ತೇವೆ ಮತ್ತು ನಾನು ಕೂಡ ಈ ಟೀಕೆಗಳಿಗೆ ಅರ್ಹನಾಗುತ್ತೇನೆ.

ನಾವು ಇಲ್ಲ ಇರುವುದಕ್ಕೆ ರಾಯಕ್ಕಿಲ್ಲ ಎಂದು ಅವರು ಹೇಳುವುದಕ್ಕೆ ಸ್ವಲ್ಪವೂ ಹಿಂಜರಿಯುವುದಿಲ್ಲ. ನಾನು ಇನ್ನು ಏನಾದರೂ ಹೇಳಿದರೆ ಶ್ರೀಮಾನ್ ದೇವೇಗೌಡರು ಕೋಪಮಾಡಿಕೊಳ್ಳುತ್ತಾರೆ. ಅದೇ ಬಂದಿರುವ ಕಷ್ಟ. ನನಗೆ ಅಂಜಿಕೆಯಾಗುತ್ತಿದೆ, ನನ್ನೆಯಿಂದ ಅವರನ್ನು ನೋಡಿದರೆ ಅಂಜಿಕೆಯಾಗುತ್ತಿದೆ. ನಿಮ್ಮ ಅವತಾರ ನೋಡಿದಾಗ ನನಗಂತು ಘಾಬರಿಯಾಯಿತು. ಅಷ್ಟೊಂದು ಕೋಪದಿಂದ ಕಿಡಿ ಕಿಡಿ ಆಗಿದ್ದರು. ಇವೊತ್ತು ದಯವಿಟ್ಟು ಕೋಪಮಾಡಿಕೊಳ್ಳಬೇಡಿ ಸ್ವಲ್ಪ ಮತ್ತೆ ಹೇಳುತ್ತೇನೆ, ನೀವು ಕಂಡಿದ್ದಂತಹ ಕೆಟ್ಟ ಸ್ವಪ್ನದ ಥಾಯೇ ಇನ್ನು ಹೋಗಿಲ್ಲ. ಅದನ್ನು ಮರೆಯಬೇಕಾದರೆ ಸ್ವಲ್ಪ ಕಾಲ ಬೇಕಾಗುತ್ತದೆ. ಯಾರಿಗೂ ಅಷ್ಟೆ.

ಶ್ರೀ ಎಚ್. ಡಿ. ದೇವೇಗೌಡ.—ತಮ್ಮನ್ನು ಡಿಸ್ಟರ್ಬ್ ಮಾಡುವುದಕ್ಕೆ ನನಗೆ ಇಷ್ಟವಿಲ್ಲ. ಶ್ರೀಮಾನ್ ಸಿ. ಸುಬ್ರಮಣ್ಯಂರವರು ಮದ್ರಾಸಿನಲ್ಲಿ ನಮ್ಮ 10 ವರ್ಷದ ಆಡಳಿತ ಬಹಳ ಚೆನ್ನಾಗಿತ್ತು. ನಿಮ್ಮ ಸರ್ಕಾರ ಬಂದು ಅದನ್ನು ಕೆಡಿಸಿತು ಎಂದು ಹೇಳಿದ್ದಾರೆ.

ಶ್ರೀ ಡಿ. ದೇವರಾಜ್ ಅರಸ್.—ನಾನು ನಮ್ಮ ರಾಜ್ಯದ ವಿಷಯ ಅಡುತ್ತಿದ್ದೇನೆ. ಇಲ್ಲ 10 ವರ್ಷದ ಕತೆ ಬೇರೆ. ತಮಿಳು ನಾಡಿನ 10 ವರ್ಷದ ಕಥೆ ಬೇರೆ ? ಬೇರೆ ಬೇರೆ ಕಥೆಗಳು ಇರುತ್ತವೆ. ಅದು ಗೊತ್ತಿದೆ. ಈಗ 10 ವರ್ಷದ ಕಥೆಗೆ ಹೋಲಿಸುವುದು ಬೇಡ. ಒಟ್ಟಿನಲ್ಲಿ ಹೇಳಿದೆ, ರಾತ್ರಿ ಮಲಗಿದ್ದು ಬೆಳಿಗ್ಗೆ ಎದ್ದಾಗ ರಾತ್ರಿ ದುಸ್ವಪ್ನ ಬಿದ್ದಿದ್ದರೆ ಅದೇ ಬೆಳಿಗ್ಗೆಯೆಲ್ಲಾ ಇರುತ್ತದೆ. ಇದು ದುಸ್ವಪ್ನ ಇದ್ದ ಹಾಗೆ ಇದೆ. ಅದರ ಛಾಯೆ ಇನ್ನೂ ಉಳಿದಿದೆ ಪೂರ್ತಿ ಹೋಗಿಲ್ಲವೆಂದು ನನಗೆ ಅನ್ನಿಸುತ್ತದೆ. ನನ್ನ ಮಾತನ್ನು ಮುಂದುವರಿಸುವುದಕ್ಕೆ ಮುಂಚೆ ಒಂದು ಮಾತನ್ನು ಹೇಳಬೇಕೆಂದು ಇಚ್ಛೆಪಡುತ್ತೇನೆ. ಸರ್ಕಾರದವತಿಯಿಂದ ಕ್ಷಾಮ ನಿವಾರಣೆ ಕೆಲಸವಾಗಲಿ, ಅಭಿವೃದ್ಧಿ ಕೆಲಸವಾಗಲಿ, ಮೈಯುಕ್ತಿಕ ನ್ಯಾಯ ದೊರಕಿಸಿಕೊಡುವ ವಿಚಾರವಾಗಲಿ, ಪೋಲೀಸ್ ದಕ್ಷತೆಯ ಕಾರ್ಯದರ್ಶಿಗಳಾಗಲಿ, ಸೂಸ್ಪೆಟಗಳ ವಿಚಾರದಲ್ಲಿ ತಪ್ಪು ಮಾಡಿರುವುದಾಗಲಿ, ಮಿಸ್ ಅಪ್ರೋಪ್ರಿಯೇಷನ್ ವಿಷಯದಲ್ಲಾಗಲಿ, ಪೋಲೀಸರು ದೌರ್ಜನ್ಯಕೃತ್ಯ ನಡೆಸುವುದಾಗಲಿ, ವಿರೋಧ ಪಕ್ಷದವರು ಇದ್ದರೆ ಅವರನ್ನು ಮಟ್ಟಹಾಕಿ, ನಮ್ಮ ಪಕ್ಷದವರು ಇದ್ದರೆ ಸುಮ್ಮನೆ ಬಿಟ್ಟುಬಿಡಿ ಎಂದು ಹೇಳುವುದಾಗಲಿ, ಕ್ರಿಮಿನಲ್ ಕೇಸನ್ ಮಾಡುವುದಾಗಲಿ, ಸಿವಿಲ್ ಅಡ್ಮಿನಿಸ್ಟ್ರೇಷನ್ ಇಲ್ಲೀಗಲ್ ಆಗಿ ಮಾಡುವುದಾಗಲಿ, ಅಪಾಯಿಂಟ್‌ಮೆಂಟ್ಸ್, ಪ್ರೊಮೋಷನ್ಸ್ ಮತ್ತೊಂದು ಕೊಡುವಾಗ ಜಾತಿ ಮೇಲೆ ಮಾಡತಕ್ಕಂಥದ್ದು ಯಾವ ಜಾತಿಯವನು ಇವನು, ಇವನು ನಮ್ಮ ಜಾತಿಯವನು ನೋಡೋಣ, ಬೇರೆ ಜಾತಿಯವನು ಇದ್ದರೆ ಬಿಡೋಣ ಎನ್ನತಕ್ಕಂಥಾದ್ದಾಗಲಿ, ಇದೆಲ್ಲಕ್ಕೂ ಸಂಪೂರ್ಣ ವಿರಾಮ ಹಾಕಬೇಕು. ನಾವು ನಡೆಯುವಾಗ ಎಡವಿದರೆ, ನಮ್ಮಲ್ಲಿ ತಪ್ಪು ಇದ್ದರೆ ಆ ತಪ್ಪನ್ನು ತೋರಿಸಿಕೊಟ್ಟಲ್ಲಿ ನಿಜವಾಗಿ ತಮಗೆ ಅಭಿನಂದನೆ ಸಲ್ಲಿಸುತ್ತೇನೆ. ಇನ್ನೊಂದು ಏನು ಎಂದರೆ ಕೇಂದ್ರ ಸರ್ಕಾರ ಅಥವಾ ಇಂದಿರಾಗಾಂಧಿ ನಾಯಕತ್ವದಲ್ಲಿ ನಡೆಯತಕ್ಕ ಸರ್ಕಾರ ನಮಗೆ ಕಡಿಮೆ ನೆರವು ಕೊಡುವುದಾಗಲಿ, ಇನ್ನೊಬ್ಬರಿಗೆ ಜಾಸ್ತಿ ನೆರವು ಕೊಡುವುದಾಗಲಿ ಅಥವಾ ನನ್ನ ಪ್ರಭಾವ ಬೀರುವುದರಿಂದ ಕೊಡುತ್ತಾರೆ ಎಂದರೆ ಈ ವಿಷಯ ಏನು ಎಂದು ನಾನು ತುಂಬಾ ಯೋಚನೆ ಮಾಡಿದೆ. ಈ ರೀತಿ ಆಗಿಂದಾಗ್ಗೆ ಟೀಕೆ ಬರುತ್ತಾ ಇದೆ, ಮೇಲ್ಮನೆಯಲ್ಲಿ ಒಬ್ಬ ಸದಸ್ಯರು ಟೀಕೆ ಮಾಡುವುದಕ್ಕೆ ಹೊರಟಿದ್ದಾರೆ, ಇಲ್ಲೂ ಕೂಡ ಹೇಳಿದ್ದಾರೆ, ಇದು ನನಗೆ ಅರ್ಥವಾಗಲಿಲ್ಲ. ಪ್ರಭಾವ ಎಂದರೆ ಹೇಗೆ ? ನಿಜವಾಗಿ ನನಗೆ ಅರ್ಥವಾಗಿಲ್ಲ. ಯಾವ ರೀತಿ ಪ್ರಭಾವ ಬೀರಬೇಕು ? ಹೇಗೆ, ಕೈಕಾಲು ಕಟ್ಟಿಕೊಳ್ಳಬೇಕೆ ? ಜಗಳವಾಡಬೇಕೆ ? ಏನು ಸಮಾಚಾರ ! ಪ್ರತಿಯೊಂದು ಹಣ ಕೊಡುವಾಗ ನಾವು ಏನು ಕಾರ್ಯಕ್ರಮ ನಡೆಸುತ್ತೇವೆ ಅದರ ಮೇಲೆ ಹೋಗುತ್ತದೆ. ಮಹಾರಾಷ್ಟ್ರದಲ್ಲಿ ಇಷ್ಟು ಕೋಟಿ ರೂಪಾಯಿ ಕೊಟ್ಟು ಬಿಟ್ಟಿದ್ದಾರೆ ಎಂದು ಪತ್ರಿಕೆಯಲ್ಲಿ ಬಂದ ತಕ್ಷಣ ಅವರು 70 ಕೋಟಿ ರೂಪಾಯಿ, 100 ಕೋಟಿ ರೂಪಾಯಿ ಕೇಳಿರಬಹುದು ಅಷ್ಟೇ ಕೊಟ್ಟಿದ್ದಾರೆ ಎಂದು ಆರ್ಥವೇ ? ನಾವು 150 ಕೋಟಿ ರೂಪಾಯಿ ಕೇಳಿದ್ದೇವೆ, ಕೊಟ್ಟಿದ್ದಾರೆ ಎಂದು ಆಗಲಿಲ್ಲ. 150 ಕೋಟಿ ರೂಪಾಯಿ 250 ಕೋಟಿ ರೂಪಾಯಿ ಕೇಳಿರಬಹುದು ಎಂದ ಮಾತ್ರಕ್ಕೆ ಕೊಟ್ಟಿದ್ದಾರೆಂದು ಆಗುವುದಿಲ್ಲ. ದಯಮಾಡಿ ನಾನು ಹೇಳುವುದನ್ನು ಕೇಳಬೇಕು. ಯಾವುದೇ ಒಂದು ರಾಜ್ಯದಲ್ಲಿ ಕ್ಷಾಮ ನಿವಾರಣೆ ಬಗ್ಗೆ ಕೇಂದ್ರದಿಂದ ನೆರವು ಬರತಕ್ಕದ್ದು ನಾವು ಖರ್ಚುಮಾಡಿದ ಹಾಗೆಲ್ಲಾ ಅವರು ಹಣವನ್ನು ನಮ್ಮ ವೇಸ್ ಮತ್ತು ಮೀನ್ಸ್ ಪೊಸಿಷನ್ ನೋಡಿಕೊಂಡು ಕೊಡುತ್ತಾರೆ. ಅದನ್ನು ರಿಸರ್ವ್ ಬ್ಯಾಂಕಿನಲ್ಲಿ ಆಗಿಂದಾಗ್ಗೆ ತಿಳಿದುಕೊಳ್ಳುತ್ತಾ ಇರುತ್ತಾರೆ. ರಿಸರ್ವ್ ಬ್ಯಾಂಕಿನಲ್ಲಿ ಲಿಮಿಟ್ ಏನು ಹಾಕುತ್ತಾರೆ, ಓವರ್‌ಡ್ರಾಫ್ಟ್ ಲಿಮಿಟ್ ಏನು ಇರುತ್ತದೆ ಅದನ್ನು ತುಂಬಿಕೊಂಡು ಬರುತ್ತಾರೆ. ಮಹಾರಾಷ್ಟ್ರಕ್ಕೂ ಇದೇ ತತ್ವದ ಮೇಲೆ ಹೋಗುತ್ತದೆ. ನಮ್ಮಲ್ಲೂ ಇದೆ ತತ್ವ ಹಾಕುತ್ತಾರೆ. ನಾವು 150 ಕೋಟಿ ರೂಪಾಯಿ ಕೇಳಿದ್ದೇವೆ, 150 ಕೋಟಿ ರೂಪಾಯಿ ಕೊಡುತ್ತಾರೆ ಅಥವಾ ಬಿಡುತ್ತಾರೆ ಎನ್ನುವುದಕಿಂತ ಹೆಚ್ಚಿಗೆ ನಾವು ಎಷ್ಟು ಖರ್ಚುಮಾಡಿಕೊಂಡು ಹೋಗುತ್ತೇವೆ ಅಷ್ಟು ಕೊಡುತ್ತಾರೆ ಎನ್ನುವುದನ್ನು ಅವರು ಹೇಳಿದ್ದಾರೆ. ಈ ವಿಷಯದಲ್ಲಿ ಮುಂದಿನ ತಿಂಗಳಿನಲ್ಲಿ 8–10 ಕೋಟಿ ರೂಪಾಯಿ ಖರ್ಚುಮಾಡಿದೆವು ಎಂದು ಇಟ್ಟುಕೊಳ್ಳೋಣ. 10 ಕೋಟಿ ರೂಪಾಯಿ ಅವರು ಕೊಡಬಹುದು, ಕೊಟ್ಟೇ ಕೊಡುತ್ತಾರೆ. ಮತ್ತೆ ಈ ಹಣವನ್ನು ಅವರು ಏತಕ್ಕಾಗಿ ಒಂದೇ ಮೊತ್ತದಲ್ಲಿ ಕೊಡುವುದಿಲ್ಲ ? ಅದಕ್ಕೆ ಒಂದು ಕಾರಣ ಇದೆ. ಸರ್ವಸಾಧಾರಣವಾಗಿ ದೇಶದ ಎಲ್ಲಾ ಕಡೆ ಏನಾಗಿದೆ, ಫ್ಯಾಮಿನ್‌ಗೋಸ್ಕರ ಹಣವನ್ನು ತೆಗೆದುಕೊಂಡರೆ ಅದನ್ನು ಫ್ಯಾಮಿನ್ ಸ್ಪೆಷಲ್ ಗೋಸ್ಕರ ಖರ್ಚು ಮಾಡುವುದಕ್ಕಿಂಥ ಹೆಚ್ಚಿಗೆ ಬೇರೆ ಬೇರೆ ಕೆಲಸಗಳಿಗೆ ಖರ್ಚುಮಾಡಿರತಕ್ಕಂಥ ನಿದರ್ಶನಗಳು ಕೇಂದ್ರಕ್ಕೆ ಗೊತ್ತಾಗಿದೆ. ನಮ್ಮ ರಾಜ್ಯದಲ್ಲಿ ಅಲ್ಲದೆ ಸ್ವಲ್ಪಮಟ್ಟಿಗೆ ಬೇರೆ ರಾಜ್ಯ

ದಲ್ಲೂ ಆಗಿದೆ. ಆದ್ದರಿಂದ ಇದು ನಮ್ಮ ರಾಜ್ಯ ಒಂದಕ್ಕೆ ಅಲ್ಲ ಎರ್ಲಾ ಕಡೆ ಆಗಿದೆ. ಆವರು ಏನು ಮಾಡುತ್ತಾರೆ, 64 ಫ್ಯಾಮಿನ್‌ಗಾಗಿ ಕೊಡತಕ್ಕ ಹಣ ಆ ಒಂದು ಕೆಲಸ ಕಾರ್ಯಗಳಿಗಾಗಿ ಖರ್ಚು ಮಾಡಬೇಕು, ಒಂದೇ ಸಾರಿ ಕೊಟ್ಟರೆ ಬೇರೆ ಬೇರೆ ಬಾಬುಗಳಿಗೆ ಖರ್ಚು ಮಾಡುತ್ತಾರೆ ಎನ್ನುವ ದೃಷ್ಟಿಯಿಂದ, ಫೈನಾನ್ಸಿಯಲ್ ಡಿಸಿಪ್ಲಿನ್ ಎಂದು ಏನು ಹೇಳುತ್ತಾರೆ ಆ ಡಿಸಿಪ್ಲಿನ್ ಮೈಂಟೈನ್ ಮಾಡುವ ದೃಷ್ಟಿಯಿಂದ ಈ ರೀತಿಯಾಗಿ ಅರೇಂಜ್‌ಮೆಂಟ್ ಇಟ್ಟಿದ್ದಾರೆ. ಇದನ್ನು ಹೇಳಿದ ಮೇಲೆ ತಾವು ಒಪ್ಪುತ್ತೀರಿ. ಪ್ರಭಾವ ಭೀರತಕ್ಕಂಥದ್ದಿಲ್ಲ. ನಮ್ಮಲ್ಲಿರುವ ಕಂಡಿಷನ್ ಏನು ಇದೆ ಎನ್ನುವ ವಿಚಾರವನ್ನು ತಿಳಿಸತಕ್ಕದ್ದು ಮುಖ್ಯ ತಿಳಿಸುವುದಕ್ಕೆ ಆಗಿಲ್ಲ ಎಂದರೆ ನಮಗೆ ಕಾಗದದಲ್ಲಿ ಬೆರೆಯುವುದಕ್ಕೆ ಗೊತ್ತಾಗುವುದಿಲ್ಲವೇ ? ಇನ್ನೊಬ್ಬರನ್ನು ನಂಬಿಸುವ ಹಾಗೆ ತಿಳಿಸುವುದಕ್ಕೆ ಆಗುವುದಿಲ್ಲವೇ ? ಏತಕ್ಕೆ ಆಗುವುದಿಲ್ಲ ? ಇವೇ ಸಭೆಯಲ್ಲಿ ನನಗೆ ಗೊತ್ತಿದೆ 1967ನೇ ಇಸವಿಯಲ್ಲಿ ಎಂದು ಕಾಣುತ್ತದೆ ನಾವು 20 ಕೋಟಿ ರೂಪಾಯಿಗಳು ಬೇಕು ಎಂದು ಹೇಳಿ ಒಂದು ರೆಸಲ್ಯೂಷನ್ ಮಾಡಿದೆವು. 10 ವರ್ಷಗಳಿಂದ, ಮಾನ್ಯ ಅಧ್ಯಕ್ಷರೇ, ನಮ್ಮ ಸರ್ಕಾರಿ ರಿಕಾರ್ಡ್ಸ್ ಪ್ರಕಾರ ಇದುವರೆಗೆ ಏಳು ಕ್ಷಾಮಗಳಾಗಿವೆ, ಇದು ಎಂಟನೆಯದು ಎಂದು ಕಾಣುತ್ತದೆ. ಇರಲಿ ಆಗ ಒಂದೇ ಸಾರಿ ಏನು ಮಾಡಿದೆವು 20 ಕೋಟಿ ರೂಪಾಯಿಬೇಕು ಎಂದು ಹೇಳಿ ಯೂನಾನಿಮಸ್ ಆಗಿ ಎರ್ಲಾ ಪಕ್ಷದವರು ಒಪ್ಪಿ ಒಂದು ತೀರ್ಮಾನವನ್ನು ತೆಗೆದುಕೊಂಡೆವು ಅದು ದೇವೇಗೌಡರಿಗೂ ಜ್ಞಾಪಕ ಇರಬಹುದು. ಇದೇ ವಿಧಾನ ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯ ಪಾಸಾಗಿದ್ದರೂ 20 ಕೋಟಿ ರೂಪಾಯಿ ತಂದರೇನು ? ಅವರು ತಂದದ್ದು ಐದಾರು ಕೋಟಿ ರೂಪಾಯಿ ಮಾತ್ರ. ಹಿಂದೆ ಇದ್ದಾಗ ನಡೆದಿರತಕ್ಕದು ಇದು. ಅದರ ಬಗ್ಗೆ ನಾನು ಟೀಕೆ ಮಾಡುತ್ತಿಲ್ಲ. ನಾವು ಕೇಳಿದಷ್ಟನ್ನೂ ಕೊಡುತ್ತಾರೆಂದು ಹೇಳುವುದಕ್ಕಾಗುವುದಿಲ್ಲ, ಯಾರು ಕೇಳಿದರೂ ಕೊಡುವುದಕ್ಕಾಗುವುದಿಲ್ಲ. ನಾವು ವಿಚಾರ ತಿಳಿದುಕೊಂಡು ಹೋಗಬೇಕು. ನಮ್ಮ ಸರ್ಕಾರಕ್ಕೆ ಇರುವ ವಿಷಯಗಳನ್ನು ತಿಳಿಸಬಾರದು, ಮುಚ್ಚಿಟ್ಟುಕೊಳ್ಳಬೇಕು ಎನ್ನುವ ಹಾಗೆ ಏನಿದೆ ? ಹಿಂದೆ ಇದನ್ನೆ ಹೇಳಿದ್ದೇನೆ, ಈಗಲೂ ಅದನ್ನೆ ಹೇಳುತ್ತಿದ್ದೇನೆ. ನಾವು ಉತ್ಪ್ರೇಕ್ಷೆ ಮಾಡುವುದರಿಂದ ಕೇಂದ್ರದವರಿಗೆ ಅರ್ಥವಾಗುವುದೇ ಇಲ್ಲವೇ ? ನಾವು ಬಚ್ಚಿಡಬೇಕಾದ್ದಕ್ಕೆ ಕಾರಣವಿಲ್ಲ, ನಮಗೆ ಇರತಕ್ಕ ನೋವನ್ನು, ನಮಗೆ ಇರತಕ್ಕ ಕಷ್ಟವನ್ನು ಬಚ್ಚಿಡುವುದಕ್ಕೆ ಕಾರಣವೇನು, ಅದಕ್ಕೆ ಒತ್ತಡವೇನು ? ಒಂದು ಸಂದರ್ಭದಲ್ಲಿ ಬಹಿರಂಗ ಭಾಷಣದಲ್ಲಿ ವಿರೋಧ ಪಕ್ಷದ ಸ್ನೇಹಿತರು ಕೆಲವರು ಹೇಳಿದ್ದಾರೆ, ದೇಶದಲ್ಲಿ ಕ್ಷಾಮ ಬಂದಿರುವುದು ಏಕೆ ಎಂದರೆ ಇಂದಿರಾಗಾಂಧಿಯವರಿಗೆ ಓಟು ಕೊಟ್ಟರಿ ನೋಡಿ ಅದಕ್ಕೆ ಕ್ಷಾಮ ಬಂತು ಎಂದು ನೀವು ಷರು ಮಾಡಿದರೆ ಇನ್ನೊಬ್ಬರೂ ಹೇಳುವುದಕ್ಕೆ ಷರು ಮಾಡುತ್ತಾರೆ. ಯಾರೇ ಟೀಕೆ ಮಾಡಬೇಕಾದರೂ ಒಂದು ಮಟ್ಟದಿಂದ ಮಾಡತಕ್ಕದ್ದು ಒಳ್ಳೆಯದು.

3-30 P.M.

ಶ್ರೀ ಎಚ್. ಡಿ. ದೇವೇಗೌಡ.—ಇಂಥವರು ಹೇಳಿದ್ದಾರೆಂದು ಹೇಳಿ. ನೀವು ಏನೇನು ಹೇಳಿದ್ದೀರಿ ಎನ್ನುವುದಕ್ಕೆ ಪೇಪರ್ ಕಟಿಂಗ್ಸ್ ಇಟ್ಟು ಹೇಳಿದ್ದೇನೆ, ಹಾಗೆಯೇ ಪೋಲೀಸ್ ಇರಾಖೆಯವರದಿಯಲ್ಲಿ ಇಂಥ ಊರಿನಲ್ಲಿ ಇಂದವರು ಹೀಗೆ ಹೇಳಿದರು, ಇಂದಿರಾಗಾಂಧಿಯವರಿಗೆ ಓಟು ಕೊಟ್ಟಿದ್ದರಿಂದ ಕ್ಷಾಮ ಬಂತು ಎಂದು ಹೇಳಿದರು ಎಂದು ಇರುವುದನ್ನು ಸಭೆಯ ಮುಂದೆ ಇಡಿ.

ಶ್ರೀ ಡಿ. ದೇವರಾಜ ಅರಸ್.—ರಿಪೋರ್ಟ್ ತರಿಸಿಕೊಡುತ್ತೇನೆ. ಸಭೆಯ ಮುಂದೆ ಇಡಬೇಕು ಎಂದರೆ ಅದಕ್ಕೆ ನನ್ನದೇನೂ ಅಡ್ಡಿ ಇಲ್ಲ. ನಾನು ಹೇಳುತ್ತಿರುವುದು ಏನೆಂದರೆ ನೀವು ಆ ರೀತಿ ಟೀಕೆ ಮಾಡಿದರೆ ನಾವೂ ಮಾಡಬೇಕಾಗುತ್ತದೆ. ನೀವು ಟೀಕೆ ಮಾಡಕೂಡದೆಂದು ಹೇಳುವುದಕ್ಕೆ ನನಗೆ ಅಧಿಕಾರವಿಲ್ಲ. ನೀವು ವಿರೋಧ ಪಕ್ಷದ ನಾಯಕರು, ನಿಮಗೆ ಹೇಳುವುದಕ್ಕೆ ಅಧಿಕಾರವಿದೆ. ನನಗೆ ಹೇಳುವುದಕ್ಕೂ ಅಷ್ಟೇ ಅಧಿಕಾರವಿದೆ.

ಶ್ರೀ ಎಚ್. ಡಿ. ದೇವೇಗೌಡ.—ನನಗೆ ಗೊತ್ತಿದ್ದ ಹಾಗೆ ಇಂದಿರಾಗಾಂಧಿಯವರಿಗೆ ಓಟು ಕೊಟ್ಟದ್ದರಿಂದ ಬರಗಾಲ ಬಂತು ಎಂದು ಶ್ರೀ ವೀರೇಂದ್ರ ಪಾಟೀಲರು ಹೇಳಿಲ್ಲ. ಬರಗಾಲ ಬಂದಿರತಕ್ಕದ್ದು ನೈಸರ್ಗಿಕವಾದುದು. ಅದನ್ನು ಬಡಿಸುವುದಕ್ಕೆ ಸರ್ಕಾರ ಸರಿಯಾದ ರೀತಿಯಲ್ಲಿ ತನ್ನ ಕೆಲಸ ಕಾರ್ಯಗಳನ್ನು ಮಾಡಿಲ್ಲ ಎಂದು ಅಪಾದನೆ ಮಾಡಿದರು. ಇಂದಿರಾ ಗಾಂಧಿಯವರಿಗೆ ಓಟು ಕೊಟ್ಟದ್ದರಿಂದ ಬರಗಾಲ ಬಂತು ಎಂದು ಯಾರು ಹೇಳಿದ್ದಾರೆನ್ನುವುದಕ್ಕೆ ರಿಪೋರ್ಟ್ ಸಭೆಯ ಮುಂದೆ ಇಟ್ಟರೆ ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಕ್ಷಾಮ ಇನ್ನು ಐದು ವರ್ಷಕಾಲ ಬರುವುದಿಲ್ಲವೆಂದು ನಿಮ್ಮ ಕಡೆಯಿಂದ ಭಾಷಣ ಮಾಡಿ, ನಾನು ಬೇಡವೆನ್ನುವುದಿಲ್ಲ.

ಶ್ರೀ ಪಾಟೀಲ್ ನಾಗರಾಜ್ .— ಮಾನ್ಯ ಮುಖ್ಯ ಮಂತ್ರಿಗಳನ್ನು ನೋಡಿದರೆ ಕ್ಷಾಮ ಬಂದಿರುವ ಹಾಗೆಯೇ ಕಾಣುವುದಿಲ್ಲ.

ಶ್ರೀ ಡಿ. ದೇವರಾಜ ಅರಸ್.— ಮಾನ್ಯ ಸದಸ್ಯರನ್ನು ನೋಡಿದರೆ ಸದಾ ಕ್ಷಾಮ. ಅಧ್ಯಕ್ಷರೇ, ನಾನು ಇದನ್ನು ಏಕೆ ಹೇಳಿದೆ ಎಂದರೆ ಅವರ ಹಕ್ಕನ್ನು ಟೀಕೆ ಮಾಡುವ ಅಧಿಕಾರ ನನಗಿಲ್ಲ. ಅವರಿಗೆ ಒಂದು ಔಚಿತ್ಯವಾದರೆ ಇನ್ನೊಂದೂ ಔಚಿತ್ಯವಾಗುತ್ತದೆ ಎಂಬ ಮಾತ್ರ ಹೇಳುತ್ತೇನೆ. ಇದನ್ನು ಒಪ್ಪಿದ ಮೇಲೆ ನಾನು ಹೇಳಿರತಕ್ಕ 'ನಿಮ್ಮ ಹಿಂದಿನ ಪಾಪ ಕರ್ಮದ ಫಲವಾಗಿ ಇವೆಲ್ಲ ಬಂದಿದೆ' ಎನ್ನುವುದನ್ನು ಈಗಲೂ ಹೇಳುತ್ತೇನೆ. ಇಂದಿರಾ ಗಾಂಧಿಯವರಿಗೆ ಓಟು ಕೊಟ್ಟದ್ದರಿಂದ ಹೀಗಾಯಿತು ಎಂದು ಹೇಳಿದ್ದರಿಂದ ಈ ಮಾತು ನಿಮಗೆ ಹೇಳಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೆಗೌಡ .— ಮಾನ್ಯ ಮುಖ್ಯ ಮಂತ್ರಿಗಳ ಭಾಷಣವನ್ನು ನಾನು ಕುತೂಹಲದಿಂದ ಕೇಳುತ್ತಿದ್ದೇನೆ. ನಾವು ಭಾಷಣ ಮಾಡಿರುವುದು ಎಲ್ಲ ಪ್ರಮುಖ ಪತ್ರಿಕೆಗಳಲ್ಲಿಯೂ ಬಂದಿದೆ. ನೀವು ಮಾಡಿರುವ ಭಾಷಣಗಳ ಪೇಪರ್ ಕಟಿಂಗ್ಸ್ ಇಟ್ಟುಕೊಂಡು ನಾನು ಹೇಳಿದ್ದೇನೆ. ವೀರೇಂದ್ರ ಪಾಟೀಲರು ಇಂದಿರಾಗಾಂಧಿಯವರಿಗೆ ಓಟು ಕೊಟ್ಟದ್ದರಿಂದ ಕ್ಷಾಮ ಬಂದಿದೆ ಎಂದು ಯಾವುದೇ ಪತ್ರಿಕೆಯಲ್ಲಿಯೂ ಬಂದಿಲ್ಲ. ಅದಕ್ಕೋಸ್ಕರವೇ ಪೊಲೀಸ್ ರಿಪೋರ್ಟ್ ತರಿಸಿ ಎಂದು ನಾನು ಹೇಳಿದ್ದು.

ಶ್ರೀ ಕೆ. ಎಂ. ನಾಗಣ್ಣ.—ಮಾನ್ಯ ಅಧ್ಯಕ್ಷರೇ, ಇಂದಿರಾ ಗಾಂಧಿಯವರ ಗಾಳಿಯಿಂದ ಬರಗಾಲ ಬಂದಿದೆ, ದೇವರಾಜ ಅರಸು ಅವರು ಬಂದುದರಿಂದ ಬರಗಾಲ ಬಂತು ಎಂದು ಹೇಳುತ್ತಿದ್ದಾರೆ. ಇವರಿಬ್ಬರ ಪರಸ್ಪರ ಆರೋಪ ಪ್ರತ್ಯಾರೋಪಗಳಲ್ಲಿ ಹೆಚ್ಚು ಸಂಖ್ಯೆಯ ಜನ ಅವಸ್ಥೆ ಪಡುತ್ತಾರೆ. ಅದಕ್ಕೆ ದಯವಿಟ್ಟು ಪರಿಹಾರ ತೋರಿಸಿ.

ಶ್ರೀ ಡಿ. ದೇವರಾಜ ಅರಸ್.—ಅಧ್ಯಕ್ಷರೇ, ನಾನು ಇನ್ನು ಇರಾಖೆಗಳಿಗೆ ಸಂಬಂಧಪಟ್ಟಂತೆ ಬಂದಿರುವ ಸಲಹೆಗಳು ಮತ್ತು ಟೀಕೆಗಳನ್ನಿವೆ ಅವುಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟ ಪಡುತ್ತೇನೆ. ಕೆಲವು ಇರಾಖೆಗಳಲ್ಲಿ ಕರಪ್ಷನ್ ಹೆಚ್ಚಾಗಿದೆ ಎನ್ನುವುದರ ಬಗ್ಗೆ ಕೆಲವರು ಹೇಳಿದ್ದಾರೆ. ನಮ್ಮ ಸದಸ್ಯರು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಎಷ್ಟು ಹೇಳಬೇಕು ಎಂದು ಅಷ್ಟಕ್ಕೇ ಅವರ ಭಾಷಣಗಳನ್ನು ಸೀಮಿತಗೊಳಿಸಿದ್ದರೆ ನಮಗೂ ಸುಲಭವಾಗುತ್ತಿತ್ತು. ಬಜೆಟ್ಟಿನಲ್ಲಿ ಹೇಳುವಂಥ ಅನೇಕ ವಿಷಯಗಳನ್ನೂ ಹೇಳಿದ್ದಾರೆ. ಅವುಗಳಿಗೆಲ್ಲ ಉತ್ತರ ಕೊಡುವುದಕ್ಕೆ ಸಾಧ್ಯವಿಲ್ಲ ಎನ್ನುವುದನ್ನು ನಾನು ಒಪ್ಪುತ್ತೇನೆ. ಆದರೂ ಕೆಲವಾರು ಮುಖ್ಯ ವಿಷಯಗಳ ಬಗ್ಗೆ ಬಂದಿರುವ ಕೆಲವು ಸಲಹೆಗಳು ಮತ್ತು ಟೀಕೆಗಳ ಬಗ್ಗೆ ಹೇಳಿದರೆ ತಪ್ಪಾಗಲಾರದು ಎಂದು ಅನ್ನಿಸುತ್ತದೆ,

ನಮ್ಮ ದೇಹದಲ್ಲಿ ಕರಪ್ಷನ್ ಎನ್ನುತಕ್ಕ ಜಾಡ್ಯವೇನಿದೆ ಅದು ಅಷ್ಟು ಸುಲಭವಾಗಿ ಹೋಗತಕ್ಕದ್ದಲ್ಲ. ಬಹಳ ಪ್ರಯತ್ನಗಳು ಕೆಲವು ಕಾಲ ನಡೆದರೆ ಆ ಒಂದು ಜಾಡ್ಯವನ್ನು ಕಡಮೆ ಮಾಡುವುದಕ್ಕೆ ಸಾಧ್ಯ.

ಶ್ರೀ ಎಸ್. ಬಂಗಾರಪ್ಪ.—ಅದು ಕಾಂಗ್ರೆಸ್ ಸರ್ಕಾರದ ಬಳುವಳಿ.

ಶ್ರೀ ಡಿ. ದೇವರಾಜ ಅರಸ್.—ನಿಮ್ಮ ಸಮಾಜವಾದಿ ಸರ್ಕಾರ ಮೂರು ದಿವಸ ಉಳಿಯಲಿಲ್ಲ. ನಿಮ್ಮ ಸರ್ಕಾರವೂ ನಡೆಯಿತು. ನಾವು ಇಷ್ಟು ವರ್ಷವಾದರೂ ಇದ್ದೇವೆ.

ನಿಮ್ಮವರು ಆವರ ಜೊತೆಗೆ ಸೇರಿಕೊಂಡು ಏನು ಮಾಡಿದ್ದೀರಿ ಎಂಬುದು ಗೊತ್ತು. ನೀವು ಚಿದ್ರ ಚಿದ್ರವಾಗಿದ್ದೀರಿ. ಈಗ ಏನು ಮಾಡುವುದಕ್ಕೂ ಆಗುವುದಿಲ್ಲ. ನಿಮಗೆ ಇದನ್ನು ನಾನು ಹೇಳುವುದರಲ್ಲಿ ಏನೂ ಪ್ರಯೋಜನವಿಲ್ಲ. ಸುಮ್ಮನೆ ದಯವಾಡಿ ತಾವು ಕೇಳಬೇಕು. ಇದು ಸುಲಭವಾಗಿ ಹೋಗತಕ್ಕ ಜಾಡ್ಯ ಅಲ್ಲ. ಎಲ್ಲಿ ಯಾವುದೇ ದೇಶದಲ್ಲಿ ಆಗಲಿ, ಅಧ್ಯಕ್ಷರೇ, ಬಡತನ ಎಲ್ಲಿ ಜಾಸ್ತಿಯಾಗಿರುತ್ತದೆ ಅಲ್ಲಿ ಈ ಒಂದು ಜಾಡ್ಯ ಜಾಸ್ತಿ ಇರುತ್ತದೆ. ಅಫ್ಲೂಯೆನ್ಸ್ ಸೊಸೈಟಿ ಇರುವ ಕಡೆ ಕೂಡ ಇದು ಬಹಳ ದೊಡ್ಡ ಪ್ರಮಾಣದಲ್ಲಿ ಇದೆ ಎಂದು ಹೇಳುತ್ತೇನೆ. ಅದು ಏನೇ ಇರಲಿ ನಾನು ಹೀಗೆ ಹೇಳಿದಾಕ್ಷಣಕ್ಕೆ ಇದನ್ನು ಹಾಗೇ ಬಿಟ್ಟುಕೊಂಡು ಹೋಗಬೇಕು ಎಂದು ಅಲ್ಲ. ಇದಕ್ಕೆ ನಾವು ಒಂದು ಮಾರ್ಗವನ್ನು ಕಂಡುಹಿಡಿಯುವುದು ಪ್ರಾಮುಖ್ಯವಾದ ವಿಚಾರ. ನಾವು ಲೋಕ ಆಯುಕ್ತವನ್ನು ನೇಮಿಸುವ ಬಗ್ಗೆ ಒಂದು ಬಿಲ್ಲನ್ನು ತಯಾರು ಮಾಡಿದ್ದೇವೆ. ಅದನ್ನು ತರಬೇಕು ಎಂದು ಸರಕಾರಕ್ಕೆ ಬಹಳ ಕುತೂಹಲ ಇದೆ. ಈಗಾಗಲೇ ಎಜಿಲೆನ್ಸ್ ಕಮಿಷನ್ ಎಂದು ಇದೆ. ವಿಜಿಲೆನ್ಸ್ ಕಮಿಷನ್ ಕೇಪಲ ಸರಕಾರೀ ನೌಕರರಿಗೆ ಸೀಮಿತವಾಗಿರುತ್ತದೆ. ಲೋಕ ಆಯುಕ್ತ ಬಿಲ್ಲು ತರುವುದರಿಂದ ವಿಜಿಲೆನ್ಸ್ ಕಮಿಷನ್‌ಗಿಂತ ಇದಕ್ಕೆ ಅಧಿಕಾರವಾಪ್ತಿ ಹೆಚ್ಚಾಗಿರುವುದರಿಂದ ಮಂತ್ರಿ

ಗಳ ಮೇಲೂ ಲೋಕ ಆಯೋಗಕ್ಕೆ ಅಧಿಕಾರವಿರುತ್ತದೆ. ಆ ಕಾರಣವಿಂದ ಈ ಬಿಲ್ಲನ್ನು ತರೋಣ ಎನ್ನುವ ಅಭಿಪ್ರಾಯ ಇದೆ. ತರುವ ಪ್ರಯತ್ನ ಮಾಡುತ್ತೇನೆ. ಅದು ಒಂದು ದೊಡ್ಡ ಹೆಜ್ಜೆ ಎಂದು ನನ್ನ ಭಾವನೆ. ತಾವು ಅದನ್ನು ಒಪ್ಪಿಕೊಳ್ಳುತ್ತೀರಿ ಎಂದು ತಿಳಿದುಕೊಂಡಿದ್ದೇನೆ. ಕರಪ್ಷನ್ ಕಡಿಮೆ ಮಾಡುವುದಕ್ಕೆ, ನಿರ್ಮೂಲ ಮಾಡುವುದಕ್ಕೆ ಆಗುತ್ತದೆಯೋ, ಇಲ್ಲವೋ ಎಂದು ಹೇಳುವುದಕ್ಕೆ ಸಾಧ್ಯ ಇಲ್ಲದೇ ಹೋದರೂ ಅದರಿಂದ ಬಹಳ ಮಟ್ಟಿಗೆ ಕಡಿಮೆ ಆಗುತ್ತದೆ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ವಿಜಿಲೆನ್ಸ್ ಕಮಿಷನ್ ಅನ್ನು ಯಾವುದಾದರೂ ಒಂದು ಮಿನಿಸ್ಟರ್ ಪೋರ್ಟ್‌ಫೋಲಿಯೋದೊಳಗೆ ಯಾಕೆ ಸೇರಿಸಬಾರದು ಎಂದು ಅರ್ಥಬರುವ ಹಾಗೆ ಕೆಲವು ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಪುನಃ ಅದನ್ನು ಸರಕಾರದ ಕೈಗೊಂಬೆ ಮಾಡಿಕೊಳ್ಳಬಾರದು ಎಂದು ಆ ರೀತಿ ಮಾಡಲಿಲ್ಲ. ಈಗ ಅದು ತನ್ನ ಕೆಲಸವನ್ನು ತೃಪ್ತಿಕರವಾಗಿ ಮಾಡದೆ ಇರುವುದಕ್ಕೆ ಕಾರಣ ಕೆಲವು ದಿವಸಗಳಿಂದ ವಿಜಿಲೆನ್ಸ್ ಪೋಸ್ಟ್ fill up ಆಗಿರಲಿಲ್ಲ. ನಾವು ಅಧಿಕಾರಕ್ಕೆ ಬಂದಮೇಲೆ ಫಿಲಪ್ ಮಾಡಿದ್ದೂ ಆಯಿತು. ಅವರು ರೀ ಆರ್ಗನೈಜೇಷನ್ ಮಾಡುವುದಕ್ಕೋಸ್ಕರ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಆ ಸಲಹೆಗಳನ್ನು ಸರಕಾರ ತೀವ್ರ ಗಮನಿಸಿದೆ. ಈಗ ಅವರಿಗೆ ಸ್ಟಾಫ್‌ನ್ನು ಹೆಚ್ಚಿಸಬೇಕು ಎಂದು ಹೇಳಿದ್ದಾರೆ. 15-16 ಸಾವಿರ ಕಂಪ್ಲೇಂಟ್ಸ್ ಇವೆ. ಅವುಗಳನ್ನು ನೋಡುವುದೇ ದೊಡ್ಡ ಕಷ್ಟವಾಗಿದೆ. ಅವರು ಕೂಡ ಹೇಚಾಟ ಮಾಡುತ್ತಿದ್ದಾರೆ. ಆದುದರಿಂದ ಅವರಿಗೆ ಹೆಚ್ಚಿನ ಸ್ಟಾಫ್ ಕೊಡೋಣ ಎಂದು ಸರಕಾರ ಯೋಜನೆ ಮಾಡುತ್ತಾ ಇದೆ. ಇದರಿಂದ ನಾವು ಹೆಚ್ಚಿನ ಮಟ್ಟದಲ್ಲಿ ಪ್ರಗತಿಯನ್ನು ಸಾಧಿಸುವುದಕ್ಕೆ ಸಾಧ್ಯ ಎಂದು ನನ್ನ ಅಭಿಪ್ರಾಯ.

ಶ್ರೀ ಎಸ್. ಬಂಗಾರಪ್ಪ.—ವಿಜಿಲೆನ್ಸ್ ಕಮಿಷನ್ನಿನ ರೆಕಮೆಂಡೇಷನ್ಸ್‌ನ್ನು ಎಷ್ಟು ಒಪ್ಪಿ ಕೊಂಡಿದ್ದೀರಿ, ಎಷ್ಟು ರಿಜಿಕ್ಟ್ ಮಾಡಿದ್ದೀರಿ? ಈಗಲೂ ಕೂಡ ಅದು ತಮ್ಮ ಕಂಟ್ರೋಲನಲ್ಲಿ ಇದೆಯೇ?

Sri D. DEVARAJA URS.—I can say with definiteness and certainty that Government has never interfered and are never going to interfere in the work of the Vigilance Commission. Show me one instance where we have interfered. ಶ್ರೀವಾನ್ ಮುಗ್ಗೆಂರವರನ್ನು ಯಾಕೆ ಎಲ್ಲಕ್ಕೂ ನೇಮಿಸಿದ್ದೀರಿ ಎಂದು ಆಕ್ಷೇಪಣೆ ಮಾಡಿದರು. ಅವರನ್ನು ನೇಮಿಸಬಾರದು ಎಂದು ಹೇಳುವ ಹಾಗಿಲ್ಲ. ಯಾಕೆ ನೇಮಿಸಬಾರದು? ಕ್ಷಾಮ ಕೆಲಸವನ್ನು ನೋಡಿಕೊಳ್ಳಬೇಕು ಎಂದು ಅವರನ್ನು ನೇಮಿಸಲಾಗಿದೆ. ಹಿಂದೆ 1962-63 ರಲ್ಲಿ ಕೂಡ ನಾನು ನೋಡಿದ್ದಾರಲ್ಲಿ ಇದೇ ಆಫೀಸರನ್ನು ಇದೇ ಕೆಲಸಕ್ಕೆ ನೇಮಿಸಿದ್ದರು.

ಶ್ರೀ ಹೆಚ್. ಡಿ. ದೇವೇಗೌಡ.—ಅವರಿಗೆ ಹುದ್ದೆಗಳು ಜಾಸ್ತಿ ಇವೆ.

ಶ್ರೀ ಡಿ. ದೇವರಾಜ್ ಅರಸ್.—ಅದಕ್ಕೆ ಅವರಿಗೆ ಏನು ಸಹಾಯಬೇಕೋ ಅದನ್ನು ಕೊಡುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಇನ್ನೂ ನಾಲ್ಕು ಹುದ್ದೆಗಳನ್ನು ಕೊಡಿ ಬೇಡ ಎಂದು ಹೇಳುವುದಿಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಅವರು ಕೆಲಸ ಮಾಡುವುದಕ್ಕೋಸ್ಕರ ಕೊಡಬೇಕು. ಇದರಲ್ಲಿ ಏನು ತೊಂದರೆ ಇದೆ ಎಂದು ನನಗೆ ಅರ್ಥವಾಗುವುದಿಲ್ಲ. ಈ ವಿಷಯವಾಗಿ ಅನೇಕರು ಮಾತನಾಡಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ.—ನಾನು ರಾಜ್ಯದಲ್ಲಿ ಅಧಿಕಾರಿಗಳಿಗೆ ಏನು ಅಭಾವ ಬಂದಿದೆ ಎಂದು ಕೇಳುತ್ತೇನೆ. ನಾಲ್ಕು ಹುದ್ದೆಗಳು ಒಬ್ಬರಲ್ಲೇ ಇರಬೇಕಾದರೆ ಅಧಿಕಾರಿಗಳ ಅಭಾವ ಎಂದು ಅರ್ಥವಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಅಧಿಕಾರಿಗಳ ಸಂಖ್ಯಾಬಲ ಏನು ಇದೆ ಅದರಲ್ಲಿ ದಕ್ಷತೆಯಿಂದ ಕೆಲಸವನ್ನು ಎಲ್ಲಾ ಅಧಿಕಾರಿಗಳು ಮಾಡುತ್ತಾರೆ ಎಂದು ಹೇಳುವುದು ಕಷ್ಟವಾಗುತ್ತದೆ. ಎಲ್ಲಾ ಅಧಿಕಾರಿಗಳೂ ದಕ್ಷತೆಯಿಂದ ಕೆಲಸ ಮಾಡುತ್ತಾರೆ.

ಶ್ರೀ ಹೆಚ್. ಡಿ. ದೇವೇಗೌಡ.—ದಕ್ಷತೆ ಅಭಾವ ಜಾಸ್ತಿಯಾಗಿದೆ.

ಶ್ರೀ ಡಿ. ದೇವರಾಜ್ ಅರಸ್.—ದಕ್ಷತೆ ಅಭಾವ ಜಾಸ್ತಿ ಆಗಿದೆಯೋ, ಕಡಿಮೆ ಆಗಿದೆಯೋ, ಎಂದು ಹೇಳುವುದಕ್ಕಿಂತ ಕ್ಷಾಮ ನಿವಾರಣಾ ಪ್ರದೇಶದಲ್ಲಿ ಹೆಚ್ಚಿನ ದುಡ್ಡನ್ನು ಖರ್ಚುಮಾಡ ತಕ್ಕದ್ದು ಇಂಜನೀಯರಿಂಗ್ ಡಿಪಾರ್ಟ್‌ಮೆಂಟ್ ಎಂದು ತಿಳಿದುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್.—ಒಬ್ಬರಿಗೆ ಒಂದೇ ಕೆಲಸ ಇರಬೇಕೆಂದು ತಾವು ಹೇಳುತ್ತೀರಿ. ಒಬ್ಬರಿಗೆ 12 ಕೆಲಸ ಯಾಕೆ ಇರಬೇಕು ?

ಶ್ರೀ ಡಿ. ದೇವರಾಜ್ ಅರಸ್.—ಶ್ರೀ ಹನುಮಂತರೆಡ್ಡಿ ಇದ್ದಾರೆ. ಈಗ ಕೆಲಸ ಪ್ರಾರಂಭ ಮಾಡಿರುವ ವ್ಯಾಪ್ತಿಯನ್ನು ನೋಡಿದರೆ ಒಬ್ಬ ಚೀಫ್ ಇಂಜನೀಯರ್ ಇಷ್ಟು ಕೆಲಸವನ್ನು ನೋಡುವುದಕ್ಕೆ ಕಷ್ಟವಾಗುತ್ತದೆ. We are examining whether it is necessary to go on with this or whether some other officer is also necessary. ಎನ್ನುವುದು ಕೆಲವು ದಿವಸಗಳು ಕಳೆದಮೇಲೆ ಅರ್ಥವಾಗುತ್ತದೆ. ಇಂಜನಿಯರ್ ಇನ್ ಚೀಫ್ ಎಂದು ಹೇಳಿ ಯಾಕೆ ಹಾಕಿದ್ದೇವೆ ಎಂದರೆ ಅಲ್ಲಿ ಎಲ್ಲಾ ಮೇಜರ್ ಇರಿಗೇಷನ್ ಕೆಳಗೆ ಇರತಕ್ಕ ಕೆನಾಲ್ ವರ್ಕ್ಸ್ ತೆಗೆದುಕೊಳ್ಳುವುದಕ್ಕೆ ಪ್ರಾರಂಭಮಾಡಿದ್ದೇವೆ. ಮತ್ತೆ ಮೈನರ್ ಇರಿಗೇಷನ್ಸ್ ಎಲ್ಲಾ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಾರಂಭಮಾಡಿದ್ದೇವೆ. ಮಿಡಿಯಂ ಇರಿಗೇಷನ್ ಕೆಲಸ ತೆಗೆದುಕೊಳ್ಳುವುದಕ್ಕೂ ಪ್ರಾರಂಭಮಾಡಿದ್ದೇವೆ. ರಸ್ತೆ ಕೆಲಸ ಮುಗಿದು ಹೋಗಿದೆ ಇನ್ನು ರಸ್ತೆ ಕೆಲಸ ತೆಗೆದುಕೊಳ್ಳುವುದಕ್ಕೆ ರಸ್ತೆಗಳು ಇಲ್ಲ. ಸಾಯಿಲ್ ಕನ್‌ಸರ್‌ವೇಷನ್ ಕೆಲಸವನ್ನು ದೊಡ್ಡ ಪ್ರಮಾಣದಲ್ಲಿ ನಡೆಸುತ್ತಾ ಇರಬೇಕಾದರೆ, 7-8 ಲಕ್ಷ ಜನರಿಗೆ ಕೆಲಸ ಕೊಡಬೇಕು ಎಂದು ಅಂದಾಜನ್ನು ಇಟ್ಟುಕೊಂಡಿರಬೇಕಾದರೆ ಬೇಗ ಬೇಗ ಕೆಲಸ ಆಗಬೇಕು, ಅದಕ್ಕೆ ಬೇಗ ಆಜ್ಞೆಕೊಡುವುದಕ್ಕೆ 5-6 ತಿಂಗಳು ತಡ ಆಗಬಾರದು ಎನ್ನುವ ದೃಷ್ಟಿಯನ್ನು ಇಟ್ಟುಕೊಂಡು ಮಾಡಿದ್ದೇವೆ. ನಮಗೆ ಕೆಲಸ ಆಗುವುದು ಮುಖ್ಯ. ಅದು ಯಾವ ರೀತಿ ಮಾಡಬೇಕು ಎನ್ನುವುದನ್ನು ಸ್ವಲ್ಪಮಟ್ಟಿಗೆ ನಮಗೆ ಬಿಡಿ. ಇದರಲ್ಲಿ ತಪ್ಪು ಇದ್ದರೆ ಹೇಳಿ.

ಶ್ರೀ ಎಂ. ಎಸ್. ಕೃಷ್ಣನ್.—ಕೆಲಸ ಮಾಡುತ್ತಾರೆ, ಬಿಡುತ್ತಾರೆ ಎನ್ನುವುದು ಬೇರೆ ಸಮಾಚಾರ. ನಿಮ್ಮ ಅಭಿಪ್ರಾಯದಲ್ಲಿ ಒಬ್ಬರಿಗೆ 10 ಕೆಲಸ ಹಚ್ಚಿದರೂ ಮಾಡುತ್ತಾರೆ ಎಂದು ಇದೆ.

ಶ್ರೀ ಡಿ. ದೇವರಾಜ್ ಅರಸ್.—ಇವರಿಗೆ ಇರತಕ್ಕ ಪೋಸ್ಟ್‌ನಲ್ಲಿ ಇದು ಮಾಡುವುದಕ್ಕೆ ಸಾಧ್ಯ ಇದೆ.

ಶ್ರೀ ವಾಟಾಳ್ ನಾಗರಾಜ್.—ಇದರಿಂದ ಆ ಅಧಿಕಾರಿಗಳಿಗೆ ಅನಮಾಧಾನವಾಗಿದೆ.

ಶ್ರೀ ಡಿ. ದೇವರಾಜ್ ಅರಸ್.—ಶ್ರೀ ನಾಗರಾಜ್‌ರವರು ಯಾರುಯಾರಿಗೆ ಅನಮಾಧಾನವಾಗಿದೆ ಎಂದು ಕಂಪ್ಲೇಂಟ್ಸ್ ತೆಗೆದುಕೊಂಡಿದ್ದಾರೆಯೇ ?

ಶ್ರೀ ವಾಟಾಳ್ ನಾಗರಾಜ್.—ಒಬ್ಬರೇ all in all ಆಗಿರುವುದು ಅಸಮಾಧಾನವಾಗಿದೆ.

ಶ್ರೀ ಡಿ. ದೇವರಾಜ್ ಅರಸ್.—ಪಬ್ಲಿಕ್ ಸರ್ವಿಸ್ ಕಮಿಷನ್ ಬಗ್ಗೆ ಕೆಲವು ಟೀಕೆಗಳನ್ನು ಮಾಡಿದ್ದಾರೆ. ಅದರ ಬಗ್ಗೆ ನಾನು ಹೇಳಬೇಕಾವ ಅಗತ್ಯ ಇಲ್ಲ. ಪಬ್ಲಿಕ್ ಸರ್ವಿಸ್ ಕಮಿಷನ್ ಆಡಳಿತದ ಬಗ್ಗೆ ಏನು ರಿಪೋರ್ಟ್ ಇದೆ ಅದು ಸಭೆಯ ಮುಂದೆ ಬರುವುದು ಇದೆ. ಸಭೆಯ ಮುಂದೆ ರಿಪೋರ್ಟ್ ಬಂದಾಗ ತಪ್ಪು ನೆಪುರಿಗಳನ್ನು ತೋರಿಸಿಕೊಟ್ಟರೆ ಅದಕ್ಕೆ ಸರಕಾರದವರು ಸೂಕ್ತವಾದ ಉತ್ತರವನ್ನು ಕೊಡುತ್ತಾರೆ ಎಂದು ಹೇಳುತ್ತೇನೆ. ಅದಕ್ಕಿಂತ ಹೆಚ್ಚಿಗೆ ಹೇಳಬೇಕಾದ ಅಗತ್ಯ ಎನೂ ಇಲ್ಲ.

ಪೋಲೀಸ್ ಅಡ್‌ಮಿನಿಸ್ಟ್ರೇಷನ್ ಬಗ್ಗೆ ಕ್ರಿಟಿಸಿಜಂ ಬಂದದ್ದು ನೋಡಿದ್ದರಲ್ಲಿ ಈ ಸಾರಿ ಪೋಲೀಸ್ ಆಡಳಿತದ ಬಗ್ಗೆ ಕ್ರಿಟಿಸಿಜಂ ಇಲ್ಲವೇ ಇಲ್ಲ ಎಂದು ಹೇಳಬಹುದು.

ಶ್ರೀ ಹೆಚ್. ಡಿ. ದೇವೇಗೌಡ.—ಫೋರಂ ಡಿಪಾರ್ಟ್‌ಮೆಂಟ್ ಡಿಮ್ಯಾಂಡ್ ಬಂದಾಗ ಟೀಕೆ ಮಾಡುತ್ತೇವೆ.

ಶ್ರೀ ಡಿ. ದೇವರಾಜ್ ಅರಸ್.—ಇನ್ನು ವಿದ್ಯಾಭ್ಯಾಸದ ಬಗ್ಗೆ ಕೆಲವು ವಿಷಯಗಳನ್ನು ಹೇಳಿದ್ದಾರೆ. ಮೊದಲನೆಯದಾಗಿ ಹೊಸ ಯೂನಿವರ್ಸಿಟಿ ಮಾಡಬೇಕೆಂಬ ವಿಚಾರದ ಬಗ್ಗೆ ಕೆಲವರು ಹೇಳಿದ್ದಾರೆ. ಹೊಸ ಯೂನಿವರ್ಸಿಟಿ ಯಾಕೆ ಮಾಡಬೇಕು, ಅದಕ್ಕೆ ಹೆಚ್ಚಿನ ಹಣ ಖರ್ಚು ಮಾಡುವುದರ ಬಗ್ಗೆ ಕೆಲವರು ಬೇಕು ಎಂದು ಮತ್ತೆ ಕೆಲವರು ಬೇಡ ಎಂದು ಇರಬಹುದು. ಸರಕಾರ ಇದರ ಬಗ್ಗೆ ತೀರ್ಮಾನ ತೆಗೆದುಕೊಂಡಿಲ್ಲ. ಯೂನಿವರ್ಸಿಟಿ ಪ್ರಾರಂಭ ಮಾಡಬೇಕಾದರೆ ಹೆಚ್ಚಿಗೆ ಹಣ ಖರ್ಚಾಗುತ್ತದೆ ಎನ್ನುವುದು ಸರಕಾರದ ಅಂದಾಜಿನಲ್ಲಿ ಗೊತ್ತಿದೆ. ಕ್ಯಾಪಿಟರ್

ಎಕ್ಸ್‌ಪೆಂಡಿಚರ್ 7–8 ಕೋಟಿ ರೂಪಾಯಿಗಳು ಬೇಕಾಗಬಹುದು. ಇದರ ಜೊತೆಗೆ ರೆಕರಿಂಗ್ ಎಕ್ಸ್‌ಪೆಂಡಿಚರ್ ಒಂದು ಕೋಟಿ ರೂಪಾಯಿಬೇಕು. ಈ ಸಂದರ್ಭದಲ್ಲಿ ರೆಕರಿಂಗ್ ಎಕ್ಸ್‌ಪೆಂಡಿಚರ್ ಆಗಲಿ, ಅಥವಾ ಕ್ಯಾಪಿಟಲ್ ಎಕ್ಸ್‌ಪೆಂಡಿಚರ್ ಆಗಲಿ ಅದನ್ನು ಹೊರುವುದಕ್ಕೆ ಸರಕಾರ ತಯಾರು ಇಲ್ಲ ಎನ್ನುವುದನ್ನು ತಾವು ಕೂಡ ಒಪ್ಪುತ್ತೀರಿ ಎಂದು ನನ್ನ ಭಾವನೆ.

ಶ್ರೀ ಹೆಚ್. ಡಿ. ದೇವೇಗೌಡ.—ಮೆಡಿಕಲ್ ಯೂನಿವರ್ಸಿಟಿ ಮತ್ತು ಅಗ್ರಿಕಲ್‌ಚರಲ್ ಸ್ಟೇಟಸ್ ಯೂನಿವರ್ಸಿಟಿ ಎರಡನ್ನೂ ಒಪ್ಪಿಕೊಂಡಿದ್ದೀರಾ ?

ಶ್ರೀ ಡಿ. ದೇವರಾಜ್ ಅರಸ್.—ಮೆಡಿಕಲ್ ಯೂನಿವರ್ಸಿಟಿ ನಮ್ಮ ಆಲೋಚನೆಯಲ್ಲಿ ಇದೆ. ಅದಕ್ಕೆ ಕೋಟಗಟ್ಟಲೆ ರೂಪಾಯಿ ಬೇಕಿಲ್ಲ, ಹಾಗಿದ್ದರೆ ಅದರ ತಂಟೆಗೆ ಹೋಗುತ್ತಿರಲಿಲ್ಲ. 8–10 ಲಕ್ಷ ರೂಪಾಯಿ ಬೇಕು ಎಂದು ಅಂದಾಜು ಮಾಡಿದ್ದಾರೆ. ಅಗ್ರಿಕಲ್‌ಚರಲ್ ಯೂನಿವರ್ಸಿಟಿ ಮಾಡಲು ಕೇಂದ್ರ ಸರಕಾರದವರು ಸಹಾಯ ಮಾಡಿ ದುಡ್ಡು ಕೊಟ್ಟರೆ ನಾವು ನಡೆಸಬಹುದು. ಅವರೇನೂ ಸಹಾಯ ಮಾಡದೇ ಇದ್ದರೆ ನಾವು ಅಷ್ಟು ದುಡ್ಡು ಖರ್ಚು ಮಾಡಲು ಸಾಧ್ಯವಿಲ್ಲ. ಅವರು ಸಹಾಯ ಕೊಟ್ಟರೆ ನಾವೇಕೆ ಬೇಡ ಎಂದು ಹೇಳಬೇಕು. ಅವರು ಸಹಾಯ ಕೊಡಲಿ ಬಿಡಿ. ಅದನ್ನೇಕೆ ನಾವು ಬೇಡ ಎಂದು ಹೇಳಬೇಕು ?

ಶ್ರೀ ಕೋಣಂದೂರು ಲಿಂಗಪ್ಪ.—ನಮ್ಮ ರಾಜ್ಯದಲ್ಲಿ ಒಂದು ಪೋಸ್ಟ್ ಗ್ರಾಜುಯೇಟರುಗಳ ಟ್ರೇನಿಂಗ್ ಸೆಂಟರನ್ನು ತೆರೆಯುಲು ಏಕೆ ಯತ್ನ ಮಾಡಬಾರದು ?

ಶ್ರೀ ಡಿ. ದೇವರಾಜ್ ಅರಸ್.—ಇನ್ನು ವಿದ್ಯಾಭ್ಯಾಸದಲ್ಲಿ 1972 ರಲ್ಲಿ ನಮ್ಮ ಪ್ರಯತ್ನಗಳು ಏನಿವೆ ಎನ್ನುವುದನ್ನು ಇಲ್ಲಿ ಹೇಳಬೇಕಾಗಿದೆ. ನುಮಾರು 282 ಜೂನಿಯರು ಕಾಲೇಜುಗಳು ಇಲ್ಲಿ ಆರಂಭವಾಗುವುದರಲ್ಲಿವೆ ಮತ್ತು ಇದಕ್ಕಾಗಿ ಒಂದು ವರ್ಷಕ್ಕೆ ನುಮಾರು ಎರಡೂವರೆ ಕೋಟಿ ರೂಪಾಯಿಗಳ ಖರ್ಚು ಬರುತ್ತದೆ.

ಶ್ರೀ ಸಿ. ಎಂ. ಆರ್ಮುಗಂ.—ಇವಕ್ಕೆ ಬಿಲ್ಡಿಂಗುಗಳೇ ಇಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಇದರಲ್ಲಿ ಕಟ್ಟಡಗಳ ವಿಚಾರ ಇರಲಿ, ಅದು ಬೇರೆ ವಿಷಯ, I am just telling the Hon'ble House that this year on this one item the increase of expenditure is to the tune of Rs. 2½ Crores. Please understand that point. ನಾವೇನು ಮಾಡುತ್ತೇವೆ ಅದಕ್ಕೆ ನರಿಯಾಗಿ ಅನುಕೂಲಗಳನ್ನು ಕಲ್ಪಿಸಿಕೊಡಬೇಕು. ಅದರಂತೆ ಇದುವರೆಗೆ ಮಾಡಿಕೊಂಡು ಬರುತ್ತಿದ್ದೇವೆ. ಇನ್ನು ಮುಂದೆ ಕೂಡ ಇದನ್ನು ಹೇಗೆ ಮುಂದುವರಿಯಲು ಬಿಡಬೇಕೇ ಬೇಡವೇ ಎನ್ನುವುದರ ಬಗ್ಗೆ ವಿಚಾರ ಮಾಡಲು ಇದನ್ನು ತಮ್ಮ ಅವಗಾಹನೆಗಾಗಿ ಬಿಡುತ್ತೇನೆ. Just now Mr. Armugum was saying there are no buildings. Supposing I want to build a building, all this money will not be sufficient. Not only Rs. 65 crores of the Education budget, but also even if you take money from the ther heads and close the other Departments, even then, it may not be possible. That is the magnitude of the problem. ಆದುದರಿಂದ ನಾನು ಹೇಳುವುದು ಎಜುಕೇಷನ್ ಎನ್ನುವುದು ಯಾವ ಮಟ್ಟದಲ್ಲಿರಬೇಕು ? ಎಲ್ಲರೂ ಕಾಲೇಜಿಗೆ ಹೋಗಿ ಗ್ರಾಜ್ಯುಯೇಟುಗಳೇ ಆಗಬೇಕೇ ಅಥವಾ ಯಾವುದಾದರೂ ಒಂದು ವಿದ್ಯಾಭ್ಯಾಸದ ಮಟ್ಟದಲ್ಲಿ ಎಂದರೆ ಡೈವರ್ಸಿಫಿಕೇಷನ್ ಇನ್ ಎಜ್ಯುಕೇಷನ್ ಇರಬೇಕೇ, ಇಲ್ಲವೇ ಎನ್ನುವುದರ ಬಗ್ಗೆ ವಿಚಾರ ಮಾಡಬೇಕಾಗಿದೆ.

Sri C.M. ARUMUGHAM.—We would like to hear a policy statement of the Government regarding education.

Sri D. DEVARAJ URS.—This thinking is not only on the part of ourselves but of the centre also. In the coming yaar in the Five year plan, we have to think seriously to change this pattern, and How ?

ನನ್ನ ದೃಷ್ಟಿಯಲ್ಲಿ ಈಗಿರುವಂತೆ ಎಸ್. ಎಸ್. ಎಲ್. ಸಿ. ಯವರೆಗೆ ಮಕ್ಕಳು ವಿದ್ಯಾಭ್ಯಾಸ ಮುಗಿಸಿ ಬಂದ ಮೇಲೆ ಇದರಲ್ಲಿ ಪಾಸಾದವರು ಪಿ. ಯು. ಸಿ. ಓದಲು ಹೋಗಬೇಕು. ಅನಂತರ ಕಾಲೇಜುಗಳಲ್ಲಿ ಗ್ರಾಜ್ಯುಯೇಟರಾಗಲು ಓದಬೇಕು. ಇದರಲ್ಲಿ ಎಲ್ಲರೂ ಓದಲು ಸಾಧ್ಯವೇ ?

(SRI D. DEVARAJ URS)

ಪ್ರೈಮರಿ, ನರ್ಸರಿ ಹಾಗೂ ಎಲ್ಲ ವರ್ಗಗಳಿಂದ ನುವಾರು 50 ಸಾವಿರ ಇಲ್ಲವೇ 70 ಸಾವಿರ ಹುಡುಗರು ಓದು ಮುಗಿಸಿ ಬಂದರೆ ಅವರೆಲ್ಲರಿಗೂ ಕೆಲಸಗಳನ್ನು ನಾವು ಒದಗಿಸಲು ಸಾಧ್ಯವೇ ? ಇದನ್ನು ವಿಚಾರ ಮಾಡಬೇಕು. ಇಂತಹ ಒಂದು ಭೀತಿ ನಮಗೆ ಬರುತ್ತಿದೆ. ಕೆಲವರು ಹೇಳಬಹುದು ನಿಮ್ಮ ಮಕ್ಕಳು ಒನ್ಲರೇ ಮುಂದೆ ಓದಬೇಕು, ಬಡವರ ಹಾಗೂ ಹಳ್ಳಿಗಾಡಿನ ಮಕ್ಕಳು ಓದಬೇಡವೇ ಎಂದು. ಎಲ್ಲರೂ ಓದಿ ಗ್ರಾಜ್ಯುಯೇಟರುಗಳಾದ ಮೇಲೆ ಇವರೆಲ್ಲರೂ ಸರಕಾರದಲ್ಲಿ ಗುಮಾಸ್ತರ ಕೆಲಸ ಮಾಡಲು ತಾನೇ ಬರಬೇಕು ? ಇಲ್ಲಿಯವರೆಗೂ ಇಂತಹ ಒಂದು ದೊಡ್ಡ ತಪ್ಪನ್ನು ಮಾಡುತ್ತಿದ್ದೇವೆ. ಮುಂದೆ ಕೂಡ ಇದನ್ನು ಮುಂದುವರಿಸಿಕೊಂಡು ಹೋದರೆ ಸರಿಯಾಗುತ್ತದೆಯೇ ಎನ್ನುವುದು ಇಲ್ಲಿರುವ ಪ್ರಶ್ನೆ. ಇದನ್ನು ಕೆಲವರು ವಿತಂಡ ವಾದ ಎಂದು ಹೇಳಬಹುದು. ಮಕ್ಕಳು ವಿದ್ಯಾಭ್ಯಾಸ ಮಾಡಲು ಅನಾವಶ್ಯಕವಾಗಿ ಏಕೆ ತೊಂದರೆಗಳನ್ನು ತರುತ್ತೀರಿ ಎಂದು. ಇದರಲ್ಲ ನಾನು ಬಡವರಾಗಲೀ ಇಲ್ಲವೇ ಶ್ರೀಮಂತರಾಗಲೀ ಅವರ ಬಗ್ಗೆ ಹೇಳುತ್ತಿಲ್ಲ. ಎಲ್ಲರೂ ಕಾಲೇಜುಗಳಲ್ಲಿ ಓದಿ ಗ್ರಾಜ್ಯುಯೇಟುಗಳೇ ಆಗಬೇಕೆಂದು ಓದಿದರೆ ಮುಂದೆ ಇಂತಹವರಿಗೆಲ್ಲಾ ಸರಕಾರ ಕೆಲಸಗಳನ್ನು ಕೊಡುವುದಾದರೂ ಹೇಗೆ ? ಇದು ಹೇಗಿದೆ ಎಂದರೆ ಲಾಟರಿಯಂತಾಗುತ್ತದೆ. ಲಾಟರಿಯಲ್ಲಿ ಬೇಕಾದಷ್ಟು ಬಹುಮಾನಗಳಿರುತ್ತವೆ. ಆದರೆ ಯಾರೋ ಕೆಲವರಿಗೆ ಮಾತ್ರ ಅದರ ಲಾಭ ಸಿಗುತ್ತದೆ.

Speaker's observation *re* : Supplyihg water inside the House

ಅಧ್ಯಕ್ಷರು.—ಮಾನ್ಯ ಸದಸ್ಯರು ಈ ಸಭೆಯಲ್ಲಿ ನೀರು ತರಿಸುವುದನ್ನು ಇಂದು ನೋಡುತ್ತಿದ್ದೇನೆ. ಸಭಾನಿಯಮಾವಳಿಗಳ ಪ್ರಕಾರ ಸಭೆಯೊಳಕ್ಕೆ ನೀರನ್ನು ತರುವಾರದು. ಬೇಕಾದವರು ಹೊರಗೆ ಹೋಗಿ ನೀರನ್ನು ಕುಡಿದು ಬರಬಹುದು. ಇಂದು ನೀರನ್ನು ತರಿಸಬಹುದು ನಾಳೆ ದಿನ ಕಾಫೀ ಬೇಕು ಎಂದು ಸದಸ್ಯರು ಕಾಫಿಯನ್ನು ಇಲ್ಲಿಗೆ ತರಿಸಬಹುದು. ಇನ್ನು ಮುಂದೆ ಯಾರೂ ಹೌಸ್ ನೊಳಕ್ಕೆ ನೀರನ್ನು ತರಿಸುವಾರದು. ಆದರೆ ಯಾರು ಇಲ್ಲಿ ಭಾಷಣವನ್ನು ಮಾಡುತ್ತಿರುತ್ತಾರೋ ಅಂತಹವರು ಅಧ್ಯಕ್ಷರ ಅಪ್ಪಣೆ ಪಡೆದು ಬೇಕಾದರೆ ನೀರನ್ನು ತರಿಸಿಕೊಳ್ಳಬಹುದು. ಇದು ಎಲ್ಲ ಕಡೆಯಲ್ಲೂ ಇರುವ ಸಂಪ್ರದಾಯಗಳು. ಇವನ್ನು ನರ್ವರೂ ಪಾಲಿಸಬೇಕು ಎಂದು ನಾನು ಇಲ್ಲಿ ಕೇಳಿಕೊಳ್ಳುತ್ತೇನೆ.

SRI D. DEVARAJ URS.—I am glad the Speaker has brought it to the notice of the House.

ಇಂದು ಇಂತಹ ವಿದ್ಯಾಭ್ಯಾಸದ ಬಗ್ಗೆ ಇಲ್ಲಿ ನಾವು ಕೂಲಂಕಷವಾಗಿ ವಿಚಾರ ಮಾಡಬೇಕು. ಎಸ್. ಎಸ್. ಎಲ್. ಸಿ. ಆದ ಮೇಲೆ ಮುಂದೆ ಓದುವವರಿಗೆ ಅನುಕೂಲವಾಗುವಂತೆ ಪೋಕೆಷನಲ್ ವಿದ್ಯಾಭ್ಯಾಸ ಪದ್ಧತಿಯನ್ನು ಹೆಚ್ಚು ಹೆಚ್ಚಾಗಿ ತರಬೇಕು. ಇದು ಸರಕಾರದ ನೀತಿಯಾಗಿದೆ ಮತ್ತು ನನ್ನ ಸ್ಪಷ್ಟ ಅಭಿಪ್ರಾಯವೂ ಕೂಡ ಇದೇ. ಪ್ರೈಮರಿ ವಿದ್ಯಾಭ್ಯಾಸದಿಂದ ಹಿಡಿದು ...

ಶ್ರೀ ಕಾಗೋಡು ತಿಮ್ಮಪ್ಪ.—ಕಡ್ಡಾಯ ಶಿಕ್ಷಣದ ಬಗ್ಗೆ ಏನೂ ಹೇಳಲಿಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಕಡ್ಡಾಯ ಶಿಕ್ಷಣದ ಬಗ್ಗೆ ಏನು ಮಾಡಬೇಕೋ ಅವನ್ನು ಈಗಾಗಲೇ ಮಾಡುತ್ತಿದ್ದಾರೆ. ಇನ್ನೇನಾದರೂ ಸುಧಾರಣೆ ಮಾಡಬೇಕಾದರೆ ಮುಂದೆ ಇಲ್ಲಿ ವಿಚಾರ ಮಾಡೋಣ. ಇದರಲ್ಲಿ ಕೇಂದ್ರ ಸರಕಾರದಲ್ಲಾಗಲೀ ನಮ್ಮ ಸರಕಾರದಲ್ಲಾಗಲೀ ಯಾವ ಭಿನ್ನಾಭಿಪ್ರಾಯಗಳೂ ಇಲ್ಲ.

ಶ್ರೀ ಹೆಚ್. ಎಸ್. ಸಿದ್ದಪ್ಪ.—ಯೂನಿವರ್ಸಿಟಿಯನ್ನು ಕೊಟ್ಟರೆ ಬೇಡ ಎಂದೇಕೆ ಸರಕಾರ ಹೇಳಬೇಕು ?

ಶ್ರೀ ಡಿ. ದೇವರಾಜ್ ಅರಸ್.—ನಮಗೆ ಈಗಾಗಲೇ ಯೂನಿವರ್ಸಿಟಿಗಳಿವೆ ಮತ್ತು ಇನ್ನೂ 8 - 10 ಕಡೆಗಳಲ್ಲಿ ಮಾಡಲು ಸಾಧ್ಯವೂ ಇದೆ. ಆದರೆ ತಾವು ಹೇಳುವಂತೆ ಕಿಲ್ಲೆಗೊಂದು ಯೂನಿವರ್ಸಿಟಿಯನ್ನು ತೆಗೆಯಲು ಸಾಧ್ಯವೇ ? ಇದನ್ನು ವಿಚಾರ ಮಾಡಿ. ಇಂತಹ ಒಂದು ಬದಲಾವಣೆ ಮಾಡಬೇಕಾದ ಅಗತ್ಯವೂ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ವಿದ್ಯಾಭ್ಯಾಸದಲ್ಲಿ ಕೆಳಮಟ್ಟದಲ್ಲಿ ವ್ಯಾಪಾರವಾಗುತ್ತಿರುವುದು ತಮಗೆ ಗೊತ್ತಿದೆಯೇ ? ಇದರ ಬಗ್ಗೆ ತಮ್ಮ ಧೋರಣೆ ಏನು ?

ಶ್ರೀ ಡಿ. ದೇವರಾಜ್ ಅರಸ್.—ದೇಶದಲ್ಲಿ ವಿದ್ಯಾಭ್ಯಾಸವನ್ನೆಲ್ಲಾ ನ್ಯಾಷನಲೈಸ್ ಮಾಡಬೇಕೆಂದು ಹೇಳಿದರೆ ಅದನ್ನು ಮಾಡಲಾಗುತ್ತಿದೆಯೇ ? ಪ್ರೈವೇಟ್ ಶಾಲೆಗಳಿಂದ ಹಿಡಿದು ಎಲ್ಲ ಶಾಲೆಗಳನ್ನೂ ಸರಕಾರವೇ ನೇರವಾಗಿ ವಹಿಸಿಕೊಂಡು ನ್ಯಾಷನಲೈಸ್ ಮಾಡಲು ಸಾಧ್ಯವೇ ? ಇದು ಆಗುವುದಿಲ್ಲ.

It is neither feasible nor practicable, nor Constitutionally perhaps it may not be possible. Minority rights are there. ಇದರಲ್ಲಿ ಮೈನಾರಿಟಿ ರೈಟ್ಸ್‌ಗಳು ಬರುತ್ತವೆ. ವಿದ್ಯಾಭ್ಯಾಸಕ್ಕಾಗಿ ಜನ ಬಂದು ಶಾಲೆ ತೆರೆಯುತ್ತೇವೆಂದು ಕೇಳಿದರೆ ಕೊಡುವುದಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಇವೊತ್ತು ಇರುವುದನ್ನು ಉಳಿಸಿಕೊಳ್ಳಲು ಆಗುತ್ತಿಲ್ಲ, ಹೀಗಿರುವಾಗ ಬರುವ ವರ್ಷದಿಂದ ಎಲ್ಲ ಮಕ್ಕಳಿಗೂ ವಿದ್ಯಾಭ್ಯಾಸದ ಸೌಕರ್ಯವನ್ನು ಸರಕಾರವೇ ಒದಗಿಸುತ್ತದೆ ಎಂದು ಹೇಳಿದರೆ ಅದು ಸಾಧ್ಯವಲ್ಲದ ಮಾತು. It is easy to say to nationalise everything. ಎಲ್ಲ ಕಡೆಯಲ್ಲೂ ನ್ಯಾಷನಲೈಸ್ ಮಾಡಿ ಎಂದು ಹೇಳುವುದು ಸುಲಭ, ಇದನ್ನು ಕಾರ್ಯಗತ ಮಾಡುವುದು ಸಾಧ್ಯವಿಲ್ಲ ಮತ್ತು ಇದು ಮಾಡುವುದು ಸೂಕ್ತವೂ ಅಲ್ಲ. If we are in a totalitarian structure, then it is possible.

4-00 P.M.

Sri M. S. KRISHNAN.—What is totalitarianism ? What is democracy ? The Chief Minister's understanding that what exists in a socialistic saciety is totalitarian is itself basically wrong.

Sri D. DEVARAJ URS.—Then, let it be the highest from of democracy of Russia. ಅದರ ಪ್ರಕಾರ ಆಸ್ತಿಯನ್ನು ಹೊಂದಿರಬಾರದು.

Sri S. M. KRISHNAN.—Not of Russian ; what I mean is socialistic democracy. ತಾವು ವಾದ ವಿವಾದಕ್ಕೆ ಎಡೆ ಕೊಡುತ್ತಿದ್ದೀರಿ ?

ಶ್ರೀ ಡಿ. ದೇವರಾಜ ಅರಸ್.—ಅಷ್ಟಾದರೂ ಒಪ್ಪುತ್ತೀರಾ ! ಯಾವ ಒಂದು ಸಮಾಜದಲ್ಲಿ ಇಡೀ ವಿದ್ಯಾಭ್ಯಾಸವನ್ನು ಸರ್ಕಾರವೇ ನಡೆಸಬೇಕೆಂದು ಹೇಳುತ್ತೀರೋ ಆ ಒಂದು ಸಮಾಜದಲ್ಲಿ ವ್ಯಕ್ತಿಶಃ ಆತನಿಗೆ ಆಸ್ತಿ ಇರಬಾರದು. ಈಗ ತಾವು ಸಂಬಂಧವಿಲ್ಲದಿರುವುದನ್ನು ಹೇಳುತ್ತಿದ್ದೀರಿ.

Sri M. S. KRISHNAN.—Nobody should use is property for making money or for gain or explotation. ಮನೆ ಮತ್ತು ಹೊಲ ಮತಿಗೊಳಪಟ್ಟು ಇಟ್ಟುಕೊಳ್ಳುವುದಕ್ಕೆ ಅಲ್ಲಿಯೂ ಅವಕಾಶವಿದೆ.

ಶ್ರೀ ಡಿ. ದೇವರಾಜ ಅರಸ್.—50 ಎಕರೆವರೆಗೆ ಇಟ್ಟುಕೊಳ್ಳುವುದಕ್ಕೆ ಅವಕಾಶವಿರುವುದಿಲ್ಲ. 10 ಸೆಂಟ್ಸ್ ಇಟ್ಟುಕೊಳ್ಳಬಹುದು. ಕಚೇನ್ ಗಾರ್ಡನ್‌ಗೆ ಜಮೀನು ಇಟ್ಟುಕೊಳ್ಳಬಹುದು. ನಾಲ್ಕು ಕೋಳಿ, ನಾಲ್ಕು ಕುರಿ ಸಾಕಲು ಜಮೀನು ಇಟ್ಟುಕೊಳ್ಳಬಹುದಷ್ಟೆ. I am not trying to decry this or that. I am trying to tall this House that unless this is there it cannot be implemented. ರಾಷ್ಟ್ರೀಕರಣ ಮಾಡಿ ಎಂದರೆ ಯಾವ ರೀತಿ ಮಾಡಲು ಸಾಧ್ಯವಾಗುತ್ತದೆ ! ನಮ್ಮ ದೇಶದಲ್ಲಿ ಲಂಗ್ವಿಸ್ಟಿಕ್ ಮೈನಾರಿಟೀಸ್ ಇದ್ದಾರೆ ; ರಿಲಿಜಿಯಸ್ ಮೈನಾರಿಟಿ ಇದ್ದಾರೆ ಅಂತಹವರು ಶಾಲೆಗಳನ್ನು ಪ್ರಾರಂಭ ಮಾಡುತ್ತೇವೆಂದರೆ ನಾವು ಅದಕ್ಕೆ ಅಡ್ಡಿ ಮಾಡುವುದಕ್ಕಾಗುವುದಿಲ್ಲ. ಮತ್ತು ಏಕಾ ಏಕಿ ಎಲ್ಲ ಶಾಲೆಗಳನ್ನು ಒಂದೇ ಸಲ ರಾಷ್ಟ್ರೀಕರಣ ಮಾಡುವುದಕ್ಕಾಗುವುದಿಲ್ಲ ಬೇಕಾದರೆ ಯಾವ ಖಾನಗೀ ಶಾಲೆಗಳು ಕಾನೂನಿಗೆ ವಿರುದ್ಧವಾಗಿ ನಡೆಯುತ್ತಿವೆಯೋ, ಲೆಕ್ಕ ಪತ್ರಗಳಲ್ಲಿ ಮೋಸ ಮಾಡುತ್ತಿವೆಯೋ ಅಂತಹವಕ್ಕೆ ಕಾನೂನಿನಲ್ಲಿ ನಮಗೆ ಅವಕಾಶವಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಹೆಂತ ಹೆಂತವಾಗಿಯಾದರೂ ತೆಗೆದುಕೊಳ್ಳುವುದಕ್ಕೆ ಯೋಚನೆ ಮಾಡಬಹುದು. ನರ್ಸರಿ, ಪ್ರೈವೇಟ್, ಸೆಕೆಂಡರಿ, ಈ ರೀತಿಯಾಗಿ ತೆಗೆದುಕೊಳ್ಳಬಹುದು.

ಶ್ರೀ ಡಿ. ದೇವರಾಜ ಅರಸ್.—ಯಾವ ಖಾಸಗೀ ಶಾಲೆಗಳು ರೆಕ್ಯಪತ್ರಗಳನ್ನು ಅನಪೂರ್ಣಕವಾಗಿ ಇಟ್ಟಿವೆ ಎಂದು ಕಂಡುಬರುತ್ತದೋ ಅಂತಹ ಶಾಲೆಗಳನ್ನು ಸರ್ಕಾರದವರು ತೆಗೆದುಕೊಳ್ಳುವುದಕ್ಕೆ ಅಭ್ಯಂತರವಿಲ್ಲ.

Sri C.M. ARUMUGHAM.—Government have appointed an one man Commission to go into the affairs of private colleges, of high schools and of primary schools. May I know when will that report be ready and when will it be placed before the House? The hon. Chief Minister is giving reply to the debate on the Governor's address. I request him to make a policy statement in respect of all the departments and not about the detailed working thereof.

Sri D. DEVARAJ URS.—We do not want to expand education; instead we want to concentrate on the quality of the education. We want to proceed qualitatively and not quantitatively and we also want to diversify vocational education at the P.U.C. and S.S.L.C. levels. Is this not a policy decision?

ಶ್ರೀ ಕಾಗೋಡು ತಿಮ್ಮಪ್ಪ.—ರಾಜ್ಯಪಾಲರ ಭಾಷಣದಲ್ಲಿ 6 ರಿಂದ 11 ವರ್ಷದವರೆಗಿನ ವಯೋವರ್ಗದ ಮಕ್ಕಳಿಗೆ ಕಡ್ಡಾಯ ಪ್ರಾಥಮಿಕ ಶಿಕ್ಷಣ ಕೊಡುವ ವಿಷಯ ಇದೆ. ಈ ಕಾರಣದಿಂದ ನಾವು ಪ್ರಾಥಮಿಕ ಶಿಕ್ಷಣವನ್ನಾದರೂ ಪೂರ್ಣವನ್ನಾಗಿ ಸರ್ಕಾರದವರು ವಹಿಸಿಕೊಳ್ಳುತ್ತಾರೆಂದು ಕೇಳಿದ್ದೇವೆ. ಇದರ ಬಗ್ಗೆ ಸರ್ಕಾರದ ನಿಲುವಾದರೂ ಏನು?

Sri D. DEVARAJ URS.—Primary education is the responsibility of the Government; we are shouldering that responsibility. We are proceeding with it. May be, we have not achieved hundered per cent success but we have achieved nearly nintey per cent success. We have to cover only 10 per cent.

ಶ್ರೀ ಎಂ. ಎಸ್. ಕೃಷ್ಣನ್.—ಈಗ ಖಾಸಗೀಯವರು ನರ್ಸರಿ ಮತ್ತು ಪ್ರೈಮರಿ ಶಾಲೆಗಳನ್ನು ನಡೆಸುತ್ತಿದ್ದಾರೆ. ಅವುಗಳನ್ನಾದರೂ ಸರ್ಕಾರದವರು ಹಂತಹಂತವಾಗಿ ತೆಗೆದುಕೊಳ್ಳಬಹುದೆಂದು ನಾವು ಹೇಳುತ್ತಿರುವುದು;

Sri D. DEVARAJ URS.—It is a very voluminous work because there are thousands and thousands of institutions. We will try to expedite. ಈ ಶಾಲೆಗಳ ಬಗ್ಗೆ ಟೀಕೆಗಳು ಇರುವುದರಿಂದ ಅದನ್ನು ತನಿಖೆ ಮಾಡಲು ಆಯೋಗ ನೇಮಕ ಮಾಡಲಾಗಿದೆ. ವರದಿ ಇನ್ನೂ ಬಂದಿಲ್ಲ.

Sri S. M. KRISHNAN.—By the time the report comes, the teachers will be in their houses. ಆ ವರದಿಯನ್ನಾದರೂ ಜಾಗ್ರತೆ ಪಡೆದುಕೊಂಡು ಅದರ ಆಧಾರದ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

Sri D. DEVARAJ URS.—If one man is not capable of it, can we appoint two now? As soon as the report comes, we will take action on certain recommendations that the One-man Commission is likely to make. ಕೆಲವು ಪ್ರೈಮರಿ ಶಾಲೆಗಳನ್ನು ಸರ್ಕಾರ ತೆಗೆದುಕೊಳ್ಳುವುದರಲ್ಲಿ ನನ್ನ ಅಭ್ಯಂತರವಿಲ್ಲ. ಆದರೆ ಏಕಾ ಏಕಿ ರಾಷ್ಟ್ರೀಕರಣ ಮಾಡುವುದಕ್ಕಾಗುವುದಿಲ್ಲ. ಯಾವ ಶಾಲೆಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲವೋ ಅಂತಹ ಶಾಲೆಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯ. ನೂರಕ್ಕೆ ನೂರ ರಷ್ಟು ಶಾಲೆಗಳನ್ನು ನಾವು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಕಾರಣ ಕಾನ್ಸ್‌ಟಿಟ್ಯೂಷನ್ ಗ್ಯಾರಂಟಿ ಇರುವುದರಿಂದ ಮತ್ತು ನಮಗೆ ಹಣದ ತೊಂದರೆ ಇರುವುದರಿಂದ ಸಾಧ್ಯವಾಗುತ್ತಿಲ್ಲ. ಒಟ್ಟಿನಲ್ಲಿ ನಾವು ಈಗ ಪ್ರಾಥಮಿಕ ಶಿಕ್ಷಣವನ್ನು ಮಕ್ಕಳಿಗೆ ಕೊಡುವುದರಲ್ಲಿ 90 ಪರ್ಸೆಂಟ್‌ವರೆಗೆ ಮುಟ್ಟಿದ್ದೇವೆ. ಮುಂದಿನ 5 ವರ್ಷಗಳಲ್ಲಿ ನೂರಕ್ಕೆ ನೂರರಷ್ಟು ಮಕ್ಕಳಿಗೆ ಪ್ರಾಥಮಿಕ ವಿದ್ಯಾಭ್ಯಾಸಕೊಡಲು ಮತ್ತು ಆ ಒಂದು ಗುರಿಯನ್ನು ಮುಟ್ಟಲು ಸಾಧ್ಯವಾಗುತ್ತದೆ.

ಶ್ರೀ ಕಾಡುಗೋಡು ತಿಮ್ಮಪ್ಪ.—ಹಿಂದಿನ ವರ್ಷದ ಪದ್ಧತಿಯನ್ನೇ ಮುಂದಿನ ವರ್ಷವೂ ಮುಂದುವರೆಸುವ ಬದಲು ಒಂದು ಭಾಗವನ್ನಾದರೂ ಸರ್ಕಾರದವರು ತೆಗೆದುಕೊಂಡರೆ ಆ ಒಂದು ದಿಶೆಯಲ್ಲಿ ಕೆಲಸ ಪ್ರಾರಂಭ ಮಾಡಿದಂತೆ ಆಗುತ್ತದೆ ?

Sri D. DEVARAJ URS.—If I take over 100 schools, will the system change ? ಆಯೋಗದ ವರದಿ ಬಂದು, ಇರುವ ವಿಷಯ ಏನು ಎಂದು ತಿಳಿದುಕೊಳ್ಳುವುದಕ್ಕೆ ನಮಗೆ ಅವಕಾಶ ಕೊಡಿ.

ಶ್ರೀ ಕಾಗೋಡು ತಿಮ್ಮಪ್ಪ.—ಆ ವರದಿ ಬರುವುದಕ್ಕೂ ಖಾಸಗಿ ಪ್ರೈಮರಿ ಶಾಲೆಗಳನ್ನು ಸರ್ಕಾರದವರು ವಹಿಸಿಕೊಳ್ಳುವುದಕ್ಕೂ ಏನು ಸಂಬಂಧವಿದೆ ? ಹಂತಹಂತವಾಗಿ ವಹಿಸಿಕೊಳ್ಳುವುದಕ್ಕೆ ಪ್ರಾರಂಭ ಮಾಡಬಹುದು.

Sri D. DEVARAJ URS.—That is why I said, let the report come and then I will take steps.

Sri KAGODU THIMMAPPA.—Let there be a beginning.

Sri D. DEVARAJ URS.—What is it that we are doing ? Out of Rs. 65 crores, have you any idea how much is being spent for primary education ? Rs. 25 crores is being spent only on primary education What more we propose to spend will become known in the budget.

ಶ್ರೀ ಕಾಗೋಡು ತಿಮ್ಮಪ್ಪ.—ಪ್ರೈಮರಿ ವಿದ್ಯಾಭ್ಯಾಸವನ್ನಾದರೂ ಪೂರ್ತಿಯಾಗಿ ಸರ್ಕಾರದವರು ವಹಿಸಿಕೊಂಡು ನಡೆಸಲಿ.

ಶ್ರೀ ಡಿ. ದೇವರಾಜ ಅರಸ್ —ಈಗ ನಡೆಸುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಖಾಸಗೀಯವರು ಸಹ ನಡೆಸುತ್ತಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಈ ಸಾರಿ ಮೇಜರ್ ಪ್ರಾಜೆಕ್ಟ್‌ಗಳಿಗೆ ಯಾವರೀತಿ ಹಣವನ್ನು ಖರ್ಚು ಮಾಡುತ್ತೇವೆ ಮತ್ತು ಏನು ಖರ್ಚು ಮಾಡಿದ್ದೇವೆ ಎಂಬುದನ್ನು ರಾಜ್ಯಪಾಲರ ಭಾಷಣದಲ್ಲಿ ಸೇರಿಸಿಲ್ಲ ಎನ್ನುವ ಒಂದು ಟೀಕೆ ಬಂದಿದೆ. ಇದುವರೆಗೆ ಮೇಜರ್ ಪ್ರಾಜೆಕ್ಟ್‌ಗಳಿಗೆ ಖರ್ಚು ಮಾಬರತಕ್ಕದ್ದು ಏನು, ನಾವು ಈಗ ಖರ್ಚು ಮಾಡಬೇಕು ಎಂದು ಹೊರಟಿರತಕ್ಕದ್ದು ಏನು ಎಂಬುದನ್ನು ಬಹುಶಃ ಹೇಳಿದರೆ ಆಗ ನಾವು ಯಾವ ಒಂದು ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ ಎಂಬುದು ತಮಗೆ ಗೊತ್ತಾಗುತ್ತದೆ. ಈಗ ಇದರಲ್ಲಿ ನಾನು ವಿದ್ಯುಚ್ಛಕ್ತಿ ವಿಚಾರವನ್ನು ಮೊದಲು ಹೇಳುತ್ತೇನೆ. ನಮ್ಮಲ್ಲಿ ಈಗ ಹಾಲಿ ವಿದ್ಯುಚ್ಛಕ್ತಿಯನ್ನು ತಯಾರು ಮಾಡುತ್ತಾ ಇರತಕ್ಕದ್ದು 1000 ಮೆಗಾವಾಟ್ಸ್. ನಾವು ಈಗ 5ನೇ ಪಂಚವಾರ್ಷಿಕ ಯೋಜನೆಯಲ್ಲಿ 1600 ಚಿಲ್ಲರೆ ಮೆಗಾವಾಟ್ಸ್ ವಿದ್ಯುಚ್ಛಕ್ತಿಯನ್ನು ತಯಾರು ಮಾಡಬೇಕು ಎನ್ನತಕ್ಕಂಥಾದ್ದು ನಮ್ಮ ಗುರಿಯಾಗಿದೆ. ಈ ಗುರಿಯನ್ನು ಸಾಧನೆ ಮಾಡುವುದಕ್ಕೆ ನಾವು ತೀವ್ರವಾದ ಪ್ರಯತ್ನವನ್ನು ಮಾಡುತ್ತಿದ್ದೇವೆ. ಇದರಲ್ಲಿ ಮುಖ್ಯವಾಗಿ ಕಾಳಿನದಿ ವಿದ್ಯುತ್ ಜಲಾಶಯ. 900 ಚಿಲ್ಲರೆ ಮೆಗಾವಾಟ್ಸ್ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡತಕ್ಕ ಒಂದು ದೊಡ್ಡ ಪ್ರಾಜೆಕ್ಟನ್ನು ಕೈಗೆತ್ತಬೇಕು ಎಂದು ನಾವು ಅಂದಾಜು ಮಾಡಿದ್ದೇವೆ. ಈ ಒಂದು ಜಲಾಶಯವನ್ನು ನಾವು ಪ್ರಾರಂಭ ಮಾಡಿ ಈಗ ಇದಕ್ಕೆ 1971-72 ರಲ್ಲಿ 174.7 ಲಕ್ಷ ರೂಪಾಯಿಗಳು ಖರ್ಚಾಗಿತ್ತು. 1972-73ರಲ್ಲಿ ಜನವರಿ ತಿಂಗಳ ವರೆಗೂ ಸುಮಾರು 350 ಲಕ್ಷ ರೂಪಾಯಿಗಳು ಖರ್ಚಾಗಿದೆ. ಈ ವರ್ಷದ ಅಖೈರಿನಲ್ಲಿ ಸುಮಾರು ಒಂದು ಸಾವಿರ ಚಿಲ್ಲರೆ ಲಕ್ಷ ರೂಪಾಯಿಗಳು ಖರ್ಚಾಗುವ ಸಾಧ್ಯತೆ ಇದೆ. ಒಟ್ಟು ಮೊತ್ತ 164 ಕೋಟಿ ರೂಪಾಯಿಗಳು ಇಡೀ ಜಲಾಶಯದ ಪೂರ್ಣ ನಿರ್ಮಾಣಕ್ಕೆ ಬೇಕಾಗುತ್ತದೆ. ಈ ಯೋಜನೆಗೆ ಕೇಂದ್ರ ಸರ್ಕಾರದವರು ನೆರವು ನೀಡುವುದಾಗಿ ಒಂದು ವರ್ತಮಾನವನ್ನು ಕೊಟ್ಟಿದ್ದಾರೆ. ಕಾಳಿನದಿ ಯೋಜನೆಯನ್ನು ಎಷ್ಟು ಬೇಗ ಪೂರೈಸಿದರೂ ಅದಕ್ಕೆ ಬೇಕಾಗುವ ಹಣವನ್ನು ಕೊಡುವುದಕ್ಕೆ ನಾವು ಹಿಂಜರಿಯುವುದಿಲ್ಲ ಎಂದು ಸ್ಪಷ್ಟವಾಗಿ ತಿಳಿಸಿದ್ದಾರೆ. ಈ ಪ್ರಾಜೆಕ್ಟನ್ನು ಪ್ರಾರಂಭ ಮಾಡಿದ ಮೇಲೆ ಇದಕ್ಕೆ ಬೇಕಾದ ಹಣವನ್ನು ಎಲ್ಲಿಂದ ತರುವುದು ಎಂದು ರಾಜ್ಯ ಸರ್ಕಾರಕ್ಕೆ ಒಂದು ತಲೆನೋವಾಗಿತ್ತು. ನಾವು ಇದಕ್ಕೆ ಬ್ಯಾಂಕುಗಳಿಂದ ಹಣವನ್ನು ಒದಗಿಸಬೇಕು ಎಂದು ಹೊರಟಿದ್ದೆವು. ಆದರೆ ಈ ಸಾರಿ ಕೇಂದ್ರ ಸರ್ಕಾರದವರು ಈ ಕಾಳಿನದಿ ಜಲವಿದ್ಯುತ್ ಯೋಜನೆಗೆ 13½ ಕೋಟಿ ರೂಪಾಯಿಗಳನ್ನು ನಮಗೆ ಸಾಲವಾಗಿ ಕೊಟ್ಟಿದ್ದಾರೆ. ನಾವು ಎರಡು ಹಂತಗಳನ್ನೂ ಕಟ್ಟಬೇಕೆಂದಿದ್ದೆವು. ಆದರೆ ಕೇಂದ್ರ ಸರ್ಕಾರದವರು ಈಗ ಮೊದಲನೇ

(ಶ್ರೀ ಡಿ. ದೇವರಾಜ ಅರಸ್)

ಹಂತವನ್ನು ಮಾತ್ರ ಕೆಲಸ ಪ್ರಾರಂಭ ಮಾಡಿ ಇದಕ್ಕೆ ಆಗುವ ದುಡ್ಡನ್ನು ಕೊಡುತ್ತೇವೆ, ಎರಡನೇ ಹಂತದ ಕೆಲಸ ಈಗ ಬೇಡ ಎಂದು ಒಂದು ಸ್ಟೇಜಿನಲ್ಲಿ ಹೇಳಿದರು. ಮೊನ್ನೆ ಡಾ। ಕೆ. ಎಲ್. ರಾವ್ ಅವರು ಇಲ್ಲಿಗೆ ಬಂದಾಗ ಒಂದು ಮೀಟಿಂಗ್ ನಡೆಯಿತು. ಆ ಮೀಟಿಂಗ್‌ನಲ್ಲಿ ಅವರು ನಿಮ್ಮ ಮೈನೂರು ರಾಜ್ಯದಲ್ಲಿ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್‌ನಲ್ಲಿ ವಿದ್ಯುಚ್ಛಕ್ತಿಯನ್ನು ನೀವು ಎಷ್ಟು ಪ್ರಮಾಣದಲ್ಲಿ ತಯಾರು ಮಾಡುವುದಕ್ಕೆ ಸಾಧ್ಯವಿದೆ ಎಂದು ಅವರು ಕೇಳಿದಾಗ ನಾವು 5ನೇ ಪಂಚವಾರ್ಷಿಕಯೋಜನೆಯಲ್ಲಿ 1600 ಮೆಗವಾಟ್ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡುವುದಕ್ಕೆ ಸಾಧ್ಯವಿದೆ ಎಂದು ಕನ್‌ವಿನ್ಸ್ ಮಾಡಿ ಇದಕ್ಕೆ ಹೆಚ್ಚಿಗೆ ದುಡ್ಡು ಕೊಡಬೇಕೆಂದು ನಾವು ಅವರಿಗೆ ಹೇಳಿದ್ದೇವೆ. ಈ ಬಗ್ಗೆ ನಾವು ಪ್ಲಾನಿಂಗ್ ಕಮಿಷನ್ನಿನವರ ಹತ್ತಿರ ಮತ್ತು ಅದಕ್ಕೆ ಸಂಬಂಧ ಪಟ್ಟ ಕೇಂದ್ರದ ಮಂತ್ರಿಗಳ ಹತ್ತಿರ ಮಾತನಾಡಿದ್ದೇವೆ. ಇಷ್ಟು ದೊಡ್ಡ ಪ್ರಮಾಣದ ಪ್ರಾಜೆಕ್ಟ್ ಅನ್ನು ಯಾವಾಗ ಪೂರ್ತಿಮಾಡುತ್ತೀರಿ ಎಂದು ಅವರು ನಮ್ಮನ್ನು ಕೇಳಿದ್ದಾರೆ. 1979ನೇ ಇಸವಿಯ ಆಖೈರಿನಲ್ಲಿ ಇದನ್ನು ಕಟ್ಟಿ ಮುಗಿಸಬೇಕೆಂದು ಅಂದಾಜು ಹಿಟ್ಟುಕೊಂಡಿದ್ದೇವೆಂದು ನಾವು ಹೇಳಿದ್ದೇವೆ. ಇನ್ನೂ 2 ವರ್ಷ ಮುಂಚಿತವಾಗಿ ಅದನ್ನು ಕಟ್ಟಿ ಮುಗಿಸಿದರೆ ಒಳ್ಳೆಯದು ಎಂದು ಪ್ಲಾನಿಂಗ್ ಕಮಿಷನ್ನಿನವರು ಹೇಳುತ್ತಿದ್ದಾರೆ. ಮೊನ್ನೆತಾನೆ ಶ್ರೀಮಾನ್ ಚನ್ನಬಸಪ್ಪನವರು ದೆಹಲಿಗೆ ಹೋಗಿದ್ದರು ಆಗ ಈ ಕಾಳಿನದಿ ಪ್ರಾಜೆಕ್ಟಿಗೆ ಪೂರ್ಣವಾಗಿ ಚೆಕ್ನಿಕಲ್ ಕ್ಲಿಯರೆನ್ಸ್ ಕೊಟ್ಟು ವರಾಹಿ ಬೇಡ್ತಿ ಪ್ರಾಜೆಕ್ಟ್‌ಗಳು ಏನಿವೆ ಅವುಗಳನ್ನು ಪ್ರಾರಂಭಮಾಡಿ ಎಂದು ಅವುಗಳಿಗೆ ಚೆಕ್ನಿಕಲ್ ಕ್ಲಿಯರೆನ್ಸ್ ಕೊಟ್ಟಿದ್ದಾರೆ. 163 ಕೋಟಿ ರೂಪಾಯಿಗಳನ್ನು ಖರ್ಚುಮಾಡತಕ್ಕ ಒಂದು ದೊಡ್ಡ ಜಲಾಶಯವನ್ನು 5ನೇ ಪಂಚವಾರ್ಷಿಕ ಯೋಜನೆಯ ಆಖೈರಿನಲ್ಲಿ ಪೂರ್ತಿ ಮಾಡುವುದಕ್ಕೆ ಸಾಧ್ಯವಿದಯೇ ಎನ್ನುವ ಅಭಿಪ್ರಾಯ ಇದೆ. ಆದರೆ ಅದನ್ನು ಮಾಡಿಯೇ ಮಾಡುತ್ತೇವೆ ಎನ್ನುವ ಬಂತಹ ಧೈರ್ಯ, ಆತ್ಮ ವಿಶ್ವಾಸ ನಮಗೆ ಇದೆ. ಕೇಂದ್ರ ಸರ್ಕಾರದವರು ಇದಕ್ಕೆ ಬೇಕಾಗತಕ್ಕ ಹಣವನ್ನು ಸಾಲದ ರೂಪದಲ್ಲಿ ಒದಗಿಸುವುದಕ್ಕೆ ಮುಂದೆ ಬಂದಿದ್ದಾರೆ. ಮೇಜರ್ ಇರಿಗೇಷನ್ ಪ್ರಾಜೆಕ್ಟ್ ಬಗ್ಗೆ ಒಂದು ಮಾತು ಹೇಳಬೇಕಾಯ್ತು ಇದೆ. ಮೊದಲು ಕಾವೇರಿ ಬೇಸಿನ್‌ನಲ್ಲಿರ ತಕ್ಕ ಇರಿಗೇಷನ್ ಪ್ರಾಜೆಕ್ಟ್‌ಗಳು ಏನಿವೆ ಅವುಗಳ ಬಗ್ಗೆ ಒಂದು ಮಾತು ಹೇಳುವುದೇನೆಂದರೆ 1974ನೇ ಇಸವಿಯ ಒಳಗೆ ಹೇಮಾವತಿ ಜಲಾಶಯದ ಕಟ್ಟಡವನ್ನು ಪೂರ್ತಿಯಾಗಿ ಕಟ್ಟಬೇಕು. ಮೈನೂರು ಮಾಸ್ಟರ್ ತಮಿಳುನಾಡಿನ ನಡುವೆ 50 ವರ್ಷಗಳ ಅಗ್ರಿಮೆಂಟ್ ಏನಿದೆ ಅದು 1974ನೇ ಇಸವಿಗೆ ಮುಕ್ತಾಯವಾಗುತ್ತದೆ. ಅಷ್ಟರೊಳಗೆ ಈ ಹೇಮಾವತಿ ಅಣೆಕಟ್ಟಿನ ಕೆಲಸ ಪೂರ್ತಿಯಾಗುತ್ತದೆ ಎಂದು ಸರ್ಕಾರದ ಉದ್ದೇಶ ಇದೆ. ಇದಕ್ಕೆ ಸರ್ಕಾರದವರು 4 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಕಬಿನಿ ಜಲಾಶಯಕ್ಕೂ ಸರ್ಕಾರದವರು 4 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಒಂದು ವರ್ಷದಲ್ಲಿ ಆದು ಪೂರ್ಣವಾಗಬಹುದು. 1974ನೇ ಇಸವಿಯಲ್ಲಿ ಆ ಎರಡು ಆಣಕಟ್ಟುಗಳಲ್ಲಿ ಪೂರ್ತಿ ನೀರನ್ನು ತಡೆಹಿಡಿಯುವುದಕ್ಕೆ ಸಾಧ್ಯವಾಗುತ್ತದೆ. ಈ ಎರಡೂ ಜಲಾಶಯಗಳಲ್ಲಿ ನೀರನ್ನು ಉಪಯೋಗ ಮಾಡತಕ್ಕಂಥ ಒಂದು ವ್ಯವಸ್ಥೆ ಕೂಡ ಆಗುತ್ತಿವೆ ಇದರಲ್ಲಿ ಮಾಡಬೇಕಾದ್ದು ಇದೆ. ಆದರ ನೀರು ಬಳಕೆಗಾಗಿ ಬೇಕಾದಂತಹ ನಾಲೆಗಳು ಏನಿವೆ ಅವುಗಳನ್ನು ಕಟ್ಟತಕ್ಕ ಕಾರ್ಯವನ್ನು ತ್ವರಿತವಾಗಿ ಮಾಡ ಬೇಕಾದ್ದು ಇದೆ, ಕಬಿನಿ ಜಲಾಶಯ ಮತ್ತು ಹಾರಂಗಿ ಜಲಾಶಯಗಳ ನಾಲೆಗಳ ಕಾರ್ಯಕ್ಕಾಗಿ ಹೆಚ್ಚು ಹಣವನ್ನು ಖರ್ಚು ಮಾಡುವುದಕ್ಕೆ ಗಮನ ಕೊಟ್ಟು ನಾಲೆಗಳಲ್ಲಿ ಬೇಗ ನೀರು ಬರಬೇಕು, ಹಾರಂಗಿ, ಹೇಮಾವತಿ, ಕಬಿನಿ, ಜಲಾಶಯಗಳ ನಾಲೆಗಳ ಕೆಲಸ ಎಷ್ಟು ಬೇಗ ಮಾಡಬೇಕೆಂದು ನಾವು ಆಶಯನ್ನು ಇಟ್ಟುಕೊಂಡಿದ್ದೆವೋ ಅಷ್ಟು ಬೇಗ ಅದನ್ನು ಮಾಡುವುದಕ್ಕೆ ಆಗಿಲ್ಲ. ಹೇಮಾವತಿ ಜಲಾಶಯವನ್ನು ಕಟ್ಟುವುದಕ್ಕೆ ಹೆಚ್ಚು ಹಣವನ್ನು ಒದಗಿಸಿ ಬೇಗ ಈ ಕಾರ್ಯವನ್ನು ಮುಂದು ವರಿಸಬೇಕು ಎನ್ನತಕ್ಕಂಥಾದ್ದು ಸರ್ಕಾರದ ಅಭಿಪ್ರಾಯ ಇದೆ. 5ನೇ ಪಂಚವಾರ್ಷಿಕ ಯೋಜನೆ ಯಲ್ಲಿ ದೊಡ್ಡ ದೊಡ್ಡ ಜಲಾಶಯಗಳ ನಿರ್ಮಾಣಕ್ಕೋಸ್ಕರ ಮೇಜರ್ ಇರಿಗೇಷನ್ ಪ್ರಾಜೆಕ್ಟ್ ಗೋಸ್ಕರ ಸುಮಾರು 250 ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕೆಂದು ವ್ಯವಸ್ಥೆ ಮಾಡ ರಾಗಿದೆ.

ಆ ಮೇಲೆ ಈ ಘಟಪ್ರಭಾ, ಮಲಪ್ರಭಾ ಮತ್ತು ಅಲಮಟ್ಟಿ ಯೋಜನೆಗಳು ಏನಿವೆ, ಅವುಗಳ ಬಗ್ಗೆ ಏನಾಗಿದೆ ಎಂಬುದನ್ನು ತಿಳಿದುಕೊಳ್ಳಬೇಕು. ಈ ಎರ್ನಾ ಪ್ರೊಜೆಕ್ಟುಗಳನ್ನು ಮುಗಿಸ ಬೇಕಾದರೆ 500 ಕೋಟಿ ರೂಪಾಯಿ ಬೇಕಾಗುತ್ತದೆ. ಈಗ ಘಟಪ್ರಭಾ ಲೆಫ್ಟ್‌ಬ್ಯಾಂಕ್ ಕೆನಾಲು ನಲ್ಲಿ ಒಂದು ಲಕ್ಷ 25 ಸಾವಿರ ಎಕರೆ ನೀರಾವರಿಯಾಗುತ್ತದೆ. ಈಗ 22 ಕೋಟಿ ರೂಪಾಯ

ಖರ್ಚಾಗಿದೆ. ಇಷ್ಟು ಖರ್ಚುಮಾಡಿಯೂ ನಮಗೆ ಒಂದು ಗ್ಯಾಲನ್ ನೀರನ್ನು ಸಹ ಉಪಯೋಗಿಸುವುದಕ್ಕಾಗಲಿಲ್ಲ. ಇದಕ್ಕೆ ಇಲ್ಲಿ ಸ್ವಲ್ಪ ಡಿಫೆಕ್ಟಿವ್ ಪ್ಲಾನಿಂಗ್ ಇದೆ ಎಂದು ಹೇಳುತ್ತಿರುವುದು. ಆಲ್ಲ 22 ಕೋಟಿ ರೂಪಾಯಿ ಖರ್ಚು ಮಾಡಿ ಒಂದು 4-6 ಟಿ. ಎಂ. ಸಿ. ಎಫ್. ಟಿ. ನೀರನ್ನಾದರೂ ನಿಲ್ಲಿಸುವ ವ್ಯವಸ್ಥೆ ಮಾಡಿದ್ದರೆ, ಇನ್ನೂ ಸ್ವಲ್ಪ ಹೆಚ್ಚು ಎಕರೆಗೆ ನೀರನ್ನು ಒದಗಿಸಬಹುದಿತ್ತು. ಲೆಫ್ಟ್ ಬ್ಯಾಂಕ್ ಡಿಸ್ಟ್ರಿಬ್ಯೂಟರೀಸ್‌ನ್ನು ಪೂರ್ತಿಮಾಡಿದ್ದರೆ, 4-5 ಕೋಟಿ ರೂಪಾಯಿ ಖರ್ಚಿನಲ್ಲಿ ಇನ್ನೂ 50 ಸಾವಿರ ಎಕರೆಗೆ ನೀರನ್ನು ಕೊಡಬಹುದಿತ್ತು. ಕೇವಲ ಒಂದು 5 ಕೋಟಿ ರೂಪಾಯಿ ಖರ್ಚುಮಾಡಿ ಬೆಳಗಾಂ, ಗೋಕಾಕ್, ರಾಮದುರ್ಗ ಮತ್ತು ರಾಯಬಾಗ್ ಕಡೆ ಯಾವುದು ಮಾಡಬೇಕೆಂದು ಮೊದಲು ತೀರ್ಮಾನ ಮಾಡಬೇಕಾಗಿತ್ತು, ಈ ನೀರನ್ನು ಅಲ್ಲಿ ತಡೆಗಟ್ಟಿ ಉಪ ಯೋಗಿಸಬಹುದಿತ್ತು. ಆದರೆ ಇವತ್ತು 22 ಕೋಟಿ ರೂಪಾಯಿ ಖರ್ಚು ಮಾಡಿದ್ದರೂ ಒಂದು ತೊಟ್ಟು ಸಹ ಉಪಯೋಗಿಸುವುದಕ್ಕಾಗಲಿಲ್ಲ. ಮೊನ್ನೆ ಮಾನ್ಯ ಧಾರ್‌ವರವರು ಬಂದಾಗ ಸಹ ನಾವು ಕರಕೊಂಡು ಹೋಗಿ ತೋರಿಸಿದ್ದೇವೆ. ಮೊದಲನೆಯ ಪ್ಲಾನಿನಲ್ಲಿ 501 ಲಕ್ಷ ಖರ್ಚು ಮಾಡಿದ್ದಾರೆ, ಎರಡನೆಯ ಪ್ಲಾನಿನಲ್ಲಿ 7+7 ಲಕ್ಷ ಖರ್ಚು ಮಾಡಿದ್ದಾರೆ. ಒಟ್ಟಿನಲ್ಲಿ 24 ಕೋಟಿ ಖರ್ಚುಮಾಡಿದ್ದಾರೆ. ಇದು ಏನಾಗಿದೆ ಅಂದರೆ, ಘಟಪ್ರಭಾದಲ್ಲಿ ಎರಡೂ ಕಡೆಯಿಂದ ಮಣ್ಣು ಕೆಲಸ ಮಾಡಿಕೊಂಡು ಬಂದಿದ್ದಾರೆ. ಮಧ್ಯ ನೀರು ಹರಿಯತಕ್ಕ ಹೊಳೆಯ ಕೆಲಸ ಪ್ರಾರಂಭ ವಾಗಿಲ್ಲ. ಎರಡನ್ನೂ ಹಂತ ಹಂತವಾಗಿ ತೆಗೆದುಕೊಂಡು ಬಂದಿದ್ದರೆ ನಮಗೆ ಇನ್ನೂ ಹೆಚ್ಚಿನ ನೀರು ಸಿಗುತ್ತಿತ್ತು; ಮತ್ತು ಅನುಕೂಲವಾಗುತ್ತಿತ್ತು.

ಶ್ರೀ ಎಚ್. ಡಿ. ದೇವೇಗೌಡ.—ತಾವು ಸ್ವಲ್ಪ ಸ್ವಲ್ಪ ಹಂತದಲ್ಲಿ ನೀರು ಶೇಖರಣೆ ಮಾಡಿ ಕೊಂಡು ಚ್ಯಾನಲ್ ಸ್ಟೆಮಲ್ಟೇನಿಯಸ್‌ವಾಗಿ ಮಾಡಿದ್ದರೆ ಚೆನ್ನಾಗಿತ್ತು ಎಂದು ಹೇಳುತ್ತಿದ್ದೀರಿ. ಆ ಅಭಿಪ್ರಾಯವನ್ನು ಇರಿಗೇಷನ್ ಇಂಜಿನಿಯರುಗಳು ಕೊಟ್ಟು, ಅದನ್ನು ಅವರು ವಾಯಲೇಟ್ ಮಾಡಿದ್ದಾರೆಯೇ ಎಂಬುದನ್ನು ತಿಳಿಸಬೇಕು.

ಶ್ರೀ ಡಿ. ದೇವರಾಜ ಅರಸ್.—ಇಂಜಿನಿಯರುಗಳನ್ನು ಈಗ ಏಕೆ ಎಳೆಯುತ್ತೀರಿ? ಆ ರೀತಿಯ ಅಭಿಪ್ರಾಯ ಕೊಟ್ಟಿದ್ದರೆ ಇವರದ್ದು ತಪ್ಪಾಗುತ್ತದೆ, ಕೊಡದಿದ್ದರೆ ಅಧಿಕಾರಿಗಳದ್ದು ತಪ್ಪಾಗುತ್ತದೆ. ಈ ಪಿ. ಡಬ್ಲ್ಯು. ಇರಿಗೇಷನ್‌ಲ್ಲಿ ಮಾನ್ಯ ದೇವೇ ಗೌಡರು ಹೆಚ್ಚಿನ ಮಾಹಿತಿಯನ್ನು ತಿಳಿದುಕೊಂಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ ನಿಮ್ಮ ಮಾಹಿತಿ ಜೊತೆಗೆ ನಿಮಗೆ ಸವಾಲು ಕೊಡುವಷ್ಟು ಮಾಹಿತಿ ನನಗೂ ಗೊತ್ತಿದೆ. ಇವರಲ್ಲಿ ಒಬ್ಬ ಇಂಜಿನಿಯರು ಕೆಲಸ ಮಾಡಿ 1968 ರಲ್ಲಿ ಏನು ಪತ್ರಿಕೆಯಲ್ಲಿ ಹೇಳಿಕೆ ಕೊಟ್ಟಿದ್ದಾರೆಂದು ನೋಡಿ. ಅವರ ಪೇಪರ್ ಕಟ್ಟಿಂಗ್ ಸಹ ನನ್ನಲ್ಲಿ ಇದೆ. ಅದನ್ನು ಬೇಕಾದರೆ ತಮಗೆ ಕಳಿಸಿಕೊಡುತ್ತೇನೆ. ಹೀಗೆ ಹಿಂದೆ ಇದ್ದ ಸರ್ಕಾರ ಇದನ್ನು ವಿವೇಚನೆಯಿಂದ ಮಾಡಿದ್ದರೆ ಇಷ್ಟು ತೊಂದರೆಗಳು ಆಗುತ್ತಿರಲಿಲ್ಲ.

ಶ್ರೀ ಜಿ. ಎನ್. ಪಾಟೀಲ್.—ಹಿಂದಿನ ಸರ್ಕಾರ ಅಂದರೆ 700 ವರ್ಷದ ಹಿಂದಿನ ಸರ್ಕಾರವೇ?

ಶ್ರೀ ಡಿ. ದೇವರಾಜ ಅರಸ್.—ಈಗ ನಾನು ಹೇಳುತ್ತಿರುವುದು 1970ನೇ ಇಸವಿಯ ವಿಚಾರ 1958ನೇ ಇಸವಿಯಿಂದ ಇದು ಪ್ರಾರಂಭವಾಯಿತು. ಇದರಲ್ಲಿ ತಪ್ಪು ಏನಾಗಿದೆ ಅಂದರೆ, ಇಷ್ಟೆ. ನನ್ನ ದೃಷ್ಟಿಯಲ್ಲಿ ಮತ್ತು ಕೆಲವು ಇಂಜನಿಯರುಗಳ ದೃಷ್ಟಿಯಲ್ಲಿ even while the work was in progress they could have thought of utilising the water. ಇವೇ ಮಲಪ್ರಭಾ ಮತ್ತು ಘಟಪ್ರಭಾದಲ್ಲಿ ಏನು ಮಾಡಿದ್ದಾರೆಂದರೆ, ಒಂದು ಎಕರೆಯಲ್ಲಿ ಸಹ ನೀರು ನಿಲ್ಲದಿದ್ದರೂ ಆಗಲೇ ಕೊಡಬೇಕಾದಂತಹ ಕಂಪೆನ್‌ಸೇಶನ್ ಕೊಟ್ಟು ಬಿಟ್ಟಿದ್ದಾರೆ. ನಾನು ಏಕೆ ಕಾಂಪನ್‌ಸೇಷನ್ ಕೊಟ್ಟದ್ದು ಎಂದು ಕೇಳಿದೆ. 10 ವರ್ಷಗಳ ಮೇಲೆ ಮುಳುಗಡೆಯಾಗತಕ್ಕ ಜಮೀನಿಗೆ ಈಗಾಗಲೇ ಕಾಂಪೆನ್‌ಸೇಶನ್ ಕೊಟ್ಟದ್ದು ಏಕೆ ಎಂದು ನಾನು ಕೇಳುವುದು. ಹಾಗೆ ಕೊಡಬೇಕಾದಂತಹ ಅಗತ್ಯ ಇರಲಿಲ್ಲ. ಆದರಲ್ಲಿ ಹೋದ ಸಾರಿ ಸಹ ನೀರು ತುಂಬಿಲ್ಲ. ಕ್ರಸ್ಟ್ ಗೇಟ್ ಹಾಕಿದರೆ ಜುಲೈಯಲ್ಲಿ ನೀರು ತುಂಬುತ್ತದೋ ಏನೋ.

ಶ್ರೀ ವಾಟಾಳ್ ನಾಗರಾಜ್.—ತಾವು ಆಗ ಕ್ಯಾಬಿನೆಟ್‌ನಲ್ಲಿ ಇದ್ದವರು ಏನು ಮಾಡು ತ್ತಿದ್ದೀರಿ?

ಶ್ರೀ ಡಿ. ದೇವರಾಜ ಅರಸ್.—ದಯವಿಟ್ಟು ನಾನು ಹೇಳುವುದು ಕೇಳಿ. ತಮಗೆ ಈ ಬೆಂಗಳೂರಿನಲ್ಲಿ ನುತ್ತುವವರಿಗೆ ಅದು ಏಕೆ ? ಅಲಮಟ್ಟಿ ಜಲಾಶಯ, ನಾರಾಯಣಪುರ ಜಲಾಶಯ, ಘಟಪ್ರಭಾ ಮತ್ತು ಮಲಪ್ರಭಾ ಜಲಾಶಯ—ಇವುಗಳ ನಿರ್ಮಾಣಕ್ಕೆ ಭೂಮಿಯನ್ನು ಅಕ್ವಯರ್ ಮಾಡುವುದಕ್ಕೆ ಆಫೀಸರುಗಳನ್ನು ನೇಮಕ ಮಾಡಿದರು. ಅಲಮಟ್ಟಿಗೆ ಚೀಫ್ ಇಂಜಿನಿಯರೆನ್ನೇ ಬಂದಿಲ್ಲ. ಆದರೂ ಇವರು ಇಷ್ಟು ಮುಳುಗಡೆಯಾಗುತ್ತದೆಂದು ನರ್ವೆ ಮಾಡಿದರು. ನಮ್ಮಲ್ಲಿರತಕ್ಕಂತಹ ರಿಸೋರ್ಸನ್ನು ಯಾವ ಮಟ್ಟದಲ್ಲಿ ಉಪಯೋಗ ಮಾಡಿದರೆ ನಮಗೆ ಹೆಚ್ಚು ಪ್ರಯೋಜನವಾಗುತ್ತದೆಂಬ ಜಾಣ್ಮೆಯಿಂದ ನಾವು ಕೆಲಸಕಾರ್ಯಗಳನ್ನು ಮಾಡಬೇಕು. ಆ ಕಾರಣದಿಂದ ನಾವು ಮಾಡಿರತಕ್ಕಂಥ ಪ್ಲಾನಿನಲ್ಲಿ ಈ ಕೆಲವೊಂದು ಡಿಫೆಕ್ಟ್ಸ್ ಇರುವುದರಿಂದ ಬಹಳ ಮಟ್ಟಿಗೆ ಇವತ್ತು ನಮಗೆ ಇರತಕ್ಕ ಬರಗಾಲವನ್ನು ಎದುರಿಸುವುದಕ್ಕೆ ಅವಕಾಶ ಸಾಧ್ಯವಾಗಿದೆ. ನೀರು ಹೆಚ್ಚಿಗೆ ಉಪಯೋಗಿಸುವ ಅವಕಾಶ ಹಿಂದೆ ಇದ್ದಿದ್ದರೆ, ನಮಗೆ ಇಷ್ಟೊಂದು ಕಷ್ಟ ಆಗುತ್ತಿರಲಿಲ್ಲ ವೆಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ.

4.30 P.M.

ಶ್ರೀ ಎಚ್. ಡಿ. ದೇವೇಗೌಡ.—ತಾವು ಹೇಳುವುದು ಬಹಳ ಒಳ್ಳೆಯದು. ನಾನು ಅದನ್ನು ಬಹಳ ಅಭಿಮಾನದಿಂದ ಸ್ವಾಗತಮಾಡಿ, ತಾವು ಅವುಗಳನ್ನು ಹೇಳುವಾಗ ದಯವಿಟ್ಟು ಈ ಸಭೆಗೆ ವಿವರಣೆಗಳನ್ನು ಕೊಡಿ, ಏಕೆಂದರೆ ನಿಮಗೆ ಇರುವಷ್ಟು ಜಾಣ್ಮೆ ನನಗೆ ಇಲ್ಲ. ಯಾರೋ ಒಬ್ಬ ಇಂಜಿನಿಯರ್ ಕಂಟ್ರಾಕ್ಟರ್ ಓರಿಯಂಟೆಡ್ ಎಂಬುದಾಗಿ ಹೇಳಿದ್ದಾರೆ. ಆ ಮಾತನ್ನು ಅವರು ದೇಶದ ಹಿತದೃಷ್ಟಿಯಿಂದ ಹೇಳಿದ್ದರೆ ಅದನ್ನು ಯಾರು ಬದಲಾವಣೆ ಮಾಡಿದ್ದಾರೆಂಬುದನ್ನು ಹೇಳಬೇಕು. 1962ರಿಂದ 1968ರವರೆಗೆ ಯಾರನ್ನು ಎಫಿಷಿಯೆಂಟ್ ಇಂಜಿನಿಯರ್ ಎಂದು ಹೇಳುತ್ತಿದ್ದರೋ ಅವರೇ ಚೀಫ್ ಇಂಜಿನಿಯರ್ ಆಗಿದ್ದರು. ಆದರೆ ಅವರು ಮಾಡಿರತಕ್ಕ ಪ್ರೊಪೋಸಲ್‌ಗಳನ್ನು ಮತ್ತು ಟೆಕ್ನಿಕಲ್ಲಾಗಿ ಅವರು ಕೊಟ್ಟಿರತಕ್ಕ ಅಡ್ವೈಜ್‌ಗಳನ್ನು ಮಾನ್ಯ ಶ್ರೀ ನಿಜಲಿಂಗಪ್ಪನವರೇ ಆಗಲೀ ಅಥವಾ ಮಾನ್ಯ ಶ್ರೀ ವೀರೇಂದ್ರಪಾಟೀಲರಾಗಲೀ ಬದಲಾವಣೆ ಮಾಡಿದ್ದಾರೆಯೇ ಎಂಬುದನ್ನು ಈ ಸಭೆಗೆ ತಿಳಿಸಬೇಕು.

Sri D. DEVARAJ URS.—I am not prepared to go on listening to another lecture from the hon. the Leader of the opposition. ನಿಮಗೆ ನಾವು ಸಾಕಷ್ಟು ಅವಕಾಶವನ್ನು ಕೊಟ್ಟಿದ್ದೆವು. ನಾವು ಒಂದು ಘಂಟೆಯೊಳಗಾಗಿ ನಿಮ್ಮ ಟೀಕೆಗಳಿಗೆ ಉತ್ತರ ಕೊಡುತ್ತಿರುವಾಗ, ಅದನ್ನು ಕೇಳಲಿಕ್ಕೆ ಇಷ್ಟವಿಲ್ಲವೆಂದರೆ ಹೇಗೆ ?

Sri M. S. KRISHNAN.—I want a clarification.

ಘಟಪ್ರಭಾ ಹಾಗೂ ಮಲಪ್ರಭಾ ಯೋಜನೆಗಳ ಬಗ್ಗೆ ಯಾವುದೇ ಒಂದು ತೀರ್ಮಾನವಾಗಿದ್ದರೂ, ಮಾನ್ಯ ಶ್ರೀ ವೀರೇಂದ್ರಪಾಟೀಲರ ಸರ್ಕಾರ ಆ ರೀತಿಯಾಗಿ ತೀರ್ಮಾನ ಮಾಡಿದೆಯೋ ಅಥವಾ ಅವರ ಹಿಂದೆ ಇದ್ದಂಥ ಮಾನ್ಯ ಶ್ರೀ ನಿಜಲಿಂಗಪ್ಪನವರ ಸರ್ಕಾರ ಆ ರೀತಿಯಾಗಿ ತೀರ್ಮಾನ ಮಾಡಿದೆಯೋ ಎಂಬ ಬಗ್ಗೆ ವಿವರಣೆ ಬೇಕು.

ಶ್ರೀ ಡಿ. ದೇವರಾಜ್ ಅರಸ್.—ಮಾನ್ಯ ಶ್ರೀ ವೀರೇಂದ್ರ ಪಾಟೀಲರ ಸರ್ಕಾರ ಮತ್ತು, ಮಾನ್ಯ ಶ್ರೀ ನಿಜಲಿಂಗಪ್ಪನವರ ಸರ್ಕಾರ ನುಮಾರು 10 ವರ್ಷಗಳಿಂದ ನಡೆದಿರುವ ಸರ್ಕಾರ. ಆದರೆ ಈ ಯೋಜನೆಯು ಯಾವಾಗ ಪ್ರಾರಂಭವಾಯಿತು ಎಂಬುದನ್ನೂ ಸಹ ಹೇಳುತ್ತೇನೆ. ಆದಕ್ಕೆ ಒಂದು ಕಮಿಟಿಯೂ ಇದೆ. ಘಟಪ್ರಭಾ ಯೋಜನೆಯ ಕೆಲಸ ಮೊದಲು 1940ನೇ ಇಸವಿಯಲ್ಲಿ ಸಣ್ಣದಾಗಿ ಪ್ರಾರಂಭವಾಯಿತು. 1961-62ರಲ್ಲಿ ಕೆಲಸಗಳು ಪ್ರಾರಂಭವಾದುವು. 67-68 ರಿಂದ ಆ ಯೋಜನಾ ಕಾರ್ಯಗಳಿಗೆ ಸ್ವಲ್ಪ ಸ್ವಲ್ಪವಾಗಿ ಹಣವನ್ನು ಖರ್ಚುಮಾಡಿಕೊಂಡು ಬಂದಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಆ ಸಂದರ್ಭದಲ್ಲಿ ತಾವೂ ಸಹ ಕ್ಯಾಬಿನೆಟ್‌ನಲ್ಲಿದ್ದಿರಿ. ಆಗ ಈ ಪ್ರಶ್ನೆ ಬರಲಿಲ್ಲವೇ ? ಅದಕ್ಕಾಗಿ ಇದರಲ್ಲಿ ತಮ್ಮ ಜವಾಬ್ದಾರಿಯೂ ಇದೆಯಲ್ಲವೇ ?

ಶ್ರೀ ಡಿ. ದೇವರಾಜ್ ಅರಸ್.—ಆ ಜವಾಬ್ದಾರಿ ನನಗೂ ಬರುತ್ತದೆ. ನಿಮಗೂ ಬರಬಹುದು. Who handled this P.W.D. ? Have I handled it ? Do I know that this kind of a thing was going on there ?

Sri M. S. KRISHNAN.—This is a very important matter. We want to know whether this aspect came up when you were also a Minister then ?

ಶ್ರೀ ಎಚ್. ಡಿ. ದೇವೇಗೌಡ.—ಈ ವಿಚಾರದಲ್ಲಿ ಜಾಯಿಂಟ್ ರೆಸ್‌ಪಾನ್ಸಿಬಿಲಿಟಿ ಇರುತ್ತದೆ. ಇದರಲ್ಲಿ ಮಾನ್ಯ ಶ್ರೀ ದೇವರಾಜ್ ಅರಸ್ ಅವರ ಭಾಗವೂ ಇದೆ. ನೀವೂ ಸಹ ಇದಕ್ಕೆ ಭಾಗಿಗಳೇ. ಈಗ ನೀವು ಮುಖ್ಯಮಂತ್ರಿಗಳಾಗಿರಬಹುದು, ಬೇರೆ ಬೇರೆ ಇರಾಖೆಗಳನ್ನು ವಹಿಸಿಕೊಂಡಿರಬಹುದು. ಆದರೆ ಈಗ ತಾತ್ಪಿಕವಾಗಿ ಮಾತನಾಡುವಾಗ ರಾಜ್ಯಾಂಗ ವಿಷಯವಾಗಲೀ ಅಥವಾ ರಾಜಕೀಯ ವಿಷಯವಾಗಲೀ ಮಾತನಾಡುವುದು ಬೇಡ. ಮಾನ್ಯ ಶ್ರೀ ವೀರೇಂದ್ರಪಾಟೀಲರೂ ಸಹ ಇದಕ್ಕೆ ಜವಾಬ್ದಾರರು ಎಂಬುದನ್ನು ನಾನು ಒಪ್ಪುತ್ತೇನೆ. ಆದರೆ ನನಗೆ ನಾನು ಕೇಳಿದ್ದಕ್ಕೆ ವಿವರಣೆ ಬೇಕು. ಮಾನ್ಯ ಶ್ರೀ ಮುಗ್ದಂ ಅವರು 1962 ರಿಂದ 1968ರವರೆಗೂ ಚೀಫ್ ಇಂಜಿನಿಯರ್ ಆಗಿದ್ದರು. ಆಗ ಇನ್ನೂ ಮೇಜರ್ ಇರ್ರಿಗೇಷನ್ ಎಂಬುದಾಗಿ ವಿಭಾಗವಾಗಿರಲಿಲ್ಲ. ಅಂತಹ ಸಂದರ್ಭದಲ್ಲಿ ಅವರು ಕೊಟ್ಟಿರುವ ತಾಂತ್ರಿಕ ಸಲಹೆಯನ್ನು ಮಾನ್ಯ ಶ್ರೀ ವೀರೇಂದ್ರಪಾಟೀಲ್ ಅವರು ಸೂಪರ್‌ಸೀಡ್ ಮಾಡಿ ಬದಲಾವಣೆ ಮಾಡಿದರೇ ? ಹಾಗೆ ಒಂದುವೇಳೆ ಮಾಡಿದ್ದರೆ, I will see that Sri Veerendra Patil is charged from this side.

Sri D. DEVARAJ URS.—You cannot do it.

Sri H. D. DEVE GOWDA.—If he has done any mistake, I will be the first man to charge him. Sri Magdum was there as Chief Engineer from 1962 to 1968.

Sri D. DEVARAJ URS.— Was he the only Chief Engineer ? He was there in several capacities.

Sri H. D. DEVE GOWDA.— You please verify and tell me.

ಶ್ರೀ ಎಸ್. ಪೈ. ಪಾಟೀಲ್.—ಆಗಲೇ ಕೇಂದ್ರಸರ್ಕಾರವರು 600 ಟಿ. ಎಂ. ಸಿ. ಫೀಟ್ ನೀರನ್ನು ಉಪಯೋಗಮಾಡಲಿಕ್ಕೆ ಅವಕಾಶ ಕೊಟ್ಟರು. ಅವರು ಆಗ ಏನು ಕಂಡೀಷನ್ಸ್ ಮೇಲೆ ನಮಗೆ ಆ ರೀತಿ ಕೊಟ್ಟರು ? ಎಷ್ಟನೇ ಇನಪಿಯೊರಿಗೆ ಈ ಪ್ರಾಜೆಕ್ಟನ್ನು ಮುಗಿಸಬೇಕೆಂದು ಕೊಟ್ಟರು ?

ಶ್ರೀ ಡಿ. ದೇವರಾಜ್ ಅರಸ್.—ಹಿಂದೆ ಕೇಂದ್ರದಲ್ಲಿ ಆಗಿನ ಪಿ. ಡಬ್ಲ್ಯು. ಡಿ. ಮಂತ್ರಿಗಳಾಗಿದ್ದ ಮಾನ್ಯ ಶ್ರೀ ಹಫೀಜ್ ಮಹಮದ್ ಇಬ್ರಾಹಿಂ ಸಾಹೇಬರು ನಮಗೆ ನೀವೂ ಮತ್ತು ಆಂಧ್ರದವರು ಇಬ್ಬರೂ ಹೀಗೆಯೇ ಹೋಗಬೇಕೆಂದು ಒಂದು ಒಪ್ಪಂದವನ್ನು ಈ ವಿಚಾರದಲ್ಲಿ ಮಾಡಿದರು.

ಶ್ರೀ ಎಚ್. ಡಿ. ದೇವೇಗೌಡ.—ಚೀಫ್ ಇಂಜಿನಿಯರ್ ಆವರ ಚೆಕ್ನಿಕಲ್ ಆಡ್ವೈಜ್ ಬಗ್ಗೆ ಮಾನ್ಯ ಶ್ರೀ ಹಫೀಜ್ ಮಹಮದ್ ಇಬ್ರಾಹಿಂ ಸಾಹೇಬರು ಏನು ಹೇಳಿದರು ?

ಶ್ರೀ ಡಿ. ದೇವರಾಜ ಅರಸ್.—ನಮಗೆ ನೀವೂ ಮತ್ತು ಆಂಧ್ರದವರು ಇಷ್ಟಿಷ್ಟು ನೀರನ್ನು ಈಗ ಉಪಯೋಗಿಸಿಕೊಂಡು ಕೆಲಸಗಳನ್ನು ಮಾಡಿ ಎಂದು ನಿರ್ಧಾರಮಾಡಿದರು. ಫೈನಲ್‌ವ್ಯಾಗಿ ಕೃಷ್ಣಾ ವಾಟರನ್ನು ಯಾರ್ಯಾರಿಗೆ ಎಷ್ಟೆಷ್ಟು ಹಂಚಬೇಕೆಂಬ ವಿಚಾರ ನಾವು ಅರ್ಬಿಟ್ರೇಷನ್ನಿಗೆ ಹಾಗೂ ಟ್ರಿಬ್ಯೂನಲ್‌ಗೆ ಒಪ್ಪಿಸಿದ್ದೇವೆ. ಅದರ ತೀರ್ಮಾನ ಬರಲಿ. ಏತನ್ಮಧ್ಯೆ ನೀವು ಕೆಲಸ ನಿಲ್ಲಿಸುವುದು ಬೇಡ. 600 ಟಿ. ಎಂ. ಸಿ. ಫೀಟ್ ನೀರನ್ನು ನೀವು ಉಪಯೋಗಿಸಿ. ಕೃಷ್ಣಾ ನೀರು ಎಷ್ಟು ಇದೆಯೆಂಬುದು ಪೂರಾ ಲೆಕ್ಕ ಆಗಲಿ. ಅದು ಫೈನಲ್ ಆಗೋವರೆಗೂ ನೀವು ಕಾಯುವುದು ಬೇಡವೆಂದು ನಾಗಾರ್ಜುನ ಸಾಗರ ಕಟ್ಟುವ ಸಂದರ್ಭದಲ್ಲಿಯೇ ಆಡಿದ ಮಾತು. ಒಂದು ವೇಳೆ ಹೆಚ್ಚಿಗೆ ಬಂದರೆ ನೀವೂ ತೆಗೆದುಕೊಳ್ಳಬಹುದು, ಇದೇ ಫೈನಲ್ ಅವಾರ್ಡ್ ಎಂದು ತಿಳಿಯುವ ಹಾಗೆ ಇಲ್ಲವೆಂಬ ಬಗ್ಗೆ ಮೈಸೂರು ಸರ್ಕಾರಕ್ಕೆ ಒಂದು ಕಾಗದ ಬರೆದಿದ್ದೇನೆಂದು ಹೇಳಿದರು.

ಶ್ರೀ ಜಿ. ಎನ್. ಪಾಟೀಲ್.—ಆ ಕೆಲಸಗಳನ್ನು ಇಂತಿಷ್ಟೇ ದಿನಗಳಲ್ಲಿ ಮುಗಿಸುವಂತೆ ಏನಾದರೂ ಕಾಲನಿಗದಿ ಮಾಡಲಾಗಿತ್ತೇ ?

ಶ್ರೀ ಡಿ. ದೇವರಾಜ್ ಅರಸ್.—ಆ ಬಗ್ಗೆ ಯಾರೂ ಕಾಲ ನಿಗದಿಯನ್ನು ಮಾಡಿರಲಿಲ್ಲ. ಆದರೆ ನಾನು ತಮಗೆ 1967-68ರಲ್ಲಿ ಎಷ್ಟು ಹಣ ಅಲ್ಲಿ ಖರ್ಚಾಗಿದೆ, 1968-69ರಲ್ಲಿ ಎಷ್ಟು ಹಣ ಖರ್ಚಾಗಿದೆ ಎಂಬ ವಿವರಗಳನ್ನು ಬೇಕಾದರೆ ಕೊಡಬಲ್ಲೆ. ಆದರೆ ಆ ಕಾಲದಲ್ಲಿ ಯಾರು ಚೀಫ್ ಇಂಜಿನಿಯರ್ ಆಗಿದ್ದರು ಎಂಬುದು ಏತಕ್ಕೆ ಬೇಕು ?

ಶ್ರೀ ಎಚ್. ಡಿ. ದೇವೇಗೌಡ.—ಅಲ್ಲಿ ಅವರು 12 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದರೇ ಅಥವಾ 24 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದರೇ ಅನುವುದು ಮುಖ್ಯವಲ್ಲ. ಆದರೆ ಆ ಕಾಲದಲ್ಲಿ ಅಲ್ಲಿದ್ದ ಚೀಫ್ ಇಂಜಿನಿಯರು ಯಾರು ? ಅವರು ಈ ಕೆಲಸದ ವಿಚಾರದಲ್ಲಿ ಕೊಟ್ಟ ಟೆಕ್ನಿಕಲ್ ಅಡ್ವೈಜನ್ನು ವೀರೇಂದ್ರ ಪಾಟೀಲರು ತಿರಸ್ಕರಿಸಿದ್ದರೆ ? ಅವರು ಆ ಅಡ್ವೈಜನ್ನು ತಿರಸ್ಕರಿಸಿ ತಮ್ಮದೇ ಆದ ಜವಾಬ್ದಾರಿಯ ಮೇಲೆ ಅಲ್ಲಿ ಕೆಲಸಗಳನ್ನೇನಾದರೂ ಮಾಡಿಸಿದ್ದಾರೆಯೇ ? ಮಾಡಿಸಿದ್ದರೆ ಅಂಥಾ ಐಟಂಗಳು ಯಾವುವು ತಿಳಿಸಿ.

If you go against the advice of the Technical Department, who is responsible for it ? I want to know under what circumstances he has gone against the technical advice from 1962 to 1968 or even 1971.

Sri D. DEVARAJ URS.—That is why I say there was an article which had appeared in the Press.

Sri H. D. DEVE GOWDA.—You please tell it from the records.

Sri D. DEVARAJ URS.—I will give you the names of the Chief Engineers who were working there between what period to what period. I cannot hide these facts. The resultant effect of the planning was...

Sri H. D. DEVEGOWDA.—It must be based only on the technical advice. If it is a defective technical advice then you must charge those who are responsible for that. If it is not a defective technical advice and the administrative decision is a defective one, then you must hold the persons responsible for such a defective decision.

ಶ್ರೀ ಡಿ. ದೇವರಾಜ್ ಅರಸ್.—ಹಾಗಾದರೆ ಚೀಫ್ ಇಂಜಿನಿಯರ್ ಹೇಳಿದರು—ನಾನು ಕೆಲಸ ನಡೆಸಿದೆ ಅಂದರೆ ಅದು ಸರಿಯೇ ? ಇಂಜಿನಿಯರ್ ಅವರು ಏನು ಬೇಕಾದರೂ ಹೇಳಬಹುದು. ಅವರು ಹೇಳಿದ್ದನ್ನೆಲ್ಲಾ ನಾವು ಕೇಳಲೇಬೇಕೆಂಬ ನೇಮ ಎಲ್ಲಿದೆ ? ಆ ವೇಳೆಯಲ್ಲಿ ಚೀಫ್ ಇಂಜಿನಿಯರಾಗಿದ್ದವರು ಅನೇಕ ಜನ ಇದ್ದರು—ಬಸಣ್ಣ ಅವರಿದ್ದರು, ಬಾಳೆಕುಂದ್ರಿ ಅವರಿದ್ದರು ಅದೇನೇ ಇರಲಿ ಅವರು ಅಲ್ಲಿ 25 ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಕಟ್ಟಿಸಿದ್ದಾರೆ. ಆದರೆ ಆದರಲ್ಲಿ ಈ ದಿವಸ ಒಂದು ಹನಿ ನೀರೂ ಕೂಡ ನಿಲ್ಲುತ್ತಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ನಾನೂ ನಾಳೆ ಲೋಕೋಪಯೋಗಿ ಶಾಖೆಗೆ ಮಂತ್ರಿ ಆಗಬಹುದು. ಆದರೆ ನನಗೆ ಆ ಇಲಾಖೆಯನ್ನು ದಕ್ಷತೆಯಿಂದ ನಡೆಸುವಷ್ಟು ಅದಕ್ಕೆ ತಕ್ಕ ವಿದ್ಯೆ ನನಗಿರುವುದಿಲ್ಲ. ಅಂಥಾ ಸಂದರ್ಭದಲ್ಲಿ ನಾನು ನನಗೆ ಇಲಾಖೆ ಮುಖ್ಯಾಧಿಕಾರಿಗಳು ಕೊಡತಕ್ಕ ಅದರಲ್ಲೂ ಆ ಟೆಕ್ನಿಕಲ್ ಅಡ್ವೈಜ್ಸನ್ನು ಪೂರಿ ನಡೆಯುವುದು ಹೇಗೆ ಸಾಧ್ಯ ? ಅವರು ಕೊಡುವ ಅಡ್ವೈಜ್ ಒಳ್ಳೆಯದೇ ಅಥವಾ ಅಲ್ಲವೇ ಅನ್ನುವುದನ್ನು ನಿರ್ಧಾರ ಮಾಡತಕ್ಕವರು ಯಾರು ?

ಶ್ರೀ ಎಚ್. ಎನ್. ನಂಜೇಗೌಡ.—ನಾವು ಉದಾಹರಣೆಗೆ ಹೇಳುವುದಾದರೆ ಒಂದು ಕಡೆ ಒಂದು ಪೇಸನೆರಿ ಡ್ಯಾಮನ್ನೊ ಅಥವಾ ಅರ್ದನ್ ಡ್ಯಾಮನ್ನೋ ಕಟ್ಟಬೇಕಾಗಿ ಬಂದಾಗ ಅಲ್ಲಿ ಆ ಕೆಲಸ ಎಷ್ಟು ಬಂದೋಬಸ್ತಾಗಿ ಆಗುತ್ತದೆಂಬುದು ಅಲ್ಲಿ ಬಳಸತಕ್ಕ ವಸ್ತುಗಳನ್ನು ಅವಲಂಬಿಸಿರುತ್ತೆ. ಆ ವೇಳೆಯಲ್ಲಿ ಇಲಾಖೆ ಅಧಿಕಾರಿಗಳು ಯಾರಿದ್ದರೇನು ? ಅದಕ್ಕೂ ಇದಕ್ಕೂ ಏನು ಸಂಬಂಧ ? ಮಾನ್ಯ ಸದಸ್ಯರು ಏನು ಉದ್ದೇಶವಿಟ್ಟುಕೊಂಡು ಅದನ್ನು ಕೇಳುತ್ತಿದ್ದಾರೆಂಬುದು ನಮಗೂ ಅರ್ಥವಾಗುತ್ತದೆ.

Sri H. D. DEVE GOWDA.—Why do you go to that extent, you have not yet been trained by Sri H. M. Channabasappa.

ಶ್ರೀ ಡಿ. ದೇವರಾಜ್ ಅರಸ್.—ಅಂತೂ ಒಟ್ಟಿನಲ್ಲಿ ಅಲ್ಲಿ ಆಗಿರತಕ್ಕ ಫಲಿತಾಂಶ ಏನು ಎಂದು ದನ್ನು ತಿಳಿಸಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಅದು ಆ ವೀರೇಂದ್ರ ಪಾಟೀಲರ ಪಾಪದ ಫಲವಾದರೆ, ಈ ದಿವನ ದೇಶಾದ್ಯಂತವೂ ಮಳೆ ಇಲ್ಲದೆ ಕ್ಷಾಮಕ್ಕೊಳಗಾಗಿರುವುದಕ್ಕೆ ಕಾರಣ ಈ ದಿವನ ಈ ರಾಜ್ಯದ ಅಡಳಿತ ನಿಮ್ಮ ಕೈಸೇರಿದ್ದರ ಪಾಪದ ಫಲವೆಂದು ನಾನು ಹೇಳುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್.—ಮಾನ್ಯ ಸದಸ್ಯರೂ ಕೂಡ ಮಳೆಯಾಗದ ಜಾಗದಿಂದರೇ ಬರುತ್ತಿದ್ದಾರೆ. ಅದಕ್ಕೆ ಕಾರಣ ಅವರನ್ನು ಅಲ್ಲಿ ಜನರು ಆರಿಸಿದ್ದರಿಂದ ಆ ಕ್ಷೇತ್ರದಗತಿ ಹಾಗಾಯಿತು. ಆದರೆ ನಾವೀಗ ಘಟಪ್ರಭಾ ಪ್ರಾಜೆಕ್ಟಿಗೆ ಧೂಪದಳ್‌ನಿಂದರಾದರೂ ಸ್ವಲ್ಪ ನೀರನ್ನು ತರೋಣ ಎಂದುಕೊಂಡಿದ್ದೇವೆ. ಅದನ್ನು ಈಗ ಪರಿಶೀಲನೆ ಮಾಡುತ್ತಿದ್ದೇವೆ. ನಮಗೆ ಕೇವಲ ನಾಲ್ಕಾರು ಟಿ.ಎಂ.ಸಿ.ಎಫ್.ಟಿ. ನೀರಿದ್ದರೂ ಅದರಿಂದ ಎಷ್ಟೋ ಅನುಕೂಲವಾಗುತ್ತಿತ್ತು. ಅದಕ್ಕಾಗಿ ಮಹಾರಾಷ್ಟ್ರ ಸರ್ಕಾರದವರಿಗೆ ಸುಮಾರು ಆರು ಲಕ್ಷ ರೂಪಾಯಿಗಳಷ್ಟು ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಿ ಕೊಯನಾ ನೀರನ್ನು ಬಿಡುವಂತೆ ಒಂದು ವ್ಯವಸ್ಥೆ ಮಾಡಿಕೊಂಡಿದ್ದೆವು. ಆದರೆ ಆ ನೀರು ನಮ್ಮ ಗಡಿಯನ್ನು ಮುಟ್ಟಬೇಕಾದರೆ 200-300 ಮೈಲಿಗಳ ದೂರ ಬರಬೇಕಾಗಿದೆ. ಹಾಗೆ ಬರತಕ್ಕ ಕಾಲದಲ್ಲಿ ಅಲ್ಲಿಯ ಮಹಾರಾಷ್ಟ್ರದ ಜನರೇ ಆ ನೀರನ್ನೆಲ್ಲಾ ಬಳಸಿಬಿಟ್ಟರು. ನಮ್ಮ ರಾಜ್ಯಕ್ಕೆ ಒಂದು ತೊಟ್ಟು ನೀರೂ ಕೂಡ ಬರಲಿಲ್ಲ. ಈಗ ಅದನ್ನು ಕೈಬಿಟ್ಟೆವು. ಆದರೆ ಹಿಂದಿನ ಸರ್ಕಾರದವರು ಏನೇ ಹಣವನ್ನು ಖರ್ಚುಮಾಡಿರಲಿ ಆ ಡ್ಯಾಮನ್ನು ಇನ್ನೂ ಸ್ವಲ್ಪ ಎತ್ತರಿಸಿದ್ದರೆ ಅನುಕೂಲವಾಗುತ್ತಿತ್ತು. ಆದರೆ ಅದರ ಫೌಂಡೇಷನ್ ಸರಿಇರಲಿಲ್ಲ ಎಂದು ಹೇಳುತ್ತಿದ್ದಾರೆ. ಅದು ನಾವು ಬಂದ ತಕ್ಷಣ ಹೇಗೆ ಸರಿಹೋಯಿತು ?

ನಾವಿನ್ನು ಆ ಮಲಪ್ರಭಾ ಕಥೆಯನ್ನು ತೆಗೆದುಕೊಳ್ಳೋಣ. ಅಲ್ಲಿ ನೀರೇನೊ ನಿಲ್ಲುತ್ತೆ. ಆದರೆ ಅದನ್ನು ಬಳಸುವುದಕ್ಕೆ ಅಲ್ಲಿನ್ನೂ ನಾಲಾಗಳೇ ಸಿದ್ಧವಾಗಿಲ್ಲ. ಹೀಗಾಗಿ ನಾವೀದಿವಸ ಆ ನೀರನ್ನು ಮತ್ತೆ ಕೃಷ್ಣಾ ನದಿಗೆ ಬಿಡಬೇಕಾದ ಅಗತ್ಯ ಉಂಟಾಗಿದೆ.

